ಕೇರಳ ಪಾಠಾವಳಿ

KERALA READER

# ಕನ್ನಡ

# KANNADA

## ಮೂಲ ಪಠ್ಯ

## BASIC TEXT

ತರಗತಿ

IX

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ತಯಾರಿಸಿದವರು**

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ **(SCERT)** ಕೇರಳ

2010

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by*:
State Council of Educational Research and Training (SCERT)
Poojappura, Thiruvananthapuram -12, Kerala.
*Website*: www.scertkerala.gov.in
*e-mail*: scertkerala@asianetindia.com
*Phone* : 0471-2341883, *Fax* : 0471-2341869

*first Edition* : 2010
*Typesetting* : SCERT Computer Lab

©
Government of Kerala
Department of Education

ಪ್ರಿಯ ವಿದ್ಯಾರ್ಥಿಗಳೇ,

ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಶಾಲ ಪ್ರಪಂಚಕ್ಕೆ ನಿಮಗೆ ಹಾರ್ದಿಕ ಸ್ವಾಗತ.

ಕನ್ನಡ ಭಾಷೆಯ ಭವ್ಯತೆ, ಸೊಗಸು ಮತ್ತು ಸವಿಯನ್ನು ಚೆನ್ನಾಗಿ ತಿಳಿದುಕೊಳ್ಳುವ ಸುಸಂದರ್ಭವಿದು.

ಓದುತ್ತಾ ಆಲೋಚಿಸುತ್ತಾ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುತ್ತಾ ಮುಂದುವರಿಯೋಣ.

ನಮ್ಮ ಮನಸ್ಸಿನಲ್ಲಿ ಹೊಳೆಯುವ ಹೊಸ ಆಶಯಗಳನ್ನು ಇತರರಿಗೆ ತಿಳಿಸಬೇಡವೇ?

ಮನಸ್ಸುಗಳ ಸಾಮರಸ್ಯವನ್ನು ಬಲಪಡಿಸಲು ಸಮರ್ಥ ಮಾಧ್ಯಮವೆಂದರೆ ಭಾಷೆ.

ನಮ್ಮ ಪೂರ್ವಿಕರ ಹಲವು ಚಿಂತನೆಗಳನ್ನು ಮತ್ತು ಪಡೆದ ವಿಪುಲವಾದ ಅನುಭವಗಳನ್ನು ನಮ್ಮದಾಗಿಸಲು ಈ ಅಧ್ಯಯನವು ನಮಗೆ ಸಹಕಾರಿಯಾಗುವುದು.

ನಮ್ಮ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಸಾಹಿತ್ಯ ವಾಹಿನಿಯಲ್ಲಿ ಸೇರಿಸಿಕೊಳ್ಳಲು ಈ ಹೊತ್ತಗೆಯು ಕೈದೀವಿಗೆಯಾಗಲಿ.

ಪ್ರೀತಿಪೂರ್ವಕ,

**ಪ್ರೊ. ಎಂ.ಎ. ಖಾದರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

STD. IX - KANNADA BT

Advisor

Dr. P. Srikrishna Bhat, . Professor (Rtd), Govt. College, Kasaragod.

Chairman

C.H. Rama Bhat, HOD Kannada, Govt. College, Kasaragod.

## Participants

S. Amitha, Lecturer, GPM Govt. College, Manjeshwar.
E. Chandrahasa, HSST, GHSS, Bekur.
M. Gurumoorthi, HSA, GHSS, Mangalpady.
D. Ramanna, HSA, GHSS, Adoor.
Dr. Radhakrishna Belluru, Lecturer, Govt. College, Kasaragod.
Dr. K. Subrahmanya Bhat, Rtd. Prof. Govt. College, Kasaragod.

Academic Co-ordinator

Dr. M. Sasi Nadar, Asst. Prof., SCERT.

Artist
Venkatakrishna Bhat, LDC, SHSS, Edneer.

Experts

Dr. Harikrishna Bharanya, HOD Kannada, MK University, Madurai.

Dr. Mahalinga Bhat, HOD Kannada, St. Aloysius College, Mangalore.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ 695012

# ಅನುಕ್ರಮಣಿಕೆ

**ಪುಟ ಸಂಖ್ಯೆ**

**1. ಕೂಡಿಬಾಳಿದರೆ ಸ್ವರ್ಗ ಸುಖ ........................................... 7**

- ಗೆಳೆಯರಿಬ್ಬರ ಕಥೆ ........................................................ 8
- ಬಸವಣ್ಣನವರು ಕಟ್ಟಬಯಸಿದ ಸಮಾಜ ............................ 15
- ನಾಡಿನ ಏಕತೆ ............................................................ 20

**2. ಉದ್ಯೋಗ – ನೆಮ್ಮದಿ ................................................. 23**

- ಮೃಗ ಜಲ ................................................................ 25
- ಶ್ರಮ – ಸಂಸ್ಕೃತಿ ......................................................... 28
- ಬೆಟ್ಟದ ಮೇಲೊಂದು ಮನೆಯ ಮಾಡಿ .............................. 29

**3. ದುಶ್ಚಟಗಳಿಂದ ದೂರಕ್ಕೆ ............................................... 33**

- ಸರ್ವಜ್ಞನ ವಚನಗಳು ..................................................... 35
- ಕುಡಿತದ ಕೆಡುಕುಗಳು .................................................... 36
- ಕುಡುಕ ಕರಿಯಪ್ಪ .......................................................... 40

# ಭಾರತದ ಸಂವಿಧಾನ

ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ. –**

(1) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(2) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(3) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(4) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(5) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(6) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(7) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(8) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

(9) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(10) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(11) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ ಅಥವಾ ಆಯಾ ಸಂದರ್ಭಾನುಸಾರ, ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1

# ಕೂಡಿಬಾಳಿದರೆ ಸ್ವರ್ಗ ಸುಖ

‘ಧರ್ಮಗಳ ಗುರಿ – ಹೋರಾಟವಲ್ಲ ಸೌಹಾರ್ದ, ವಿನಾಶವಲ್ಲ ಸ್ವೀಕಾರ, ವೈಮನಸ್ಸು ಅಲ್ಲ ಸಾಮರಸ್ಯ ಮತ್ತು ಶಾಂತಿ’

***– ಸ್ವಾಮಿ ವಿವೇಕಾನಂದ***

‘ದಯೆ ಮತ್ತು ಸತ್ಯಗಳು ಪರಸ್ಪರ ಕೂಡುತ್ತವೆ, ಧರ್ಮ ಮತ್ತು ಶಾಂತಿಗಳು ಒಂದಕ್ಕೊಂದು ಪೂರಕವಿರುತ್ತವೆ’

***– ಬೈಬಲ್***

ದೇವದಾಸರಾದ ಓ ಮಾನವರೇ ನೀವು ಪರಸ್ಪರ ಅಸೂಯೆಪಡಬೇಡಿ, ಮೋಸ ಮಾಡಬೇಡಿ, ಹಗೆತನ ಬೆಳೆಸಿಕೊಳ್ಳಬೇಡಿ, ಸಹೋದರರಾಗಿ ಬಾಳಿರಿ.

***– ಮುಹಮ್ಮದ್ ಪೈಗಂಬರರು***

❑ ಈ ಮೇಲಿನ ಮಾತುಗಳು ಇಂದಿನ ಸಮಾಜಕ್ಕೆ ಎಷ್ಟರ ಮಟ್ಟಿಗೆ ಮಾರ್ಗದರ್ಶಕಗಳಾಗಿವೆ? ನಿಮ್ಮ ಅಭಿಪ್ರಾಯವನ್ನು ತರಗತಿಯಲ್ಲಿ ಮಂಡಿಸಿರಿ.

## ಗೆಳೆಯರಿಬ್ಬರ ಕಥೆ

ನನಗೆ ಅಬ್ದುಲ್ಲನ ಪರಿಚಯ ಮಾಡಿಕೊಟ್ಟದ್ದು ನನ್ನ ಗ್ರಾಮದ ಶಾಲೆ. ಶಾಲೆಯಲ್ಲಿ ತಂಟೆ ಮಾಡದ ದಡ್ಡನಿಗೂ ಕಲಿಯುವ ತುಂಟನಿಗೂ ಒಂದೇ ತೆರನಾದ ಸಂಭಾವನೆ. ಇಡೀ ಶಾಲೆಯಲ್ಲಿ ನಮ್ಮಿಬ್ಬರಷ್ಟು ಮೈ ಹದ ಮಾಡಿಸಿಕೊಂಡವರು ಬೇರಾರು ಇರಲಿಲ್ಲ. ಬೆತ್ತಗಳಿಗೂ ನಮಗೂ ರಕ್ತಸಂಬಂಧವೇ ಇದ್ದಿರಬೇಕು. ಈ ಕಾರಣದಿಂದ ನನಗೆ ಅಬ್ದುಲ್ಲನಲ್ಲಿಯೂ ಅಬ್ದುಲ್ಲನಿಗೆ ನನ್ನಲ್ಲಿಯೂ ಸಹಾನುಭೂತಿ ಉಂಟಾಯಿತು.

ನಾನೂ ಅಬ್ದುಲ್ಲನೂ ಆ ಶಾಲೆಯಲ್ಲಿ ಹೆಚ್ಚುಕಾಲ ಒಡನಾಡಿರಲಿಲ್ಲ. ‘ಇಂಗ್ಲಿಷು ಬರೆಹ’ ಕ್ಕಾಗಿ ನನ್ನನ್ನು ಪುತ್ತೂರಿಗೆ ಕಳುಹಿಸಿದರು. ಅಬ್ದುಲ್ಲ ಏನು ಮಾಡುತ್ತಿದ್ದನು ಎಂದು ನಾನರಿಯೆ. ಆದರೆ ಮಾಸ್ತರರ ಬೆತ್ತದ ದ್ವಾರಾ ನಮ್ಮಲ್ಲಿ ಉಂಟಾದ ಪ್ರೇಮವು ಸರ್ವಥಾ ಕುಂದಲಿಲ್ಲ. ನಾನು ರಜೆಯಲ್ಲಿ ಮನೆಗೆ ಬಂದಾಗ ಒಂದು ದಿನವಾದರೂ ಅಬ್ದುಲ್ಲನನ್ನು ಕಾಣದೆ ಇಲ್ಲ. ಇಬ್ಬರೂ ಒಂದಾಗಿ ಕಾಡುಗುಡ್ಡಗಳಲ್ಲಿ ಅಲೆದಾಡುವುದು ; ಮರ ಹತ್ತುವುದು ; ದರೆಹಾರುವುದು ; ಕಲ್ಲಾಟವಾಡುವುದು ; ಸರಿಮುಗುಳಿ ಹಿಡಿಯುವುದು ; ಬಾಳೆನಾರಿನ ಚೆಂಡನ್ನು ಒದೆಯುವುದು ಇದೆಲ್ಲ ನಿತ್ಯಾಭ್ಯಾಸ. ಒಮ್ಮೊಮ್ಮೆ ಅಬ್ದುಲ್ಲನ ಮನೆಗೆ ನಾನೂ ನನ್ನ ಮನೆಗೆ ಅಬ್ದುಲ್ಲನೂ ಹೋಗುವುದು ಬರುವುದು ಇತ್ತು. ಅಬ್ದುಲ್ಲನ ತಾಯಿ ಪಾತುಮ್ಮ ನನಗೆ ಅವಲಕ್ಕಿ ತಾಳೆಬೆಲ್ಲಗಳನ್ನು ಕೊಟ್ಟರೆ ನನ್ನಮ್ಮ ಅಬ್ದುಲ್ಲನಿಗೆ ಕಾಫಿ ದೋಸೆ ಕೊಡದೆ ಇರುತ್ತಿರಲಿಲ್ಲ. ಹೀಗೆ ವರ್ಷಗಳು ಸಂದುವು. ಪುತ್ತೂರಿನಲ್ಲಿ ಕಲಿಯಬಹುದಾದುದನ್ನು ಕಲಿತುದಾಯಿತು.

ಕೆಲಸಕ್ಕಾಗಿ ಹೊರಡುವ ಕಾಲ ಬಂತು. ಈ ಸುದ್ದಿಯನ್ನು ಕೇಳಿ ಅಬ್ದುಲ್ಲ ನನ್ನ ಬಳಿಗೆ ಓಡಿಬಂದು “ರಾಮಣ್ಣ! ಒಮ್ಮೆ ನಮ್ಮ ಮನೆಗೆ ಬರಬೇಕಂತೆ!” ಎಂದ. ಆ ದಿನ ಸಂಜೆ ಅಲ್ಲಿಗೆ ಹೋದೆ. ಪಾತುಮ್ಮ ನನಗೆ ದಿವ್ಯವಾದ

ಆರೋಗಣೆಗೆ ಅಟ್ಟಣೆ ಮಾಡಿದ್ದಳು. ಎಳನೀರು, ಸಕ್ಕರೆ, ಬಾಳೆಹಣ್ಣು, ಒಂದು ಪಿಂಗಾಣಿ ಬಟ್ಟಲಲ್ಲಿ ತುಂಬ ಹುರಿಗಡಲೆ! ನನಗೆ ಕೊಟ್ಟುದರಲ್ಲಿ ಒಂದಂಶ ಅಬ್ದುಲ್ಲನಿಗೂ ಸಿಕ್ಕಿತು. ಇಬ್ಬರೂ ತಿಂದು ತೇಗಿದೆವು. ತಿನ್ನುತ್ತಿದ್ದಾಗ ಪಾತುಮ್ಮ ಬಳಿಯಲ್ಲಿಯೇ ನಿಂತು ನಾನು ತಿನ್ನುತ್ತೇನೋ ಇಲ್ಲವೋ? ಉಪಚಾರಕ್ಕಾಗಿ ತಿನ್ನುತ್ತೇನೋ, ಪ್ರೀತಿಯಿಂದ ತಿನ್ನುತ್ತೇನೋ ಎಂಬುದನ್ನು ಎವೆಯಿಕ್ಕದೆ ನೋಡುತ್ತಲೇ ಇದ್ದಳು. ನಾನು ತಿಂದು ಮುಗಿಸುವಾಗ ಅವಳ ಕಣ್ಣುಗಳು ಒದ್ದೆಯಾದುದನ್ನು ಕಂಡೆ. ನನ್ನ ಹೃದಯವೂ ಒದ್ದೆಯಾಯಿತು. ಅವಳು ಯಾರೋ ನಾನು ಯಾರೋ? ಹೀಗಿದ್ದರೂ ಪಡೆದ ತಾಯಿಗಿಂತ ಹೆಚ್ಚಾದ ಮಮತಾಪೂರ್ಣ ದೃಷ್ಟಿಯಿಂದ ನನ್ನನ್ನು ನೋಡುತ್ತಾಳಲ್ಲ! ಯಾವ ಪೂರ್ವಜನ್ಮ ಸಂಬಂಧವೋ ಇದು! ಎಂದು ಮನಸ್ಸಿಗೆ ತೋರಿತು. ಹೋಗುತ್ತೇನೆ ಪಾತುಮ್ಮ! ಎನ್ನುವಾಗ ನನ್ನ ಧ್ವನಿ ನಡುಗಿತು. ಹೊರಟು ಬರುವಾಗ ಪಾತುಮ್ಮ ಸಮೀಪಕ್ಕೆ ಬಂದು, “ನಿನ್ನ ತಮ್ಮ ಅಬ್ದುಲ್ಲನನ್ನು ಮರೆಯಬೇಡ ರಾಮಣ್ಣ, ನನಗೆ ಯಾರೂ ಗತಿಯಿಲ್ಲ. ಅಲ್ಲಿ ಅಲ್ಲನೊಬ್ಬ....... ಇಲ್ಲಿ ಇವನೊಬ್ಬ.......... ನೀನು ನಾಲ್ಕು ಓದು ಕಲಿತವ. ಇವನು ಹೋದಲ್ಲಿ ಅದಿಲ್ಲ. ಬೊಂಬಾಯಿಗೆ ಹೋಗಿ ದೊಡ್ಡ ಚಾಕರಿ ನೋಡು ಮಗ........ ನೀನು ದೊಡ್ಡವನಾದಾಗ ಈ ಬಡ ತಮ್ಮನನ್ನು ಮರೆಯಬೇಡ.......... ಪಾತುಮ್ಮನಿಗೆ ಕಾಡು ಹತ್ತಿರವಾಯಿತು; ಊರು ದೂರವಾಯಿತು. ಈ ಹಾಳು ಬುದ್ಧಿಯ ಪೋರನಿಗೆ ಏನಾದರೂ ಕೆಲಸ ಮಾಡಿಸಿಕೊಟ್ಟರೆ ನಾಲ್ಕು ವರ್ಷ ಹೆಚ್ಚು ಬದುಕಿಯೇನು, ಮತ್ತೇನೂ ಇಲ್ಲ ಇವನಿಗೆ......... ಕೈಕಾಲುಗಳಾದರೂ ಗಟ್ಟಿಯಾಗಿವೆ.....” ಎಂದು ನಡುಗುವ ಧ್ವನಿಯಲ್ಲಿ ಆಡಿದಳು.

“ಆಗಲಿ ಪಾತುಮ್ಮ! ಅಲ್ಲಿಗೆ ಹೋದ ಮೇಲೆ ತಿಳಿಸುತ್ತೇನೆ” ಎಂದೆ. ನನ್ನನ್ನು ಕಳುಹಿಸಿಕೊಡುವುದಕ್ಕಾಗಿ ಅಬ್ದುಲ್ಲ ನಮ್ಮ ಮನೆಯ ಮುಂದಿನ ಸುಗ್ಗಿ ಗದ್ದೆಯ ಅಂಚಿನವರೆಗೆ ಬಂದ. “ಹೋಗುತ್ತೇನೆ ರಾಮಣ್ಣ........ ನನ್ನನ್ನು ಮರೆಯುವುದಿಲ್ಲವಷ್ಟೆ” ಎನ್ನುತ್ತ ಕಣ್ಣೀರು ಸುರಿಸಿದ. “ಹೇಗೆ ಮರೆತೇನು ಅಬ್ದುಲ್ಲ!” ಎಂದಾಗ ಮುಖವೂ ಕೆಂಪಾಗಿದ್ದಿರಬೇಕು.

ಬಾಲ್ಯದಲ್ಲಿ ಕುಡಿಬಿಟ್ಟ ಸ್ನೇಹ ಒಣಗಿಹೋಗುವುದುಂಟೇ? ನನ್ನಂತೆ – ಅಬ್ದುಲ್ಲನಂತೆ. ಹೊರಗಿನ ಭೇದಗಳನ್ನು ಮರೆತು, ಸುಖದುಃಖಗಳನ್ನು ಹಂಚಿಕೊಂಡು ಒಡನಾಡಿದವರು ಒಬ್ಬೊಬ್ಬರು ಮರೆಯುವುದುಂಟೇ? ನನ್ನ ಪ್ರಯತ್ನದಿಂದ ಬೊಂಬಾಯಿಯಲ್ಲಿ ಅವನಿಗೊಂದು ಕೆಲಸ ಸಿಕ್ಕಿತು. ಅದರಲ್ಲಿ ಅವನು ತೃಪ್ತಿ ಹೊಂದದೆ 'ಕಲಾಸಿ'ಯಾದನಂತೆ, ಏನು ಕಲಾಸಿಯೋ ಎಲ್ಲಿ ಸೇರಿದನೋ ನಾನರಿಯೆ. ಬೊಂಬಾಯಿಗೆ ಹೋದ ಮೇಲೆ ಅಬ್ದುಲ್ಲ ಮನೆಯ ಕಡೆ ಸುಳಿದು ಮೆಟ್ಟಲಿಲ್ಲ. ಪಾತುಮ್ಮ ಕರಗಿದಳು; ಸೊರಗಿದಳು. ಮೊದಲೇ ಕ್ಷೀಣವಾಗಿದ್ದವಳು ಬಿಸಿಲಲ್ಲಿ ಬಿದ್ದ ಕಾಷ್ಠದಂತೆ ಒಣಗಿದಳು. ನಾನು ಊರಿಗೆ ಹೋದಾಗಲೆಲ್ಲ, ನನ್ನ ಸಮಯವನ್ನು ನಿರೀಕ್ಷಿಸಿ, ನನ್ನ ಬಳಿಗೆ ಬಂದು ತನ್ನ ಹಂಬಲವನ್ನೇ ಹೇಳುತ್ತಿದ್ದಳು.

* * * * * *

ತಾಯಿಯ ಪತ್ರ ಬಂದ ಮೇಲೆ ಹಲವಾರು ಬಾರಿ ಕೆರೆಕೋಡಿ ಅಬ್ದುಲ್ಲನ ಪತ್ತೆಹಚ್ಚಲು ಪೇಚಾಡಿದೆ. ಪ್ರಯೋಜನವಾಗಲಿಲ್ಲ. ನಮ್ಮೂರವರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳುತ್ತಿದ್ದರು. ಅದನ್ನೆಲ್ಲ ಕೇಳಿ ಮಾಡುವುದಾದರೂ ಏನು? ನನ್ನ ತಾಯಿಗೆ ನನ್ನಲ್ಲಿರುವ ವಾತ್ಸಲ್ಯವನ್ನೂ ಅವನ ತಾಯಿಗೆ ಅವನಲ್ಲಿರುವ ವಾತ್ಸಲ್ಯವನ್ನೂ ತೊಲೆಯಲ್ಲಿಟ್ಟು ತೂಗಿದರೆ ಹೆಚ್ಚು ಕಡಿಮೆ ಕಂಡೀತೇ? ಜೇನು ಯಾವ ಪುಷ್ಪಕೋಶದಲ್ಲಿದ್ದರೂ ಜೇನೆ. ಬಂಗಾರ ಯಾವ ಅದುರಲ್ಲಿದ್ದರೂ ಬಂಗಾರವೇ. ಆ ತಾಯಿಯ ಹಂಬಲು ಹಾರೈಕೆಗಳೂ ಕಣ್ಣೀರು ನಿಟ್ಟುಸಿರುಗಳೂ ಈ ತಾಯಿಯವುಗಳಿಂದ ಬೇರಾಗಿರಬಹುದೇ? ಆಕೆಯ ಪ್ರೀತಿ ಸಂಕಟದ ಎದೆ ಬಡಿತ ನನ್ನ ತಾಯಿಯದಕ್ಕಿಂತ



ಕಡಿಮೆ ಆವೇಗವುಳ್ಳದಾಗಿರಬಹುದೆ? ಎಂದೂ ಇಲ್ಲ. ಮಕ್ಕಳು ಮುಖಕ್ಕೆ ಮುಸುಕು ಹಾಕಿ ಗುಮ್ಮನಾಟವಾಡುವಂತೆ ನಾವು ಧರ್ಮದ ಮುಸುಕಿನಲ್ಲಿ ಪರಸ್ಪರವಾಗಿ ಬೆದರಿಸುತ್ತೇವೆ. ಆದರೆ ನಮ್ಮ ಹಳ್ಳಿಗೆ ಕಾಲಿಟ್ಟೊಡನೆ ನಾವು ಅಣ್ಣ ತಮ್ಮಂದಿರಲ್ಲವೆ? ನಾವು ಒಡಗೂಡಿದ ಶಾಲೆ, ಹಣ್ಣು ತಿಂದ ಚೂರಿ ಮುಳ್ಳು ಗಿಡ, ಸುತ್ತಿದ ಮಜಲು, ಹಾರಿದ ದರೆ, ಏರಿದ ಗುಡ್ಡ – ಎಲ್ಲವೂ ನಮ್ಮನ್ನು "ಇಲ್ಲಿಯೇ ನಿಮ್ಮ ಮನೆ; ಇಲ್ಲಿಯೇ ನಿಮ್ಮ ಜೀವದ ಬೇರು; ಈ ಹೊಲದ ಮುದ್ದು ಕೂಸುಗಳು ನೀವು; ಒಂದೇ ಹೊಟ್ಟೆಯಿಂದ ಹೊರಟು ಬಂದ ಅಣ್ಣ ತಮ್ಮಂದಿರು ನೀವು" ಎಂದು ಕೂಗಿ ಕರೆಯುವಾಗ "ಅಲ್ಲ" ಎನ್ನುವುದು ಸಾಧ್ಯವೇ? ಪಾತುಮ್ಮನಿಗೆ ಪುತ್ರದಾನ ಮಾಡುತ್ತೇನೆ – ಎಂದು ಹುಡುಕಾಡಲು ನಿರ್ಧರಿಸಿದೆ.

ನಮ್ಮ ಮಾಗಣೆ ಶ್ಯಾನುಭಾಗರು ಅಣ್ಣಪ್ಪಯ್ಯನವರ ಮಗ ನಾರ್ಣಪ್ಪಯ್ಯನವರು, 'ಎ.ಎಸ್. ಬಾಳೂರ್ ಕಂಪೆನಿ' ಎಂಬ ಹೆಸರಲ್ಲಿ ಪಿಂಗಾಣಿಯ ಹರದನ್ನು ಸಾಗಿಸುತ್ತಿದ್ದಾರೆಂದು ನನಗೆ ಗೊತ್ತು. ಹಲವು ವೇಳೆ ಅವರು ನನ್ನನ್ನು ಕಂಡುದೂ ಉಂಟು. ಆಗಾಗ ಗಲಭೆ ನಡೆಯುವ  ಬೀದಿಯ ಒತ್ತಿನಲ್ಲಿಯೇ  ಅವರ ಅಂಗಡಿ ಮಂಡಿ. 'ಹೋಗುವುದೂ ಬರುವುದೂ ಅಪಾಯಕರ, ನೇರಾದ ದಾರಿಯನ್ನು ಬಿಟ್ಟು ಸುತ್ತಾಡಿಯಾದರೂ ಬಾಳೂರರಲ್ಲಿಗೆ ಹೋಗಿ ಬರೋಣ' ಎಂದು ತೋರಿತು. ಒಂದೆರಡು ವರ್ಷಗಳ ಹಿಂದೆ ಸಟ್ಟಾ ಆಡುತ್ತಿದ್ದ ಅಬ್ದುಲ್ಲನ ಕತೆಯನ್ನು ಅವರೇ ನನಗೆ ಹೇಳಿದ್ದರು. ವ್ಯಾಪಾರಿಗಳಿಗೆ ತಿಳಿಯದುದಿಲ್ಲ, ಅವರೋದದ ಜಾತಕವಿಲ್ಲ.
ಬಾಳೂರರ ಮಾತನ್ನು ಕೇಳಿ ಮನಸ್ಸಿನಲ್ಲಿ ಅಬ್ದುಲ್ಲನ ಸ್ಮರಣೆಯನ್ನೇ ಆತುಕೊಂಡು ಅಲ್ಲಿಂದ ಹೊರಟೆ.

ಬಾಳೂರರಲ್ಲಿಗೆ ಹೋದುದರಿಂದ ಮತ್ತೆ ಯಾವ ಲಾಭವಾಗದಿದ್ದರೂ ಒಂದು ತಿಳುವಳಿಕೆಯಾಯಿತು. ದ್ವೇಷಭಾವ ಮೈಯನ್ನು ಮಾತ್ರ ಅಂಟಿರುವುದಿಲ್ಲ. ಹಲವರ ಜೀವನದ ಆಳದಲ್ಲಿ ಬೇರುಬಿಟ್ಟಿದೆ, ಒಬ್ಬನಿಗೆ ಇನ್ನೊಬ್ಬನಲ್ಲಿ ನಂಬಿಕೆಯಿಲ್ಲ. ಒಂದು ಧರ್ಮದವನು ಇನ್ನೊಂದು ಧರ್ಮದವನು ಬದುಕಲು ಅರ್ಹನಾದ ವ್ಯಕ್ತಿಯೆಂದು ಎಣಿಸಲಾರ. ಆತನಲ್ಲಿ ಗುಣವಿರಬಹುದೇ? ಹುಡುಕಲಾರ. ಇದ್ದರೆ ಆ ಗುಣವು ಗುಣವೆಂದು ಒಪ್ಪಲಾರ. ಅನ್ಯ ಧರ್ಮೀಯವನಲ್ಲಿ ಗುಣವನ್ನರಸುವವನು; ಸ್ವಧರ್ಮದ್ರೋಹಿ ಎನ್ನುವಂತಹ ಪಾಪಬುದ್ಧಿಯನ್ನು ಬೆಳೆಯಿಸಿಕೊಂಡಿದ್ದಾರೆ ಜನರು. ಈ ಯಾತನಾಮಯವಾದ ಅನುಭವವು ನನಗಾದುದು ಇಂದೇ, ಶತ್ರುಗಳು ಅಭಿಯೋಗಿಸುವರೆಂಬ ನಿರೀಕ್ಷಣೆಯಿಂದ ಕೋಟೆಗಾವಲಿನ ಭಟರು ಎಚ್ಚರದಲ್ಲಿರುತ್ತಾರೆ. ಸೈನಿಕರು ಕೋವಿ ಮದ್ದುಗಳನ್ನು ಬೆಚ್ಚಗಾಗಿ ಕಾದುಕೊಂಡಿದ್ದಾರೆ. ಇಷ್ಟಾದ ಮೇಲೆ ನನ್ನಂಥವರು ಮಾಡುವುದಕ್ಕೇನೂ ಇಲ್ಲ. ಸಾಧ್ಯವಾದರೆ ತಿವಿಯುವುದು. ಇಲ್ಲವಾದರೆ ಪಲಾಯನ ಮಾಡುವುದು. ನಾನಲ್ಲಿಗೆ – ಬಾಳೂರರಲ್ಲಿಗೆ ಹೋಗಿದ್ದಾಗ ಅಬ್ದುಲ್ಲಾನಂಥವನೊಬ್ಬನನ್ನು ಕಂಡೆ. ನನ್ನ ಹುಚ್ಚು ಮಮತೆ ಅಬ್ದುಲ್ಲನ ರೂಪವನ್ನು ಹೊಂದಿರಬಹುದು. ಮನಸ್ಸಿನೊಳಗೆ ಅಬ್ದುಲ್ಲನ ಚಿತ್ರವೊಂದೇ ಇರುವಾಗ ಕಂಡವರೆಲ್ಲಾ ಅಬ್ದುಲ್ಲರಾಗಿ ಕಾಣುತ್ತಿರುವುದು ಸೋಜಿಗವೇನೂ ಅಲ್ಲ. ಬಾಳೂರರ ಮಾತೇ ನಿಜವಿರಬಹುದು. ಸ್ವಧರ್ಮೀಯರ ಮಧ್ಯದಲ್ಲಿ ಎಂತಹ ಸ್ಥಿತಿಯಿದೆ ಎಂಬ ಅನುಭವ ನನಗಿದೆ. ಅಬ್ದುಲ್ಲನ ಧರ್ಮಬಂಧುಗಳ ಮಧ್ಯದಲ್ಲಿ ಎಂತಹ ಅಗ್ನಿ ಕುಂಡ ಉರಿಯುತ್ತಿದೆಯೋ? ಯಾರು ಬಲ್ಲರು? ನಾನು ಅವನನ್ನು ಕಾಣುವ ಹಾಗಿಲ್ಲ. ಅವನು ನನ್ನನ್ನು ಹುಡುಕಿ ಬರುವ ಹಾಗಿಲ್ಲ.

ನಾನು ಬಾಳೂರರನ್ನು ಕಂಡುಬಂದ ಮರುದಿನವೇ ನಗರದ ಕೆಲಭಾಗಗಳಲ್ಲಿ ಅವಾಂತರಗಳಾದುವಂತೆ. ಅಪಾಯ ಸ್ಥಳಗಳಿಂದ ಜನರು ಬುಡಕಿತ್ತು ಹೋಗತೊಡಗಿದರು. ಒಂದು ಮೋಟಾರ್ ಬಂಡಿಯನ್ನೇರಿದ ಕೆಲ ಹತ್ಯಾಕಾರಿಗಳು ಉದ್ದಕ್ಕೂ ಗುಂಡು ಹಾರಿಸುತ್ತಾ ನಡೆದರೆಂದೂ, ಹತ್ತೆಂಟು ಜನರನ್ನು ಕೊಂದರೆಂದೂ, ನೂರಾರು

ಜನರನ್ನು ಗಾಯಗೊಳಿಸಿದರೆಂದೂ, ಕಾರನ್ನು ಎಲ್ಲಿಯೋ ಒಗೆದು ಮಹಾನಗರದ ಸಂದಣಿಯ ಮಧ್ಯದಲ್ಲಿ ತಲೆತಪ್ಪಿಸಿಕೊಂಡರೆಂದೂ ಸುದ್ದಿ ಹರಡಿತು.

ಮುಂದಿನ ದಿನಗಳು ಹೇಗೆ ಕಳೆದವೋ ನನಗೆ ಯೋಚನೆ ಹಿಡಿಯಿತು. ಜನರು ಓಡಾಟಕ್ಕೆ ತೊಡಗಿದ್ದಾರೆ. ಪೋಲೀಸರೂ ದಂಡಾಳುಗಳೂ ಸರ್ಪಗಾವಲನ್ನಿಟ್ಟಿದ್ದಾರೆ. ಅಪ್ಪಿತಪ್ಪಿ ಒಂದಡಿ ಅತ್ತಿತ್ತ ಇಟ್ಟರೆ ಅಪಾಯ. ಜೀವವನ್ನು ಉಳಿಸಿಕೊಳ್ಳಲು ಬಹಳ ಜಾಗ್ರತೆ ಬೇಕಾಗಿತ್ತು. ಯಾವುದರ ಬಗ್ಗೆ ಶ್ರಮಪಡಬೇಕಾಗುತ್ತದೊ, ಅದು ಭಾರವಾಗಿಯೂ ತೋರುತ್ತದೆ. ಪ್ರಾಣವನ್ನು ಶ್ರಮದಿಂದ ಹೊರಬೇಕಾಗಿದೆ. ಬೊಂಬಾಯಿಯಲ್ಲಿ ನಾನೀಗ ಇರುವುದು ಅವಶ್ಯವಾಗಿರಲಿಲ್ಲ. ಇಲ್ಲದಿರಲು ಉಪಾಯವಿಲ್ಲ. ಹೋಗುವ ದಾರಿ ಕಟ್ಟಿಹೋಗಿದೆ. ಉಗಿಬಂಡಿಯಲ್ಲಿ ಸ್ಥಳವಿಲ್ಲ; ಬೇರೆ ಮಾರ್ಗವಿಲ್ಲ. ಬೊಂಬಾಯಿಯನ್ನು ಹೇಗೋ ಬಿಡುತ್ತೇನೆ. ಬಿಡುವವರೆಗೆ ತಾಯಿಯ ಒಡವೆಯಾದ ನನ್ನೀ ಪ್ರಾಣವನ್ನು ಹೇಗಾದರೂ ಕಾಪಾಡುತ್ತೇನೆ ಎಂದು ಕೋಣೆಯಿಂದ ಹೋಟೇಲಿಗೂ ಹೋಟೇಲಿನಿಂದ ಕೋಣೆಗೂ ಮಾತ್ರ ಸುಳಿದಾಡಿ, ಉಳಿದ ವೇಳೆಯನ್ನು ಬಾಗಿಲು ಬಲಿತ ಕೋಣೆಯೊಳಗೆ ಕಳೆಯುತ್ತಿದ್ದೆ. ಇಡೀ ಹೊತ್ತನ್ನು ಹೇಗೆ ಕಳೆಯುವುದಕ್ಕಾಗುತ್ತದೆ? ಮೌನವಾಗಿ ಕುಳಿತು ಆಲೋಚಿಸುತ್ತಲೂ ವ್ಯಥೆಯ ಭಾರವನ್ನು ಹೆಚ್ಚಿಸುತ್ತಲೂ ಇದ್ದೆ. ಈ ವ್ಯಥೆಯಲ್ಲಿ ಅಬ್ದುಲ್ಲನಿಗೆ ಒಂದು ಪಾಲು ದೊರೆಯದಿರುತ್ತಿರಲಿಲ್ಲ. ಅಬ್ದುಲ್ಲ ಬಂದಿದ್ದರೆ ಚೆನ್ನಾಗಿತ್ತು; ಕಂಡಿದ್ದರೆ ಚೆನ್ನಾಗಿತ್ತು. ಆದರೆ ಇದೆಲ್ಲ ಅಸಂಭವ; ಎಲ್ಲಿ ಸತ್ತನೋ, ಏನಾದನೋ ಯಾರು ಬಲ್ಲರು? ಆತ್ಮರಕ್ಷಣೆಯೊಂದೇ ಸದ್ಯದ ಕರ್ತವ್ಯ.

ಸಾಯಂಕಾಲ ಘಂಟೆ ಎಂಟಾಗಿದೆ. ಹೋಟೇಲಿನಲ್ಲಿ ಊಟ ತೀರಿಸಿ ಕೋಣೆಯ ಕಡೆಗೆ ಹೆಜ್ಜೆ ಹಾಕುತ್ತಿದ್ದೆ. ಸುತ್ತುಮುತ್ತಲೂ ಕಣ್ಣು ಹಾಯಿಸುತ್ತಾ ಯಾರಾದರೂ ಬರುವರೇ? ಏನಾದರೂ ಆಗುವುದೇ? ಎಂದು ಪರೀಕ್ಷಿಸುತ್ತಾ ಹೋಗುತ್ತಿದ್ದೆ. ಕಣ್ಣಳತೆಯ ವಿಸ್ತಾರದಲ್ಲಿ ದೃಷ್ಟಿಯನ್ನಿಟ್ಟು ಶೋಧಿಸುತ್ತಲೇ ಇದ್ದೆ. ಚೂರಿಯೊಂದು ಸದಾ ಜೇಬಿನೊಳಗಿತ್ತು, ನನ್ನ ಅಂಗರಕ್ಷಣೆಗಾಗಿ. ಬೀದಿಯ ಎರಡೂ ಕಡೆಗಳಲ್ಲಿ ಎತ್ತರದ ಕಟ್ಟಡಗಳು. ವಿದ್ಯುಚ್ಛಕ್ತಿಯ ದೀಪ ಬೆಳಗುತ್ತಿದ್ದರೂ, ಅಲ್ಲಲ್ಲಿ ದಟ್ಟವಾದ ನೆರಳೂ ಬೀಳುತ್ತಿತ್ತು. ಜನರ ಓಡಾಟವೂ ಇತ್ತು. ನಾನು ಬಲು ಎಚ್ಚರದಿಂದ, ಜನರ ಗುಂಪನ್ನು ದೂರವೇ ಬಿಟ್ಟು ಆದಷ್ಟು ತ್ವರಿತವಾಗಿ ಕೋಣೆಯ ಕಡೆಗೆ ಬರುತ್ತಿದ್ದೆ. ಇನ್ನೂರು ಗಜ ಬಂದೆನೋ ಇಲ್ಲವೋ! ರಸ್ತೆಯ ಪಕ್ಕದಲ್ಲಿದ್ದ ಒಂದು ಚಿಕ್ಕ ಮರದಡಿಯ ನೆರಳಿನಿಂದ ಇನ್ನೊಂದು ನೆರಳು ಒಡೆದು ಬೇರಾಗಿ ಚಲಿಸುವ ಹಾಗೆ ತೋರಿತು. ಚಲಿಸಿದುದು ಮಾತ್ರವಲ್ಲ; ನನ್ನ ಕಡೆಗೇ ಚಲಿಸುವಂತಿತ್ತು. ಕೂಲಂಕಷ ವಿಚಾರಿಸುವ ಆವಶ್ಯಕತೆಯೇನು? ಕಾಲಿನ ವೇಗವನ್ನು ಹೆಚ್ಚಿಸಿದರಾಯಿತು; ಹೆಚ್ಚಿಸಿದೆ. ಅದರ ವೇಗವು ಹೆಚ್ಚಿತು. ಆ ನೆರಳಿನ ಎಡ ಬಲಗಳಲ್ಲಿ ಜನರು ಹೋಗುವುದು ಬರುವುದು ತೋರುತ್ತಿತ್ತು. ಆದರೆ ಆ ನೆರಳು ಮಾತ್ರ ನನ್ನ ವೇಗ ಹೆಚ್ಚಿಸುವುದಷ್ಟೆ! ಇದೇನು ಸೋಜಿಗ! ಅಪಾಯವನ್ನು ಶಂಕಿಸಲೇ? ಬೊಬ್ಬೆ ಹೊಡೆಯಲೇ? ಅವಿವೇಕವಾದೀತು. ಆ ಕಾರಣವಾಗಿ ಗಲಭೆಯೆದ್ದು, ರಕ್ತಪಾತವಾಗುವ ಕಾಲವಿದು. ಬೊಬ್ಬೆಯೆಬ್ಬಿಸಿ ಅನಾಹುತವನ್ನು ಕರೆಯುವುದೇಕೆ? ಕಾಲುಗಳ ಮೇಲೆ ಅಂಕೆಯಿರುವಷ್ಟು ಕಾಲ ಅವುಗಳ ಮೇಲೆ ನಿರಂಕುಶಾಧಿಕಾರವನ್ನು ಪ್ರಯೋಗಿಸಿದರಾಯಿತು. ಆ ನೆರಳು ನಮ್ಮಿಬ್ಬರ ನಡುವಣ ದೂರವನ್ನು ನುಂಗುತ್ತಾ ಬರುತ್ತಿದೆ. ಏನೂ ಆಗಲಿ, ಇಡುವ ಹೆಜ್ಜೆಗಳನ್ನೇ ದೂರದೂರವಾಗಿ ಇಡೋಣ..... ಎಂದು ಇಟ್ಟೆ........ ಆ ನೆರಳೂ ಹಾಗೆಯೇ ಮಾಡಿದಂತೆ ತೋರಿತು. ಖಂಡಿತವಾಗಿ ಅಪಾಯವಿದೆ........ ಅದೂ ನನಗೊಬ್ಬನಿಗೇ? ಅಪಾಯ! ಆದರೇನು? ಕೋಣೆ ಸಮೀಪಿಸಿತು..... ನಾಲ್ಕೇ ನೆಗೆತ! ನಮ್ಮ ಕಟ್ಟಡದ ಬುಡಕ್ಕೇ ಹಾರಬಹುದಷ್ಟೇ? ಹಾಗೆಯೇ ಮಾಡಿದೆ.



ನನ್ನ ಕೋಣೆ ಆರನೆಯ ನೆಲೆಯಲ್ಲಿ, ಏರುವುದಕ್ಕೆ ಡೊಂಕು ಡೊಂಕಾಗಿ ಸುತ್ತುವ ಸೋಪಾನ. ರಸ್ತೆಯ ಅಂಚಿನಿಂದ ತಟ್ಟನೆ ಸೋಪಾನಕ್ಕೆ ಹಾರಿದೆ. ಹತ್ತು ಮೆಟ್ಟು ಮೇಲೇರಿ ಕೆಳಗೆ ನೋಡುತ್ತೇನೆ ಆ ನೆರಳು ನನ್ನ ಕೆಳಗಡೆಯ ರಸ್ತೆಯಲ್ಲಿ ನಿಂತಂತಿದೆ. ಇನ್ನೇನು? ಸಂದೇಹ ಬೇಕಾಗಿಯೇ ಇಲ್ಲ. ನನ್ನನ್ನೇ ಓಡಿಸಿಕೊಂಡು ಬಂದಿದೆ ವಿಪತ್ತು. ಮೈ ನಡುಗಿತು; ಬಾಯಿ ಚೀರಿತು; ನನ್ನ ಕೈ ತಾನಾಗಿ ಜೇಬಿನೊಳಗಿದ್ದ ಚೂರಿಯನ್ನು ಬಿಚ್ಚಿ ನನ್ನನ್ನು ಅನುಸರಿಸುತ್ತಿದ್ದ ನೆರಳಿನ ಕಡೆಗೆ ಎಸೆಯಿತು. ಚೂರಿ ರಸ್ತೆಗೆ ಬಿದ್ದಿತು. ಠಣ್ ಎಂಬ ಸದ್ದಾಯಿತು. ನನ್ನ ಚೀರಾಟ....... ಚೂರಿಯ ಠಣಾತ್ಕಾರ.......... ಇಲ್ಲಿ ಏನೋ ದೊಡ್ಡ ದೊಂಬಿಯಾಗುತ್ತದೆ....... ಎಂದು ರಸ್ತೆಯಲ್ಲಿ ಹೋಗುತ್ತಿದ್ದವರೂ, ಮನೆಯ ಒಳಗಿದ್ದವರೂ ಹೊರಗಿದ್ದವರೂ ಎಲ್ಲರೂ ಒಂದಾಗಿ ದಿಗಿಲೆಬ್ಬಿಸಿದರು. ನೆರಳು ಓಡಿತು. ಹತ್ತೆಂಟು ಜನರೂ ಓಡಿದರು. ಹೊಡೆಯಿರೋ ಎಂಬ ಆರ್ಭಟೆ. ಅಲ್ಲಿ ಏನಾಯಿತೋ ತಿಳಿಯುವ ಕುತೂಹಲವಿರಲಿಲ್ಲ. ನಾಳೆ ಬೆಳಗಾಗುವುದಿಲ್ಲವೆ? ಸಾವಕಾಶವಾಗಿ ತಿಳಿಯಬಹುದು; ಆ ರಾತ್ರಿ ನನ್ನದಾದರೆ, ಉಳಿದ ಹಗಲು ರಾತ್ರಿಗಳೆಲ್ಲ ನನ್ನವು ಎಂಬ ಭಾವನೆಯಿಂದ ಕೋಣೆಯೊಳಗೆ ಭದ್ರವಾಗಿ ಕುಳಿತೆ.

ಬೆಳಗ್ಗೆ ನನ್ನ ಕೂಡೊಕ್ಕಲುಗಳಾಗಲಿ, ಬೀದಿಯಲ್ಲಿ ಸಂಚರಿಸುವ ಜನರಾಗಲಿ ಹೆಚ್ಚಿನ ವಾರ್ತೆಯನ್ನು ಹೇಳಲಿಲ್ಲ. ಕೆಳಗೆ ರಸ್ತೆಯ ಮೇಲೆ ನಿಂತ ಕಾರಿನಿಂದ ಪಿಂಗಾಣಿಯ ವ್ಯಾಪಾರಿ ಬಾಳೂರರು ಇಳಿದು ನನ್ನೆಡೆ ಮುಖ ತಿರುಗಿಸಿ, ಕೈಯನ್ನೆತ್ತಿ ಸನ್ನೆಮಾಡುತ್ತಾರೆ!

ನನಗಾದ ಸಂತೋಷ ಅಷ್ಟಿಷ್ಟೆಂದು ಹೇಳುವ ಹಾಗಿರಲಿಲ್ಲ. ಕೂಡಲೆ ಕೆಳಕ್ಕೆ ನೆಗೆದು "ಬನ್ನಿ ನಾರ್ಣಪ್ಪಯ್ಯ........ ಬನ್ನಿ........ ನನ್ನ ಗೂಡನ್ನು ಒಮ್ಮೆಯೂ ನೋಡಿದವರಲ್ಲ......" ಎಂದು ಕರೆದೆ.

"ನೀವು ಕರೆಯದಿದ್ದರೂ ನಾನು ಬರುತ್ತೇನೆ. ಹತ್ತಿ ಮೇಲೆ, ನಾನೂ ಬರುತ್ತೇನೆ" ಎಂದವರು ನನ್ನನ್ನೇ ಹಿಂಬಾಲಿಸಿದರು.

ನನ್ನ ಕೋಣೆಯಲ್ಲಿರುವುದು ಚೆಲುವಾದ ಕುರ್ಚಿ ಒಂದೇ. ಅದನ್ನು ಬಾಳೂರರು ಅಲಂಕರಿಸಿದರು. ರಾತ್ರಿ ನನ್ನ ಮಂಚವಾಗಿ ರೂಪಾಂತರ ಹೊಂದುತ್ತಿದ್ದ ಅಗಲ ಬೆಂಚಿನ ಮೇಲೆ ನಾನು ಕುಳಿತೆ. ಬಾಳೂರರು ಕರವಸ್ತ್ರದಿಂದ ಮುಖವೊರಸುತ್ತಾ "ನಿನ್ನೆಯ ಸಮಾಚಾರವೇನಾದರೂ ಗೊತ್ತೇ?" ಎಂದು ಪ್ರಶ್ನಿಸಿದರು.

"ಯಾವ ಸಮಾಚಾರ?"

"ಸಮಾಚಾರವು ಯಾವುದೆಂದೇ ಗೊತ್ತಿಲ್ಲದ ಮೇಲೆ ಕೇಳಬೇಕಾದುದಿಲ್ಲ" ಎಂದವರು ನಕ್ಕರು.

"ಯಾವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೇಳಿದ್ದೀರಿ?"

"ನಿಮ್ಮ ಈ ಕಿರಿಬೀದಿ ರಾಜರಸ್ತೆಗೆ ಸೇರುವಲ್ಲಿ.......... ಆ ಮೂಲೆಯಲ್ಲಿ............ ನಿನ್ನೆ ರಾತ್ರಿ ಏನಾಯಿತೆಂದು ಬಲ್ಲಿರಾ?"

"ಒಂದೂ ಇಲ್ಲ!"

"ಎಂಟು ಗಂಟೆಗೇ ಕುಂಭಕರ್ಣ ನಿದ್ರೆಯೆ?"

"ಹೂಂ, ಬೊಂಬಾಯಿ ನಗರದಲ್ಲಿ – ನನ್ನಂತೆ ನಿದ್ದೆ ಮಾಡುವವರು ಹೆಚ್ಚು ಮಂದಿ ಇದ್ದರೆ ಈ ಮಾರಾಮಾರಿ ಕಡಿಮೆಯಾಗಬಹುದಲ್ಲವೆ?" ಎಂದು ನಗುತ್ತಾ ಉತ್ತರಕೊಟ್ಟೆ. ರಸ್ತೆಯಲ್ಲಾದ ಘಟನೆಯ ಕೂಲಂಕಷ ವೃತ್ತಾಂತವನ್ನು ತಿಳಿಯಬೇಕೆಂಬ ಕುತೂಹಲವು ಆ ನಗೆಯಿಂದ ಇಣಿಕಿ ನೋಡುತ್ತಿತ್ತು. ಆದರೆ ಆದುದಕ್ಕೂ ನನಗೂ ಒಂದಿಷ್ಟು ಸಂಬಂಧ ಇದೆಯೆಂದು ತಿಳಿಸುವುದಕ್ಕೆ ನಾನು ಸಿದ್ಧನಾಗಿರಲಿಲ್ಲ.

"ಹಾಗೆಯೇ ಸರಿ. ನಿಮ್ಮಂಥವರೇ ಈ ನಗರದಲ್ಲಿ ಇರುವುದಾಗಿದ್ದರೆ ಆಳುವ ಸರಕಾರ ಬೇಕೇ?" ಆದುದನ್ನು

ತಿಳಿಸಿಬಿಡುತ್ತೇನೆ. ನಿನ್ನೆ ರಾತ್ರಿ ಪುಕಾರಿ ಮಾಡಿದಂತಹ ದುರ್ಜನರನ್ನು ಹುಟ್ಟಡಗಿಸುವುದಕ್ಕಾಗಿ ನಮಗೊಂದು ಸರಕಾರ ಬೇಕಾದುದು ಎಂದು ಪ್ರಸ್ತಾವಿಸುತ್ತಾ ಹೀಗೆ ವಿವರಿಸಿದರು.

"ಯಾರೋ ಒಬ್ಬ ದುಷ್ಟ ಈ ವಠಾರದಲ್ಲಿ ಹೊಂಚುಹಾಕುತ್ತಿದ್ದ. ಈ ಸೋಗು ಯಾರಿಗೋ ತಿಳಿಯಿತು. ಅವರು ಸನ್ನೆಕೊಟ್ಟರು. ಹೋಗುತ್ತಿದ್ದ ದಾರಿಹೋಕರಿಗೆ ಗೊತ್ತಾಯಿತು. ಎಲ್ಲರೂ ಅಟ್ಟಿಕೊಂಡು ಬಂದರು. ಪ್ರಾಣವನ್ನು ಕೈಯಲ್ಲಿಟ್ಟುಕೊಂಡು ಓಡಿತು ಆ ಪ್ರಾಣಿ. ಈ ರಸ್ತೆ – ಆ ರಸ್ತೆಗಳ ಸಂದಿನಲ್ಲಿ ಜನ ನಿಂತಿದ್ದಿರಬೇಕು. ತಡೆದರು. ಹಿಡಿದರು. ಆ ಜನ ಕೈಯಲ್ಲಿದ್ದ ಕತ್ತಿಯಿಂದ ಒಬ್ಬನನ್ನು ತಿವಿದ, ಮತ್ತೆ ಕೇಳುವುದೇನು? ನಿರಪರಾಧಿಯ ರಕ್ತವಲ್ಲವೇ? ಅದು ನೀರೆ? ಆತನ ಕೊರಳನ್ನು ಕೊಯಿದು ಅಲ್ಲೆ ಎಸೆದಿರಬೇಕು."

"ನಮ್ಮ ನೆರೆಗೂ ಈ ಮಾರಿ ಬಂತು!" ಎಂದು ಏನೂ ತಿಳಿಯದವನಂತೆ ಮುಖವನ್ನು ಮುದುಡಿಸಿದೆ.

"ಎಲ್ಲ ಆಗುವುದೇ.......... ಆಗತಕ್ಕದೇ.......... ನಿನ್ನಂತಹ ಅಂಜುಬುರುಕರಿಗೆ ಈ ಪ್ರಪಂಚವಲ್ಲ!" ಎಂದು ಹೆಮ್ಮೆಯಿಂದಾಡುತ್ತಾ ಮತ್ತೂ ಮುಂದುವರಿಸಿದರು.

"ನಿಮಗೆ ತಿಳಿಸಬೇಕಾದುದು ಇದಲ್ಲ, ಕಥೆಯೊಳಗೆ ಒಂದು ಉಪಕಥೆಯಿದೆ. ನನ್ನ ಮಂಡಿಯ ಸಮೀಪದಲ್ಲಿ ಒಂದು ಆಸ್ಪತ್ರೆಯಿದೆ. ಗೊತ್ತೋ?"

"ಇರಬಹುದು"

"ಇದೆ; ಅಲ್ಲೊಂದು ಅನಾಥ ಶವವಿದೆ!" ಈ ಮಾತನ್ನು ಕೇಳಿದಾಗ ನೆತ್ತರು ಬಿಸಿಯೇರತೊಡಗಿತು.

"ಅನಾಥ ಶವ!"

"ಹೌದು"

"ನಾವದರ ಸಂಸ್ಕಾರಮಾಡಬೇಕಾಗಿರುವುದೇ?"

"ಆ ಕೆಲಸವನ್ನು ನಮಗೆ ಯಾರು ಕೊಡುತ್ತಾರೆ? ಕೊಟ್ಟರೆ ಮಾಡುವ ಮಗ ಯಾರು? ಆದದ್ದೇನೋ ಚೆನ್ನಾಯಿತು. ಆದರೆ ಹೆಣ ಯಾರದೆಂದು ಗೊತ್ತಾಗಲಿಲ್ಲ ಪೋಲೀಸರಿಗೆ..... ಸಾಧ್ಯವಾದರೆ ಗುರುತಿಸಬೇಕಾಗಿದೆ!"

"ನಾನು ಶವ ಪರೀಕ್ಷೆಯಲ್ಲಿ ನಿಪುಣನಲ್ಲ!"

"ಲೋಕಕ್ಕೆ ಗೊತ್ತಿದೆ ಈ ವಿಷಯ, ಆ ಹೆಣಕ್ಕೆ ನಿನಗೆ ಪರಿಚಿತವಾದ ಹೆಸರಿದೆ"

"ನನಗೆ ಪರಿಚಿತವಾದ ಹೆಸರು?"

"ಹೌದು; ಸೊಂಟದಲ್ಲಿ ಬಿಗಿದಿದ್ದ ಜಟ್ಟಿಯಲ್ಲಿ ಅಬ್ದುಲ್ಲ – ಎಂದು ಬರೆದಿತ್ತು!"

"ಏನು ಅಬ್ದುಲ್ಲ!" ಎಂದು ಬೆಚ್ಚಿ ಬಿದ್ದೆ.

ಹೆಣ ಶ್ಮಶಾನಕ್ಕೆ ಹೊರಡಲು ಸಿದ್ಧವಾಗಿತ್ತು. ಹೆಚ್ಚು ಪರೀಕ್ಷಿಸಬೇಕಾಗಿರಲಿಲ್ಲ. ಅದೇ ಮುಖ, ಅದೇ ಮೈಕಟ್ಟು, ಹಿಂದೆ ಇದ್ದ ಕಿರು ಮೀಸೆಯ ಸ್ಥಾನದಲ್ಲಿ ದಪ್ಪ ಮೀಸೆ. ನುಣುಪಾಗಿದ್ದ ಮೈ ಒರಟಾಗಿ ಸ್ಥೂಲವಾಗಿತ್ತು. ಬಣ್ಣದಲ್ಲಿ ಸ್ವಲ್ಪ ಕಂದಿಹೋಗಿದ್ದ. ಏನು ಮಾಡಿಯೇನು! ಎಲ್ಲಿಗೆ ಹೋದೇನು! ಎನ್ನುವ ಭೀತಿಯ ಮುಖ ಮುದ್ರೆ ಈಗಲೂ ಇತ್ತು. ಪಾತುಮ್ಮನ ಕನಸಿನ ದೈವ ಅಲ್ಲಿ ಬಿದ್ದಿತ್ತು. "ರಾಮಣ್ಣ! ನಿನ್ನ ತಮ್ಮನನ್ನು ಮರೆಯಬೇಡ!" ಎಂದು ಎಂಟು ವರ್ಷಗಳ ಹಿಂದೆ ಪಾತುಮ್ಮನಾಡಿದ್ದ ಕಣ್ಣೀರಿನ ಮಾತುಗಳು ಕಿವಿಯಲ್ಲಿ ರಣರಣಿಸುತ್ತಿದ್ದುವು.

*– ಕಡೆಂಗೋಡ್ಲು ಶಂಕರ ಭಟ್ಟ*



## ಕಡೆಂಗೋಡ್ಲು ಶಂಕರಭಟ್ಟ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪೆರುವಾಯಿಯಲ್ಲಿ ೧೯೦೪ರ ಆಗಸ್ಟ್ ೯ರಂದು ಈಶ್ವರ ಭಟ್ಟ ಮತ್ತು ಗೌರಮ್ಮ ದಂಪತಿಗಳ ಮಗನಾಗಿ ಕಡೆಂಗೋಡ್ಲು ಶಂಕರಭಟ್ಟರು ಜನಿಸಿದರು.

ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ, ಅರುವತ್ತನೆಯ ವಯಸ್ಸಿನವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. 'ನವಯುಗ', 'ರಾಷ್ಟ್ರಬಂಧು' ಮತ್ತು 'ರಾಷ್ಟ್ರಮತ' ಪತ್ರಿಕೆಗಳಲ್ಲಿ ಸಂಪಾದಕರಾಗಿಯೂ ಕೆಲಸ ಮಾಡಿದರು.

ಘೋಷಯಾತ್ರೆ, ಗಾಂಧಿ ಸಂದೇಶ, ವಸ್ತ್ರಾಪಹರಣ, ಕಾಣಿಕೆ, ಹಣ್ಣುಕಾಯಿ, ನಲ್ಲೆ, ಪತ್ರ ಪುಷ್ಪ ಇವು ಶಂಕರಭಟ್ಟರು ರಚಿಸಿದ ಕವನ ಸಂಕಲನಗಳು. ಗಾಜಿನ ಬಳೆ ಮತ್ತು ಇತರ ಕಥೆಗಳು, ದುಡಿಯುವ ಮಕ್ಕಳು, ಚೂರಿಯ ಕಥೆ, ಹಿಂದಿನ ಕಥೆಗಳು, ದೊಡ್ಡಣ್ಣ – ಇವು ಭಟ್ಟರ ಕಥಾ ಸಂಕಲನಗಳು. ಧೂಮಕೇತು, ಲೋಕದ ಕಣ್ಣು, ದೇವತಾ ಮನುಷ್ಯ – ಇವು ಕಾದಂಬರಿಗಳು. ಹಿಡಿಂಬೆ, ಯಜ್ಞಕುಂಡಗಳು, ಗುರುದಕ್ಷಿಣೆ, ವಿರಾಮ – ಇವರು ರಚಿಸಿದ ನಾಟಕಗಳು. ಹೀಗೆ ಬಹುವಿಧ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದರು ೧೯೬೮ರ ಮೇ ೧೭ರಂದು ದೈವಾಧೀನರಾದರು. 'ಗೆಳೆಯರಿಬ್ಬರ ಕಥೆ' ಯನ್ನು ಕಡೆಂಗೊಡ್ಲು ಶಂಕರಭಟ್ಟರ 'ದುಡಿಯುವ ಮಕ್ಕಳು' ಎನ್ನುವ ಕಥಾಸಂಕಲನದ 'ಚೂರಿಯ ಕಥೆ'ಯ ಆಧಾರದಲ್ಲಿ ಪುನರ್ರಚಿಸಲಾಗಿದೆ.

- ❐ ಪಾಠ ಭಾಗದ ಮುಖ್ಯ ಪಾತ್ರಗಳ ಮಾತುಗಳನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.
- ❐ ಪರಸ್ಪರ ಅವಲಂಬನೆ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಪಾತ್ರಗಳು ಕಥೆಯಲ್ಲಿವೆಯಲ್ಲವೇ? ಅವುಗಳ ಪಾತ್ರಚಿತ್ರಣ ಮಾಡಿರಿ.
- ❐ ಸಮಕಾಲೀನವಾದ ಜಾತಿ ಮತ್ತು ಮತೀಯ ಸಂಘರ್ಷಗಳ ಘಟನೆಗಳನ್ನು ವಿಶ್ಲೇಷಿಸಿ ಸಮಾಜದಲ್ಲಿ ಶಾಂತಿ,ಸಾಮರಸ್ಯ, ಮತೀಯ ಸೌಹಾರ್ದ, ಮಾನವೀಯತೆಗೆ ಕರೆನೀಡುವ ಲೇಖನವನ್ನು ಪತ್ರಿಕೆಯ ಓದುಗರ ಓಲೆಗೆ ಬರೆಯಿರಿ.

- ❐ **ಕೆಳಗಿನ ಬರವಣಿಗೆಯನ್ನು ಗಮನಿಸಿರಿ.**
  - ಭೀಮನು ಕೊಂದನು
  - ಭೀಮನು ಬಕಾಸುರನನ್ನು ಕೊಂದನು
  - ಭೀಮನು ದುಶ್ಯಾಸನನನ್ನು ಕೊಂದನು
  - ಬಲಶಾಲಿಯಾದ ಭೀಮನು ದುಷ್ಟನಾದ ದುಶ್ಯಾಸನನನ್ನು ಬಲವಾಗಿ ಹೊಡೆದು ಕೊಂದನು

ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳಲ್ಲಿನ ವಿಶೇಷತೆಗಳನ್ನು ಗಮನಿಸಿರಿ. ಇವುಗಳನ್ನು ಕ್ರಮವಾಗಿ ಕರ್ತೃ, ಕರ್ಮ, ಕ್ರಿಯೆ, ನಾಮವಿಶೇಷಣ, ಕ್ರಿಯಾ ವಿಶೇಷಣಗಳೆಂದು ಕರೆಯುತ್ತೇವೆ. ಕೆಳಗಿನ ಪಟ್ಟಿಯಲ್ಲಿರುವ ಕರ್ತೃ, ಕರ್ಮ, ಕ್ರಿಯೆ, ವಿಶೇಷಣಗಳನ್ನು ಬಳಸಿಕೊಂಡು ಅರ್ಥಪೂರ್ಣವಾಕ್ಯಗಳನ್ನು ಬರೆಯಿರಿ.

| | | | |
|---|---|---|---|
| ತೀಕ್ಷ್ಣ | ಕಲ್ಲು | ರಭಸ | ಬಾಣ |
| ಸುರೇಶ | ಚೂಪು | ಗೂಳಿ | ಚತುರ |
| ಚಿತ್ರ | ಕೊಂಬು | ಮಾಡು | ಶೀಘ್ರ |
| ಸೈನಿಕ | ಅಂದ | ಶಮೀಮ | ಎಸೆ |

ಉದಾ:

❒ ಚತುರನಾದ ಸೈನಿಕನು ತೀಕ್ಷ್ಣವಾದ ಬಾಣವನ್ನು ಸುರೇಶನ ಮೇಲೆ ರಭಸದಿಂದ ಎಸೆದನು.

* * *

# ಬಸವಣ್ಣನವರು ಕಟ್ಟಬಯಸಿದ ಸಮಾಜ

ಮಹಾತ್ಮರಾದ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು, ಅವರು ಈ ನೆಲದ ಮೇಲೆ ನಡೆದಾಡಿ ಸುಮಾರು ಎಂಟುನೂರು ವರ್ಷಗಳು ಆಗಿಹೋದುವು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ಸಮಾಜ ಇಂದಿಗೂ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿಲ್ಲವೆಂಬುದನ್ನು ಗಮನಿಸಿದಾಗ, ಅಷ್ಟು ಹಿಂದೆಯೇ ಅವರು ಕಂಡ ಕನಸು ಮತ್ತು ಅದನ್ನು ನನಸು ಮಾಡಲು ನಡೆಸಿದ ಹೋರಾಟ ಎಷ್ಟು ದೊಡ್ಡವೆಂಬುದು ಅರಿವಾಗದಿರದು: ಸಮತಾವಾದ, ಸಮಾಜವಾದ, ಪ್ರಜಾಪ್ರಭುತ್ವ ಮುಂತಾದವು ಈ ಯುಗದ ಮೌಲ್ಯಗಳೆಂಬುದು ಎಲ್ಲರಿಗೂ ಗೊತ್ತು. ಆದರೆ ೧೨ನೆಯ ಶತಮಾನದಲ್ಲಿ ಬಸವಣ್ಣನವರು ಈ ಮೌಲ್ಯಗಳ ಸಾಕ್ಷಾತ್ಕಾರಕ್ಕಾಗಿ ಸತತ ಶ್ರಮಿಸಿದರೆಂಬುದನ್ನು ನಾವು ಹೇಗೆ ಮರೆಯಬಹುದು? ಆ ಶ್ರಮ ಶಾಶ್ವತವಾಗಿ ಸಾರ್ಥಕವಾಗಲಿಲ್ಲವೆಂಬ ಮಾತು ಬೇರೆ. ಎಲ್ಲ ಮಹಾಪುರುಷರ ಪಾಡೂ ಅಷ್ಟೇ ತಾನೆ.

ಬಸವಣ್ಣನವರ ಕನಸಿನ ಸಮಾಜ ಧರ್ಮದ ತಳಹದಿಯ ಮೇಲೆ ರೂಪುಗೊಂಡದ್ದು ಎಂಬುದನ್ನು ಮುಖ್ಯವಾಗಿ ಲಕ್ಷಿಸಬೇಕು. ಆದರೆ ಧರ್ಮದ ಹೆಸರಿನಲ್ಲಿ ನಡೆಯುವ ಅನೇಕ ಅನಾಹುತಗಳಿಗೆ, ಅನಾಚಾರಗಳಿಗೆ, ಅನ್ಯಾಯ, ಸುಲಿಗೆ ಶೋಷಣೆಗಳಿಗೆ ಅದರಲ್ಲಿ ಅವಕಾಶವಿಲ್ಲ. ಅಂಥ ಅನಿಷ್ಟಗಳ ಬುಡಕ್ಕೇ ಕೊಡಲಿ ಹಾಕುವ ಜ್ವಲಂತ ವೈಚಾರಿಕ ಪ್ರವೃತ್ತಿಯನ್ನು ಬಸವಣ್ಣನವರಲ್ಲಿ ಕಾಣುತ್ತೇವೆ.

ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಕಂಡುಕೊಂಡು; ಆ ದಿಶೆಯಲ್ಲಿ ಕೆಲಸ ಮಾಡಿದ್ದು ವಚನಕಾರರ ಅದ್ಭುತ ಸಾಧನೆ. ಜನಭಾಷೆಯ ಮಾಧ್ಯಮವೇ ಸರ್ವೋದಯದ ಮೂಲತತ್ತ್ವ, ಕೀಲಿಕೈ. ಈ ದೃಷ್ಟಿಯಿಂದ ಕನ್ನಡ ಮಾಧ್ಯಮ ಬಸವಾದಿ ಶರಣರ ಕಾಲದಲ್ಲೆ ಪ್ರಚುರವಾಗಿ, ಸಮಾಜ ಸುಧಾರಣೆಗೆ ಹಾಗೂ ನವಸಮಾಜ ನಿರ್ಮಾಣಕ್ಕೆ ಪ್ರಮುಖ ಸಾಧನವಾಗಿ ಪರಿಣಮಿಸಿದ್ದನ್ನು ನೋಡುತ್ತೇವೆ. ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚ ಕನ್ನಡದಲ್ಲಿ ಅವರು ತಿಳಿಸಿಕೊಟ್ಟರು. ಬಸವಣ್ಣನವರು ಧರ್ಮವನ್ನು ಕನ್ನಡಿಸಿ ಹೇಳಿದ್ದು ಮಾತ್ರವಲ್ಲ, ಅದನ್ನು ಸಹಜ ಶುದ್ಧ ರೂಪದಲ್ಲಿ ಅನಾವರಣ ಮಾಡಿದ ಕೀರ್ತಿಯೂ ಅವರಿಗೆ ಸಲ್ಲಬೇಕು.



ಧರ್ಮವೆಂದರೆ ಅಗ್ರಾಹ್ಯವಾದ ಅನನುಸರಣೀಯವಾದ ಜಟಿಲ ಜಾಲವೂ ಅಲ್ಲ. ಒಂದು ವರ್ಗದ ಸೊತ್ತೂ ಅಲ್ಲ. ಅದು ಎಲ್ಲರ ಆಸ್ತಿಯಾಗಬೇಕು. ಎಲ್ಲರ ಸುಖಕ್ಕೂ ಅಭ್ಯುದಯಕ್ಕೂ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು. ಅದನ್ನವರು ಅಪ್ರತಿಹತವಾದ ರೀತಿಯಲ್ಲಿ ಮುಂದೊತ್ತಿದರು.

ಬಸವಣ್ಣನವರು ಹಿಂದೂಧರ್ಮದ ಚೌಕಟ್ಟಿನೊಳಗಿದ್ದುಕೊಂಡೇ ಅದನ್ನು ಶುದ್ಧೀಕರಿಸುವ, ತನ್ಮೂಲಕ ಸಮಾಜವನ್ನು ಮೇಲೆತ್ತುವ ಮಹಾಕಾರ್ಯದಲ್ಲಿ ಉದ್ಯುಕ್ತರಾದರು. ಅವರ ಕಾಲದಲ್ಲಿ ಸಾಮಾನ್ಯ ಜನ ಅಜ್ಞಾನಮೌಢ್ಯ ಶೋಷಣೆಗಳಿಗೆ ಪಕ್ಕಾಗಿ ಉದ್ಧಾರ ಕಾಣದೆ ಕತ್ತಲಲ್ಲಿ ತೊಳಲಾಡುತ್ತಿದ್ದರು. ಬಸವಣ್ಣನವರು ಈ ಶೋಚನೀಯ ಪರಿಸ್ಥಿತಿಯನ್ನು ತಪ್ಪಿಸಲು ಜೀವನ ಪರ್ಯಂತ ಹೆಣಗಿದರು. ಧರ್ಮವನ್ನು ಅವರು ಕರ್ಮ ಕಾಂಡದಿಂದ ಪ್ರತ್ಯೇಕಿಸಿ, ಅದರ ನೈಜವಾದ ತಿರುಳನ್ನು ಜನತೆಯ ಮುಂದಿರಿಸಿದರು. ಶಾಸ್ತ್ರಗಳನ್ನು ಹಿಂದಿಕ್ಕಿ, ಆರ್ಷೇಯವಾದ ವೇದೋಪನಿಷತ್ತುಗಳ ಶ್ರೇಯಸ್ಕರವಾದ ಸಾರವನ್ನು ಅವರು ಪರಿಗ್ರಹಿಸಿದರು; ಪುಷ್ಟಿದಾಯಕವಾದ ನಿತ್ಯಾಂಶಗಳನ್ನು ಹೀರಿಕೊಂಡು, ಬಾಹ್ಯವೂ ಬರಡೂ ಆದುದನ್ನೆಲ್ಲ ತೂರಿಬಿಟ್ಟರು. ಇದರಿಂದ ಸಮಾಜದಲ್ಲಿ ಅಪೂರ್ವ ಜಾಗೃತಿಯುಂಟಾಯಿತು; ಜನರ ಜಾಡ್ಯ ಅಜ್ಞಾನಗಳು ತೊಲಗಿ, ಸರ್ವೋದಯಕ್ಕೆ ಶಿವಪಥ ತೆರೆದುಕೊಂಡಿತು.

ಎಲ್ಲರಿಗೂ ನಿಲುಕುವಂತೆ ಸರಳ ಸುಲಭವಾದ, ಮನಕ್ಕೆ ನಾಟುವಂತಹ ಮಾತುಗಳಲ್ಲಿ ಧರ್ಮಬೋಧೆ ಮಾಡಿದ್ದರಿಂದ – ಧರ್ಮವನ್ನು ಮನೆಮಾತು ಮಾಡಿಕೊಟ್ಟುದರಿಂದ – ಸಮಾಜದಲ್ಲಿ ಧಾರ್ಮಿಕ ಸಮಾನತೆಗೆ ಅವಕಾಶವಾಯಿತು. ಅಂತೆಯೆ ಸಾಮಾಜಿಕ ಸಮಾನತೆಯ ಸ್ಥಾಪನೆಗೂ ಬಸವಣ್ಣನವರು ಉಗ್ರವಾಗಿ ಹೋರಾಟ ಹೂಡಿದರು. ವರ್ಣವ್ಯವಸ್ಥೆ, ಜಾತಿಪದ್ಧತಿ ಹಿಂದೂಧರ್ಮ ಬೆಳೆಸಿಕೊಂಡು ಬಂದ ಒಂದು ಕರಾಳ ಪೀಡೆ, ಘೋರಶಾಪ. ಇದರ ಶನಿಮುಷ್ಟಿಯಿಂದ ಭಾರತೀಯ ಸಮಾಜ ಇನ್ನೂ ಮುಕ್ತವಾಗಿಲ್ಲ. ಬಸವಣ್ಣನವರು ಜಾತಿಪದ್ಧತಿಯ ಬೇರಿಗೇ ಬೆನ್ನೀರು ಹೊಯ್ಯಲು ಸರ್ವಪ್ರಯತ್ನಗಳನ್ನೂ ಮಾಡಿದರೆಂಬುದನ್ನು ಎಷ್ಟು ಹೊಗಳಿದರೂ ಕಡಿಮೆ. ಅವರು ಜಾತಿಗಳ ಅಡ್ಡಗೋಡೆಗಳನ್ನು ಕುಟ್ಟಿ ಕೆಡವಲು ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿದ ಮಹಾನುಭಾವರು.

ಅಸ್ಪೃಶ್ಯತೆ ಹಿಂದೂ ಧರ್ಮಕ್ಕಂಟಿದ ಮತ್ತೊಂದು ಲಜ್ಜಾಸ್ಪದ ಕಳಂಕ; ಅದನ್ನು ತೊಡೆದು ಹಾಕುವುದೂ ಬಸವಣ್ಣನವರ ಜೀವಿತೋದ್ದೇಶವಾಗಿತ್ತು. ಅವರು ವ್ಯಕ್ತಿಯ ಯೋಗ್ಯತೆಯನ್ನು ನೀತಿಯ ಮಾನದಂಡದಿಂದ ಅಳೆದರು, ಜಾತಿಯಿಂದಲ್ಲ. ಯಾರು ಧರ್ಮನಿರತರೊ, ಶಿವಭಕ್ತರೋ, ಸದಾಚಾರ ಸಂಪನ್ನರೊ ಅವರೇ ಕುಲಜರು; ತದ್ವಿರುದ್ಧ ರೀತಿಯಲ್ಲಿ ಬದುಕುವವರೇ ಕುಲಹೀನರು – ಇದು ಬಸವಣ್ಣನವರ ಪುನರ್ ಮೌಲ್ಯಮಾಪನ.

ಸ್ತ್ರೀ ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಮಾತ್ರವಲ್ಲದೆ ಸಾಹಿತ್ಯಕವಾಗಿಯೂ ಪುರುಷನಿಗೆ ಹೆಗಲೆಣೆ ಎಂಬುದನ್ನು ವಚನ ಸಾಹಿತ್ಯ ಉದ್ಘೋಷಿಸುತ್ತಿದೆ. ವಾಸ್ತವವಾಗಿ ಸ್ತ್ರೀ ಸ್ವಾತಂತ್ರ್ಯ ಚಳುವಳಿ ಅಂದೇ ಆರಂಭಗೊಂಡಿತು.

ಬಸವಣ್ಣನವರ ಕಾಲದ ಸಮಾಜದಲ್ಲಿ ಪ್ರಾಣಿ ಬಲಿ ರೂಢವಾಗಿತ್ತು; ಅದನ್ನೆ ಧರ್ಮಾಚರಣೆಯೆಂದು ಜನ ಭ್ರಮಿಸಿದ್ದಿರಬೇಕು. ಬಸವಣ್ಣನವರು ಅದನ್ನು ಅಲ್ಲಗಳೆದು, ಅಹಿಂಸೆ ದಯೆಗಳ ಆವಶ್ಯಕತೆಯನ್ನು ಒತ್ತಿಹೇಳಬೇಕಾಯಿತು; ಧರ್ಮದ ಹೊಸ ವ್ಯಾಖ್ಯೆಯನ್ನೇ ಅವರು ನೀಡಿದರು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮನೊಲಿಸುವ ಪರಿ!



ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು ಬಸವಣ್ಣ. ಅವರ ದೃಷ್ಟಿಯಲ್ಲಿ ದೇವಲೋಕ ಎಲ್ಲೋ ಇರುವಂಥದಲ್ಲ, ಸತ್ತ ಮೇಲೆ ಗಳಿಸುವಂಥದಲ್ಲ. "ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯ ಲೋಕ; ಆಚಾರವೇ ಸ್ವರ್ಗ, ಅನಾಚಾರವೇ ನರಕ." ಬಸವಣ್ಣನವರು ಪರವನ್ನು ಮರೆಯದೆ, ಇಹ ಜೀವನದ ಶುದ್ಧಿ ಆರ್ಜವಗಳಿಗೆ ಪರಮ ಪ್ರಾಶಸ್ತ್ಯ ಕೊಡುತ್ತಾರೆ; "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ – ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗಕ್ಕೆ ತೂರಿಕೊಳ್ಳುವುದು ಸಾಧ್ಯವಿಲ್ಲ; ಅಂಥ ಯಾವ ಸುಲಭೋಪಾಯವೂ ಇಲ್ಲ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ; ಅದನ್ನು ಇಲ್ಲೆ ಕಷ್ಟಪಟ್ಟು ಸಂಪಾದಿಸಬೇಕು. ಹೀಗೆ ಇಹವನ್ನೇ ಪರವಾಗಿ ಅರಳಿಸುವ ಕ್ರಾಂತಿಕಾರಕ ಮನೋಧರ್ಮ ಮತ್ತು ಧರ್ಮ ಬಸವಣ್ಣನವರದು."

ಬಹುದೇವೋಪಾಸನೆಯನ್ನು ಅವರು ಖಂಡಿಸಿ ಏಕದೇವೋಪಾಸನೆಯನ್ನು ವಿಧಿಸಿದರು; "ದೇವನೊಬ್ಬ. ನಾಮ ಹಲವು" ಎಂಬ ಸೂತ್ರವೇ ಈ ವಿಧಿಗೆ ತಳಹದಿ. ಮೂಢನಂಬಿಕೆಗಳ ಮೇಲೆ ಬಸವಣ್ಣನವರು ಗದಾಪ್ರಹಾರ ಮಾಡಿದರು; ಧರ್ಮಕ್ಕೂ ಮೂಢನಂಬಿಕೆ ಶಕುನ ಇತ್ಯಾದಿಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ದೇವಾಲಯ ನಿರ್ಮಾಣಕ್ಕೆ ಬಸವಣ್ಣನವರ ವಿರೋಧವಿದೆ; ಸ್ಥಾವರ ಲಿಂಗಪೂಜೆಗೆ ಅವರ ಸಮ್ಮತಿಯಿಲ್ಲ. ಈ ದೃಷ್ಟಿಯಿಂದ, ಬಸವಣ್ಣನವರು ಬಾಹ್ಯ ದೇವಾಲಯಗಳಿಗೆ ಬೆಲೆ ಕೊಡದೆ, ತಮ್ಮ ದೇಹವೇ ದೇವಾಲಯವೆಂದು ಪರಿಗಣಿಸುವುದು ಸಮುಚಿತವಾಗಿದೆ: "ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಶವಯ್ಯ!"

ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಅವರು ಕಟ್ಟ ಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ ಕಾಯಕ ತತ್ವ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು, ಆದರಿಂದಲೇ ಜೀವನ ನಡೆಯಬೇಕು ಎಂಬುದು ಕಾಯಕ ತತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ, ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ರಾಮ ಬಾಣವಾಗಬಲ್ಲದು ಈ ಕಾಯಕ ತತ್ವ. ಸಮಾಜದ ಅಸಮತೆ ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ: "ಕಾಯಕವೇ ಕೈಲಾಸ"

ಬಸವಣ್ಣನವರು ಸಂಸಾರತ್ಯಾಗವನ್ನು ವಿಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ.

ಅಂತರಂಗ – ಬಹಿರಂಗ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ. ನುಡಿಗೆ ತಕ್ಕ ನಡೆ – ಇವುಗಳನ್ನು ಬೋಧಿಸಿದ್ದಾರೆ. "ನುಡಿಗೆ ತಕ್ಕ ನಡೆಯ ಕಂಡರೆ ಕೂಡಲ ಸಂಗಮ ತನ್ನೊಳಗಿರ್ಪನಯ್ಯ" ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರಲ್ಲಿ ಸಮಾನ ಪುರಸ್ಕಾರ.

ಪ್ರತಿಯೊಬ್ಬರೂ ಇತರರನ್ನು ತಿದ್ದಲು ಹೊರಡುವುದಕ್ಕೆ ಮುನ್ನ ತಮ್ಮನ್ನು ತಾವು ತಿದ್ದಿಕೊಳ್ಳಬೇಕು ಎಂಬುದು ಬಸವಣ್ಣನವರ ಆಶಯ. ಅವರು ಆಗ್ರಹಪೂರ್ವಕವಾಗಿ ಕೇಳುತ್ತಾರೆ:

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ



ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ
ನಮ್ಮ ಕೂಡಲ ಸಂಗಮದೇವ.

"ನಾನು ಹೇಳುವಂತೆ ಮಾಡು, ನಾನು ಮಾಡುವಂತೆ ಮಾಡಬೇಡ" ಎಂಬುದೇ ಜನರ ಪ್ರವೃತ್ತಿ; ಬಸವಣ್ಣನವರು ಇಲ್ಲಿ ಅದನ್ನು ತಿದ್ದುತ್ತಾರೆ. ಅವರಂತೂ ವೈಯಕ್ತಿಕವಾದ ಡೊಂಕುಗಳನ್ನು ತಿದ್ದಿಕೊಂಡ ಮೇಲೆ ಸಾರ್ವಜನಿಕ ರಂಗದ ಉದ್ಧಾರ, ಶುದ್ಧೀಕರಣಗಳಿಗೆ ಕೈಹಾಕಿದ್ದು.

ಸಹಕಾರ ತತ್ವವನ್ನು ಬಸವಣ್ಣನವರು ಕಾಗೆ ಕೋಳಿಗಳ ನಿದರ್ಶನದ ಮೂಲಕ ಸೊಗಸಾಗಿ ತಿಳಿಯ ಹೇಳುತ್ತಾರೆ:

ಕಾಗೆಯೊಂದಗುಳ ಕಂಡರೆ
ಕರೆಯದೇ ತನ್ನ ಬಳಗವನ್ನು;
ಕೋಳಿಯೊಂದು ಕುಟುಕು ಕಂಡರೆ
ಕೂಗಿ ಕರೆಯದೇ ತನ್ನ ಕುಲವೆಲ್ಲವನ್ನು;
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಗಿಂತ ಕರಕಷ್ಟ
ಕೂಡಲ ಸಂಗಮದೇವ.

ಹೀಗೆ ಹಂಚಿಕೊಂಡು ತಿನ್ನುವ ಬುದ್ಧಿ ಮಾನವನಿಗೆ ಬಂದಂದೇ ಕಲ್ಯಾಣಸಿದ್ಧಿ. ಬಸವಣ್ಣನವರ ಕಾಲದಲ್ಲಿ ಏನೇನು ಸಮಸ್ಯೆಗಳು, ಅರಿಷ್ಟಗಳು ವಿಜೃಂಭಿಸುತ್ತಿದ್ದುವೊ ಅವು ಇಂದಿಗೂ ಉಳಿದಿವೆ; ಮತ್ತೂ ಹೆಚ್ಚಿನ ಪ್ರಮಾಣದಲ್ಲೇ ಇವೆ, ಎಂದ ಮೇಲೆ ಬಸವಣ್ಣನವರ ಆದರ್ಶಗಳು ಈ ಹೊತ್ತಿಗೂ, ಇನ್ನು ಮುಂದೆಯೂ ದಾರಿದೀವಿಗೆಗಳೆಂಬುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಸತ್ಯ, ಅಹಿಂಸೆಗಳ ಅನುಷ್ಠಾನ, ಜಾತಿನಿರ್ಮೂಲನೆ, ಸಾಮಾಜಿಕ ಸಮತಾಸಾಧನೆ, ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧರಣ, ದಾರಿದ್ರ್ಯ ವಿಮೋಚನೆ, ಮೂಢನಂಬಿಕೆಗಳ ವರ್ಜನೆ, ದೇಶಭಾಷಾ ಮಾಧ್ಯಮದ ಜಾರಿ – ಮುಂತಾದುವೆಲ್ಲ ಇಂದಿಗೂ ಅತ್ಯವಶ್ಯವೂ ಅನಿವಾರ್ಯವೂ ಆಗಿವೆ. ಇವುಗಳನ್ನೆಲ್ಲ ಉಜ್ವಲವಾಗಿ ಪ್ರತಿಪಾದಿಸಿದ – ಅಷ್ಟೇ ಅಲ್ಲ ಸ್ವತಃ ಬದುಕಿದ – ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ. ಅವರು ಭೌತಿಕವಾಗಿ ಎಂಟುನೂರು ವರ್ಷಗಳಷ್ಟು ಹಿಂದಿನವರಾದರೂ ಬೌದ್ಧಿಕವಾಗಿ ಈ ಇಪ್ಪತ್ತನೆಯ ಶತಮಾನಕ್ಕಿಂತ ಮುಂದಿನವರಾಗಿ ಕಾಣುತ್ತಾರೆ. ಅಂತೂ ತಮ್ಮ ಕಲ್ಪನೆಯ ಸುಖೀ ಸಮಾಜವನ್ನು – ಎಲ್ಲ ಬಗೆಯ ಪಟ್ಟಭದ್ರ ಹಿತಾಸಕ್ತಿಗಳಿಂದಲೂ ಬಿಡುಗಡೆಗೊಂಡ, ಸತ್ಯ ಶಿವ ಸುಂದರವಾದ ಭೂತಲ ಸ್ವರ್ಗವನ್ನು – ಕಟ್ಟಲು ಅವರು ಧೀಮಂತವಾದ, ಧೀರವಾದ, ನೇರವಾದ ಹೋರಾಟದಲ್ಲಿ ತೊಡಗಿ, ಅಭೂತಪೂರ್ವವಾದ ಆಂದೋಲನವನ್ನುಂಟುಮಾಡಿ ತಮ್ಮ ಧ್ಯೇಯೋದ್ದೇಶಗಳಲ್ಲಿ ತತ್ಕಾಲಕ್ಕೆ ಯಶಸ್ವಿಯಾದರು.

*– ಡಾ। ಸಿ.ಪಿ. ಕೃಷ್ಣಕುಮಾರ್*



**ಡಾ। ಸಿ.ಪಿ. ಕೃಷ್ಣಕುಮಾರ್**

ಡಾ। ಸಿ.ಪಿ. ಕೃಷ್ಣಕುಮಾರ್ ಅವರು ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಚಿಕ್ಕ ನಾಯಕನ ಹಳ್ಳಿಯಲ್ಲಿ ೧೯೩೯ರಲ್ಲಿ ಜನಿಸಿದರು. ಸಿ.ಪಿ.ಕೆ. ಎಂಬುದು ಇವರ ಕಾವ್ಯನಾಮ.

'ಅನಂತ ಪೃಥ್ವಿ', 'ತಾರಾಸುಖ', 'ಸಾಹಿತ್ಯ ಪ್ರವೇಶ', 'ಕನ್ನಡ ವೇಣೀ ಸಂಹಾರ', 'ಕನ್ನಡ ನಾಗಾನಂದ', 'ಕಾವ್ಯಾರಾಧನೆ' ಇವೇ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಜೀವನ ಚರಿತ್ರೆ, ಸಂಶೋಧನೆ, ಸಂಪಾದನೆ – ಮುಂತಾದ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಇವರ ಕೆಲವು ಕೃತಿಗಳಿಗೆ ರಾಜ್ಯಮಟ್ಟದ ಪ್ರಶಸ್ತಿಗಳು ದೊರೆತಿವೆ.

ಪ್ರಸ್ತುತ ಪಾಠಭಾಗವನ್ನು ಅವರ 'ಬಸವ ಭಾವನೆ' ಎಂಬ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಇದರಲ್ಲಿ ಬಸವಣ್ಣನವರು ಅಂದು ಕಟ್ಟಿದ ಸಮಾಜವನ್ನು ವಚನಗಳ ಆಧಾರದೊಂದಿಗೆ ಮನೋಜ್ಞಾನವಾಗಿ ಚಿತ್ರಿಸಿದ್ದಾರೆ.

❒ ಬಸವಣ್ಣನವರು ಕಟ್ಟಬಯಸಿದ ನವ ಸಮಾಜದಲ್ಲಿರಬೇಕೆಂದು ಬಯಸಿದ ಉತ್ತಮಾಂಶಗಳನ್ನು ಪಟ್ಟಿಮಾಡಿರಿ.
ಉದಾ : ಸರ್ವಶೋಷಣೆಯಿಂದ ಮುಕ್ತವಾದ ಸಮಾಜ.....

❒ ಈ ಕೆಳಗಿನ ಕವಿತೆಯ ಭಾಗವನ್ನು ಓದಿ ಸಾಮಾಜಿಕ ಸಮಾನತೆಗೆ ಕವನ ನೀಡುವ ಸಂದೇಶವೇನು? ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

ನೀರಡಸಿ ಬಂದ ಸೋದರನಿಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯಬೇಕೇನು?
ನೊಂದವರ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆಬೇಕೇನು?
ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?

**– ಕುವೆಂಪು**

❒ ಸಮಾಜ ಸುಧಾರಣೆಗೆ ಬಸವಣ್ಣನವರಂತೆ ಶ್ರಮಿಸಿದ ಮಹಾನ್ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಿರಿ.

❒ ಡಾ। ಆ್ಯನಿ ಬೆಸೆಂಟ್‌ರ ಜೀವನ ಮತ್ತು ಸಾಧನೆಯ ವಿವರವನ್ನು ಕೆಳಗೆ ಕೊಡಲಾಗಿದೆ. ಅದನ್ನು ಉಪಯೋಗಿಸಿಕೊಂಡು ವ್ಯಕ್ತಿ ಪರಿಚಯ ಬರೆಯಿರಿ.

**ಡಾ। ಆ್ಯನಿ ಬೆಸೆಂಟ್**

ಜನನ : ೧೮೪೭ ಅಕ್ಟೋಬರ್ ೧ ಲಂಡನಿನಲ್ಲಿ
ತಂದೆಯ ಹೆಸರು : ವಿಲಿಯಂಪುಡ್
ಭಾರತಕ್ಕೆ ಆಗಮನ : ೧೮೯೩
ಹೋರಾಟ ಮತ್ತು ಸಾಧನೆ : ಮಹಿಳೆಯರಿಗೂ ಸಮಾನ ಹಕ್ಕು ದೊರೆಯಬೇಕೆಂಬ ಹೋರಾಟ, ಕೂಲಿಕಾರ್ಮಿಕರ ಸಂಘ ಸ್ಥಾಪನೆ, ಭೂಶಾಸನ ಸುಧಾರಣೆಗಾಗಿ ಹೋರಾಟ. ಬಾಲ್ಯ ವಿವಾಹದ ಕುರಿತಾಗಿ ಟೀಕೆ. ಗ್ರಾಮೀಣ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪಾದಯಾತ್ರೆ; ಜಾತಿಪದ್ಧತಿ ಮತ್ತು ವರ್ಣ ವ್ಯವಸ್ಥೆಗಳ ವಿರುದ್ಧ ಹೋರಾಟ.



೧೯೧೬ ರಲ್ಲಿ 'ಹೋಮ್ ರೂಲ್ ಲೀಗ್' ಪ್ರವೇಶ. 'ದಿ ನ್ಯೂ ಇಂಡಿಯಾ' ಹಾಗೂ 'ಕಾಮನ್ ವೀಲ್' ಇಂಗ್ಲಿಷ್ ನಿಯತಕಾಲಿಕ ಪತ್ರಿಕೆ ಪ್ರಾರಂಭ. ೧೮೯೮ರಲ್ಲಿ ಬನಾರಸ್‌ನಲ್ಲಿ 'ಸೆಂಟ್ರಲ್ ಹಿಂದೂ ಕಾಲೇಜ್'ನ ಸ್ಥಾಪನೆ. ಮಹಿಳೆಯರ ಶಿಕ್ಷಣಕ್ಕಾಗಿ ಶಾಲೆ – ಕಾಲೇಜುಗಳ ಸ್ಥಾಪನೆ. ಭಾರತೀಯ ತತ್ತ್ವಶಾಸ್ತ್ರಗಳ ಪ್ರತಿಪಾದನೆಗಾಗಿ 'ಥಿಯಾಸೋಫಿಕಲ್ ಸೊಸೈಟಿ ಆಫ್ ಇಂಡಿಯಾ' ಎಂಬ ಸಂಸ್ಥೆಯ ಆರಂಭ.
ಮರಣ : ೧೯೩೩ ಸೆಪ್ಟೆಂಬರ್ ೨೦ ರಂದು ಚೆನ್ನೈ ಸಮೀಪದ ಅಡ್ಯಾರ್‌ನಲ್ಲಿ.

❐ ಕೆಳಗಿನ ಗದ್ಯಭಾಗವು ಸ್ಪಷ್ಟಾರ್ಥವನ್ನು ಕೊಡುವಂತೆ ಲೇಖನ ಚಿಹ್ನೆಗಳನ್ನು ಉಪಯೋಗಿಸಿ ಪುನಃ ಬರೆಯಿರಿ.

ಅದೋ ಅಲ್ಲಿ ನೋಡಿ ಅದೇನು ಕಾಣುವುದು ಬಾನಿನಲ್ಲಿ

ಎಲ್ಲಿ ಓ ಹೌದು ನಕ್ಷತ್ರಕ್ಕೆ ಬಾಲ ಬಂದಂತೆ ತೋರುತ್ತದಲ್ಲ ಅದೇ ಧೂಮಕೇತು

ಏನು ಧೂಮಕೇತುವೇ ಅಯ್ಯೋ ಅನಿಷ್ಟ ನಿಲ್ಲಿ ನೀವಿಂದು ಅರಮನೆಯನ್ನು ಬಿಟ್ಟು ಎಲ್ಲಿಗೂಹೋಗಬಾರದು

ಅರಸನು ಅರಮನೆಯಿಂದ ಹೊರಗೆ ಹೊರಟನು ಕೂಡದು ಕೂಡದು ಬಾನಿನಲ್ಲಿ ಧೂಮಕೇತುವು ಕಾಣಿಸಿಕೊಂಡರೆ ರಾಜರಿಗೆ ಅನಿಷ್ಟವಂತೆ ಆದುದರಿಂದ ದಯಮಾಡಿ ನೀವಿಂದು ಅರಮನೆ ಬಿಟ್ಟು ಎಲ್ಲಿಗೂ ಹೋಗಬೇಡಿ.

* * *

# ನಾಡಿನ ಏಕತೆ

ಒಂದೆ ಸೂರಿನ ಕೆಳಗೆ ಇರುಳನ್ನು ಕಳೆದವರೆ,
ಒಂದೆ ಬಯಲಿಗೆ ಬಂದ ಜತೆಗಾರರೆ,
ಕಷ್ಟಕಾರ್ಪಣ್ಯಗಳ ದಾಟುತ್ತ ನಕ್ಕವರೆ,
ಬಾಳಿನೇರಿಳಿತಗಳಿಗಂಜದವರೆ,

ಏಕೆ ತಡಮಾಡುವಿರಿ? ಬನ್ನಿ ಜೀವನವೊಂದೆ;
ಮೈ ಬೇರೆಯಾದರೂ ಮನವು ಒಂದೆ,
ಭಾಷೆ ತಿಳಿಯದು ಎಂದು ದೂರ ಸರಿಯುವಿರೇಕೆ?
ಹೃದಯಕ್ಕೆ ತಲುಪುವುದು ಎಲ್ಲ ಭಾಷೆ

ಅಡ್ಡಗೋಡೆಗಳನ್ನು ಒಡೆದು ಮುಂದಕೆ ಬನ್ನಿ;
ಬೇಲಿಗಳ ಬಾಗಿಲನು ತಳ್ಳಿ ಬನ್ನಿ.
ಬನ್ನಿ ತೆರವಿಗೆ; ಬಂದು ಅಣಿಯಾದ ತಾಣದಲಿ
ಗೂಡ ಕಟ್ಟಿರಿ ನಾಡ ಸೆರಗಿನಲ್ಲಿ.

ಬರಲಿ ಯಾರೆಲ್ಲಿಂದ, ಕೂಗಿ 'ಅಣ್ಣಾ!' ಎಂದು
ಕೈಕುಲುಕಿ ಉಭಯ ಕುಶಲೋಪರಿಯಲಿ.
ಉತ್ತರವೊ ದಕ್ಷಿಣವೊ ಬರಿಯ ದಿಕ್ಕಿನ ಹೆಸರು.
ಒಲವು ಕರೆಯುತ್ತಲಿದೆ ಮನೆ ಮನೆಯಲಿ.



ಬೇರೆ ಎನ್ನುವ ಪದದ ಬೇರ ಕಿತ್ತೆಸೆದು ಬಿಡಿ;
ಎಲ್ಲರೊಂದೇ ಎನುವುದೊಂದೆ ಮಂತ್ರ.
ಆ ಮಕ್ಕಳೀಮಕ್ಕಳೊಂದಾಗಿ ನಗಲಿ ಬಿಡಿ;
ದೂರವಾಗಲಿ ಬೇರೆ ಎಂಬ ತಂತ್ರ!
ವೇಷಭೂಷಣ ಬೇರೆ ಬೇರೆ; ಒಳಗಿನ ಉಸಿರು
ಎಲ್ಲೆಲ್ಲು ಒಂದೆ; ಇದು ನಮ್ಮ ನಿಲುವು.
ದೂರದೂರುಗಳಿಂದ ನಮ್ಮೆಡೆಗೆ ಬಂದವರು
ನಮ್ಮ ಬಂಧುಗಳೆಂದೆ ತಿಳಿಯಬೇಕು.
ಉತ್ತರದ ಗಡಿ ನಮಗೆ ಉನ್ನತ ಹಿಮಾಚಲವೆ;
ಉಳಿದ ಕಡೆಗಳಲಿಹುದು ನೀಲಿಗಡಲು.
ಕೇಳಿಬರುತಿದೆ ನಾಡ ಹಾಡು ಆಗಸದೊಳಗೆ.
ಸಸ್ಯಶಾಮಲೆ ನಮ್ಮ ತಾಯಿನಾಡು.
ಎಲ್ಲರೂ ಎಲ್ಲರೊಳಿತಿಗೆ ದುಡಿವುದೇ ಧರ್ಮ;
ಈ ನಾಡಿನೇಕತೆಗೆ ಶ್ರಮಿಸಬನ್ನಿ
ಕಣ್ಣ ತುಂಬಲಿ ನಾಡಿನೇಕತೆಯ ಶುಭ ಚಿತ್ರ;
ತಾಯಡಿಗೆ ಹೂವಿಡಲು ಮುಂದೆ ಬನ್ನಿ!

– *ಕೆ.ಯಸ್. ನರಸಿಂಹಸ್ವಾಮಿ*

### ಕೆ.ಯಸ್. ನರಸಿಂಹಸ್ವಾಮಿ

ಮಂಡ್ಯಜಿಲ್ಲೆಯ ಕಿಕ್ಕೇರಿಯಲ್ಲಿ ೨೮.೧.೧೯೧೫ ರಂದು ಕೆ.ಎಸ್. ನರಸಿಂಹ ಸ್ವಾಮಿಯವರು ಜನಿಸಿದರು. ಅವರು ವಿಶ್ವಕರ್ನಾಟಕ, ಯುವಕರ್ನಾಟಕ ಪತ್ರಿಕೆಗಳಲ್ಲಿ ಸಂಪಾದಕರಾಗಿಯೂ ಮೈಸೂರು ನಗರಸಭಾ ಕಛೇರಿಯಲ್ಲಿ ಗುಮಾಸ್ತರಾಗಿಯೂ ಸೇವೆಸಲ್ಲಿಸಿದ್ದಾರೆ.

ದುಂಡುಮಲ್ಲಿಗೆ, ಮೈಸೂರು ಮಲ್ಲಿಗೆ, ಮನೆಯಿಂದ ಮನೆಗೆ, ಇರುವಂತಿಗೆ, ತೆರೆದ ಬಾಗಿಲು, ಐರಾವತ, ದೀಪದ ಮಲ್ಲಿ, ಉಂಗುರ, ಶಿಲಾಲತೆ ಮೊದಲಾದವು ಇವರ ಕವನ ಸಂಕಲನಗಳು. ಮಾರಿಯ ಕಲ್ಲು, ಉಪವನ, ದಮಯಂತಿ ಇತ್ಯಾದಿ ಇವರ ಗದ್ಯ ಲೇಖನಗಳು. 'ನಾಡಿನ ಏಕತೆ' ಕವನವನ್ನು 'ದುಂಡುಮಲ್ಲಿಗೆ' ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

- ❒ 'ವಿವಿಧತೆಯಲ್ಲಿ ಏಕತೆ ಇದು ಭಾರತದ ವಿಶೇಷತೆ' ಎಂಬುದನ್ನು ಕವನದ ಆಶಯದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.
- ❒ ನಾಡಿನ ಏಕತೆಯನ್ನು ಪ್ರತಿಪಾದಿಸುವ ಸಾಕಷ್ಟು ದೇಶಭಕ್ತಿಗೀತೆಗಳು ರಚನೆಗೊಂಡಿವೆ. ಅವುಗಳ ಸಾಲಿಗೆ ಒಂದು ಕವನವನ್ನು ನೀವು ರಚಿಸಿ ಸೇರಿಸಿರಿ.



❒ ‘ಸಾಮಾಜಿಕ ಬಿಕ್ಕಟ್ಟು ನಾಡಿನ ಪ್ರಗತಿಗೆ ಆಪತ್ತು’ ಎಂಬ ವಿಷಯದ ಕುರಿತು ನಿಮ್ಮ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಬರೆಯಿರಿ.

- ಈ ಕೆಳಗಿನ ಅಂಶಗಳು ಪ್ರಬಂಧದಲ್ಲಿರಲಿ.

  ಜಾತಿ–ಮತಭೇದ, ಭಯೋತ್ಪಾದನೆ, ಪ್ರತ್ಯೇಕತಾವಾದ, ಪ್ರಾದೇಶಿಕವಾದ, ಶೋಷಣೆ, ಅಸಹಿಷ್ಣುತೆ, ಅಸಹಕಾರ, ಧರ್ಮಾಂಧತೆ – ಇವುಗಳು ಪ್ರಗತಿಗೆ ಮಾರಕ.

  ಜಾತ್ಯತೀತತೆ, ಪರಸ್ಪರ ಗೌರವ, ಅಂಗೀಕಾರ, ಸಹಕಾರ, ಶೋಷಣೆ ಇಲ್ಲದಿರುವುದು, ಸ್ತ್ರೀ ಸಮಾನತೆ, ಪ್ರೀತಿ, ದಯೆ, ಅನುಕಂಪ ಇತ್ಯಾದಿ ಮಾನವೀಯ ಮೌಲ್ಯಗಳು ನಾಡಿನ ಪ್ರಗತಿಗೆ ಪೂರಕ.

***

# 2

# ಉದ್ಯೋಗ – ನೆಮ್ಮದಿ

# ‘ನನ್ನದಲ್ಲ’ ಎಂಬ ಭಾವ

ಬೆಂಗಳೂರಿನ ಎಂ.ಜಿ. ರೋಡಿನಲ್ಲಿ ನೀವು ನಿಂತಿದ್ದೀರಾ?! ನಿಮ್ಮ ಸುತ್ತ ಸಾವಿರಾರು ಜನರು ಓಡಾಡುತ್ತಿರುತ್ತಾರೆ. ಆದರೆ ನಿಮ್ಮನ್ನು ನೋಡಿ ನಗುವವರು ಒಬ್ಬರೂ ಇಲ್ಲ. ‘ಹಲೋ’ ಎನ್ನುವವರು ಯಾರೂ ಇಲ್ಲ. ಮನುಷ್ಯ ಸಂಬಂಧಗಳು ಎಷ್ಟೊಂದು ವಿಚಿತ್ರ ನೋಡಿ! ಎಲ್ಲರೂ ಮನುಷ್ಯರೇ ಆದರೂ ಪರಸ್ಪರ ಮಾತಿಲ್ಲ, ಕತೆಯಿಲ್ಲ, ನಗುವಿಲ್ಲ.

ಕರ್ನಾಟಕದ ಯಾವುದೇ ಊರಿನವನಿಗೆ ತನ್ನ ಹಳ್ಳಿ ‘ಬೋರ್’ ಅನ್ನಿಸಿದರೆ ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಒಂದರ್ಧ ದಿನ ಕಳೆದು ಬರಬೇಕು. ‘ಇದಕ್ಕಿಂತ ನನ್ನ ಊರೇ ಸುಖ’ ಎಂದೆನ್ನಿಸತೊಡಗಿ ಅವನು ಊರಕಡೆಗೆ ಯಾವಾಗ ಮರಳುವುದೆಂದು ತವಕಿಸತೊಡಗುತ್ತಾನೆ.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವನಿಗೆ ಚಿಕಾಗೋದ ಬೀದಿಯಲ್ಲಿ ನಿಂತಾಗಲೂ ಇದೇ ಅನುಭವವಾಗುವುದು. ಇದೊಂದು ರೀತಿಯ ‘ಅನಾಥ ಪ್ರಜ್ಞೆ’. ಕೊಂಚ ಎಕಡಮಿಕ್ ಶೈಲಿಯ ಪದ ಬಳಸುವುದಿದ್ದರೆ ‘ಪರಕೀಯ ಪ್ರಜ್ಞೆ’.

ಪರಕೀಯ ಪ್ರಜ್ಞೆ ಎಂಬುದು ಒಂದು ಮಾನಸಿಕ ಸ್ಥಿತಿ. ಐಟಿ ಉದ್ಯಮ ತುರೀಯಾವಸ್ಥೆಯಲ್ಲಿರುವಾಗ ಇತರ ಎಲ್ಲ ಕ್ಷೇತ್ರಗಳ ಉದ್ಯೋಗಿಗಳು ಪರಕೀಯ ಭಾವವನ್ನು ಅನುಭವಿಸಿದ್ದೇ. ಅದೇ ಕುಸಿತದ ಬಳಿಕ ನಾವು ಹೆಚ್ಚು ಹೆಚ್ಚು ಪರಕೀಯರಾಗುತ್ತಾ ಬರುತ್ತಿದ್ದೇವೆ. ಒಂದೆಡೆ ಪ್ರಾಕೃತಿಕ ವಿಕೋಪ, ಇನ್ನೊಂದೆಡೆ ಮನುಷ್ಯನ ಕೃತಕ ವೈಪರೀತ್ಯಗಳು– ಇವುಗಳ ನಡುವೆ ಪರಕೀಯತೆಯಿಲ್ಲದ ಮುಕ್ತ ಸಮಾಜದ ಕನಸು ಕಾಣಬಹುದೇ?

– **ಸರೂ**

*(ಉದಯವಾಣಿ ಸಾಪ್ತಾಹಿಕ ಪುರವಣಿ ದಿನಾಂಕ : ೨೦೦೯ ಅಕ್ಟೋಬರ್ ೧೧)*

❒ ಮೇಲಿನ ಲೇಖನವನ್ನು ಓದಿದಿರಲ್ಲವೇ? ಲೇಖಕರು ತಿಳಿಸಿರುವ ಸ್ಥಿತಿಗೆ ಕಾರಣಗಳೇನಾಗಿರಬಹುದು? ಊಹಿಸಿ ನಿಮ್ಮ ಅನಿಸಿಕೆಗಳನ್ನು ಟಿಪ್ಪಣಿಯಾಗಿ ಬರೆದು ತರಗತಿಯಲ್ಲಿ ಮಂಡಿಸಿರಿ.



# ಮೃಗ ಜಲ

ಮುಸ್ಸಂಜೆಯ ಆ ವೇಳೆಯಲ್ಲಿ ಪಾರ್ಕಿನ ಕಲ್ಲುಬೆಂಚಿನ ಮೇಲೆ ಕುಳಿತಿದ್ದ ಮಾಧವ ತೀರ ಖಿನ್ನನಾಗಿದ್ದ. 'ಇನ್ನೇನು ಗತಿ ತನಗೆ? ಇದ್ದ ಕೆಲಸವನ್ನೂ ಕಳೆದುಕೊಂಡು ಇಂದಿಗೆ ಹತ್ತನೇ ದಿನ. ನಿನ್ನೆ ಇರುಳಿನಿಂದಂತೂ ಕೈಲಿ ಬಿಡಿಗಾಸೂ ಇಲ್ಲ. ಈ ಕೆಲ ದಿನಗಳಲ್ಲಿ, ಹಾಗೆ ನೋಡಿದರೆ ಆ ಕೆಲಸದಲ್ಲಿದ್ದಾಗಿನಿಂದಲೇ ಬೇರೊಂದು ಉದ್ಯೋಗಕ್ಕಾಗಿ ತಾನು ಇನ್ನಿಲ್ಲದಂತೆ ಶ್ರಮಿಸಿದ್ದೆ. ಕಾರಣ ಆವಾಗ ತನಗಿದ್ದದ್ದು ಹಂಗಾಮಿ ಕೆಲಸ. ಆದರೆ ಬೇರೆ ಉದ್ಯೋಗ ಸಿಕ್ಕಿರಲಿಲ್ಲ. ಈಗಿನ್ನು ಹಳ್ಳಿಗೆ ತೆರಳುವುದೆ? ಛೇ, ಬೇಡವೆಂದು ಬಿಟ್ಟು ಬಂದಲ್ಲಿಗೇ ಮತ್ತೆ ಹೋಗುವುದೇ? ಅದೂ ತನ್ನಂತಹ ಮೇಧಾವಿ! ಇಡೀ ಜಿಲ್ಲೆಗೆ ರ್‍ಯಾಂಕ್ ಪಡೆದವನಲ್ಲವೇ ತಾನು? ಅಪ್ಪ ಏನೋ ಅವತ್ತು ಹೇಳಿದ್ದರು.'

"ಕೆಲಸ, ಕೆಲಸವೆಂದು ಎಷ್ಟು ಅಲೆಯುತ್ತೀ? ಅದರ ಬದಲಿಗೆ ತೋಟದ ಕೃಷಿ ಗಮನಿಸಿಕೊಂಡಿರಬಾರದೇ? ನನಗೂ ಮೊದಲಿನಂತೆ ಕೂಡುವುದಿಲ್ಲ. ಸರಿಯಾಗಿ ದುಡಿದರೆ ನಮ್ಮ ಭೂದೇವಿ ಗಂಜಿಗೆ ಮೋಸ ಮಾಡಲಿಕ್ಕಿಲ್ಲ ಖಂಡಿತ".

ಅದೇನೋ ನಿಜವಿದ್ದೀತು. ಆದರೆ ತಾನು! ಅದೂ ರ್‍ಯಾಂಕ್ ವಿಜೇತನಾಗಿ! ಮೈ, ಕೈ ಕೆಸರು ಮಾಡಿಕೊಳ್ಳುವುದರ ಕಲ್ಪನೆಯೇ ತನಗೆ ಸಹ್ಯವಾಗಿರಲಿಲ್ಲ. ಹಾಗೆಂದೆ ನಗರಕ್ಕೆ ಬಂದು ಬಿಟ್ಟೆ. ಆಮೇಲೆ ಎರಡೋ ಮೂರೋ ಕೆಲಸಗಳು ಸಿಕ್ಕಿದವಾದರೂ ಅವೆಲ್ಲವೂ ತಾತ್ಕಾಲಿಕ. ಮುಂದೇನು! ಏನೆಂಬ ಆತಂಕವನ್ನು ಒಡಲೊಳಗಿರಿಸಿಕೊಂಡು ಮೇಲ್ನೋಟಕ್ಕೆ ನಗುತ್ತಿದ್ದ ಆ ದಿನಗಳೆಲ್ಲವೂ ಸರಿದು ಇಂದು ತಾನು ನಿರ್ಗತಿಕ. ಇಂತಹ ಸೋಲಿನ ಮೋರೆ ಹೊತ್ತು ಹಳ್ಳಿಗೆ ಮರಳುವುದೆ? ಅದಕ್ಕಿಂತಲೂ ಸಾವೇ ಮೇಲಲ್ಲವೇ? ಯೋಚನೆ ಆ ಹಂತಕ್ಕೆ ತಲುಪಿದಾಗ ಮಾಧವ ಒಮ್ಮೆ ಬೆಚ್ಚಿಬಿದ್ದರೂ ಮರುಕ್ಷಣ, ಅದೇ ಏಕಾಗಬಾರದೆನ್ನಿಸಿತು. 'ಹಳ್ಳಿಗೆ ಹೋಗಿ ತನ್ನ ಸೋಲನ್ನಲ್ಲಿ ಜಾಹೀರುಪಡಿಸುವುದಕ್ಕಿಂತ ಸದ್ದಿಲ್ಲದೆ ಸಾವಿನ ಉಡಿಯೊಳಗೆ ಸೇರಿಕೊಳ್ಳುವದೇ ವಿಹಿತ' ಎಂದು ನಿರ್ಧರಿಸಿ ದೂರದಲ್ಲಿ ಕಾಣುತ್ತಿದ್ದ ರೈಲುಹಳಿಗಳತ್ತ ದೃಷ್ಟಿ ಹೂಡುತ್ತಿದ್ದಾಗ ಕೇಳಿಸಿತು ಹಿಂದಿನಿಂದ ಆ ಪ್ರಶ್ನೆ.

"ಹುರಿಗಾಳು, ಚಕ್ಲಿ, ವಡೆ ಎಲ್ಲ ತಾಜಾ ಇವೆ. ಬೇಕೆ ಸೋಮಿ?" ತಟ್ಟನೆ ಕೇಳಿಸಿದ ದನಿಗೆ ಬೆಚ್ಚಿ ತಿರುಗಿದರೆ ಅದೇ ಮುದುಕ. ಕುರುಕಲು ತಿಂಡಿ ಹೊತ್ತು ಮಾರುವ ಆತನನ್ನು ಈ ಮೊದಲು ಮಾಧವ ಕಂಡಿದ್ದ. ಕೆಲವೊಮ್ಮೆ ಅವನ್ನು ಕೊಂಡೂ ಇದ್ದ. ಆದರೆ ಈಗ ಕಾಸೇ ಇರಲಿಲ್ಲವಲ್ಲ! ಹಾಗೆಂದೆ ಬರಿದೆ ತಲೆ ಆಡಿಸಿದ. ಆದರೆ ವೃದ್ಧ ಮತ್ತೆ ಒತ್ತಾಯಿಸಿದಾಗ ಮಾತ್ರ ಏನೆನ್ನಿಸಿತೊ? ತಟ್ಟನೆ ಹೇಳಿಬಿಟ್ಟ. 'ವಿಷ ಕುಡಿಯಲೂ ಕೈಲಿ ಕಾಸಿಲ್ಲ. ಇನ್ನು ಹುರಿಗಾಳು ಬೇಕಂತೆ' ಆ ಮಾತು ಕೇಳುತ್ತಲೇ ಮುದುಕ ದಿಗ್ಭ್ರಾಂತನಾಗಿರಬೇಕು. ತನ್ನ ಡಬ್ಬ ಕೆಳಗಿಟ್ಟವನು, ತಾನೂ ಅಲ್ಲೇ ಕೂರುತ್ತ ಹೇಳಿದ "ಹಂಗ್ಯಾಕೆ ಆಡೀರಿ ಸೋಮಿ? ತಮಾಸೆಗೂ ಹಂಗೆಲ್ಲ ಹೇಳಬಾರ್ದು. ಏನೋ ಈವಾಗ ಕೆಟ್ ಕಾಲ, ಅದುಕ್ಕೇ ಕಾಸಿಲ್ಲ. ಈಗ ಹಂಗಾಯ್ತು ಅಂತ ಯಾವಾಗ್ಲೂ ಹಿಂಗೇ ಆಯ್ತುದಾ? ಒಳ್ಳೆದಾಗಿಯೇ ಆಯ್ತದೆ ಬುಡ್ತು ಅನ್ನಿ" ಹಾಗನ್ನುತ್ತಲೇ ಒಂದಷ್ಟು ಹುರಿಗಾಳನ್ನು ಕಾಗದಕ್ಕೆ ಸುರಿದು "ಕೊಳ್ಳಿ ಸೋಮಿ, ಕಾಸ್ಬೇಡ, ಇದ್ದಾಗ ಕೊಡೋವ್ರಂತೆ" ಎಂದು ಮಾಧವನ ಮುಂದೆ ಹಿಡಿದ. ಅವನು ಒಳ್ಳೆ ಮನಸ್ಸಿನಿಂದಲೇ ಅದನ್ನು ಹಿಡಿದಿದ್ದರೂ ಮೊದಲೇ ನೊಂದಿದ್ದ ಮಾಧವ ಯಃಕಶ್ಚಿತ್ ಹೊತ್ತು ಮಾರುವ ಮುದುಕ ಕೂಡ ತನ್ನ ಪರಿಸ್ಥಿತಿಯ ಬಗ್ಗೆ ವ್ಯಂಗ್ಯವಾಡುತ್ತಿದ್ದಾನೆಂದೇ ಭಾವಿಸಿ ಸಿಟ್ಟಿಗೆದ್ದು ಕಟಕಿದ "ನಿಜ, ನಿಜ ನೀನೂ ಆ ಒಳ್ಳೆಯ ನಿರೀಕ್ಷೆ ಮಾಡುತ್ತಲೇ



ಹೀಗೆ ಗೂಡೆ ಹೊತ್ತುಕೊಂಡು, ಈ ವಯಸ್ಸಿನಲ್ಲಿಯೂ ತಿರುಗುತ್ತಿದ್ದೀ ಅಲ್ಲವೇ?" ಅವನ ಮಾತಿನ ವ್ಯಂಗ್ಯ, ಖಾರ ವೃದ್ಧನಿಗೆ ತಿಳಿಯಿತೋ ಇಲ್ಲವೋ ಸ್ಥಿರ ದನಿಯಲ್ಲಿಯೆ ಉತ್ತರ ಬಂತು ಅವನಿಂದ. "ನಿಜಾ ಕಣಪ್ಪೋ, ಸರ್ಯಾಗಿ ಯೋಳ್ದೆ ನೀನು. ನಮ್ಗೂ ಈವಾಗ ಕ್ಯಟ್ ಕಾಲ. ದುಡೀತಿರೋ ಮಗ ನಾಲಕ್ಕು ದಿನ ಜರ ಬಂದು ಓಗೆ ಬುಟ್ಟ. ಅವ್ನು ಓದಾಂತ ಅಳ್ತಾ ಕೂತ್ರೆ ನಮ್ಮುನೆಲ್ಲ ಕರ್ಕಂಡೋದಾನಾ ಆ ಬಗವಂತ? ಊಹುಂ, ನಮ್ಮಾಯಸ್ಸು ಮುಗೀಬೇಕು. ಆ ಮ್ಯಾಕೇ ಓಗೋದು. ಅಲ್ಲೀ ತಂಕ ಇಂಗೇ ಜೀವ್ನ ಮಾಡಾದು" ತಟ್ಟನೆ ತಿಳಿದ ಸತ್ಯದಿಂದ ಮನಸ್ಸು ಗಲಿಬಿಲಿಗೊಳಗಾಗಿದ್ದಂತೆ ತಡೆಯಲಾಗದೆ ಮತ್ತೆ ಮೆಲ್ಲಗೆ ಪ್ರಶ್ನಿಸಿದ ಮಾಧವ. "ನೀವೆಷ್ಟು ಜನರಿದ್ದೀರಿ ಮನೆಯಲ್ಲಿ? ಜೀವನಕ್ಕೆ ಇದೇ ಕಸುಬೇ?" "ನಾನು ನನ್ನೆಂಡ್ತಿ, ನನ್ ಸೊಸಿ, ಮೂರ್ಜನಾ ಮಕ್ಳು ಇನ್ನೂ ಚಿಕ್ಕೋವ್ರು. ಮಕ್ಕಳನ್ನು ನನ್ನೆಂಡ್ತಿ ನೋಡ್ಕ್ಯಾತಾಳೆ. ಸೊಸಿ ಒಂದೇಲ್ಡು ಮನೆಕೆಲ್ಸ ಮಾಡ್ತವಳೆ. ನಾನು ಇಂಗೆ, ನನ್ನ ಕೈಲಾದ್ದ ಮಾಡಿ ಅಸ್ಟು, ಕಾಸು ತರ್ತೀನಿ. ಹೆಂಗೋ ನಡೀತದೆ. ಈವತ್ತೇನೋ ಕೆಟ್‌ಕಾಲ, ನಾಳೆ ಮಕ್ಳು ದೊಡ್ಡೋರಾಗೋವಾಗ ವಳ್ಳೇ ಕಾಲ ಬಂದೇಬತ್ತದೆ ಅಲ್ವರಾ? ಉಂ, ಕತ್ಲಾತು ಮತ್ತೆ ನಂಗ ಕಣ್ಣು ಕಾಣ್ಸಾಕಿಲ್ಲ. ನಾನು ಓಗ್ತೀನಿ. ನೀವೂ ಒರ್ಟೋಗಿ ಸೋಮಿ. ಬರ್ಲಾ?" ಮುದುಕ ಹೊರಟು ಹೋದರೂ ನಿಶ್ಚಲವಾಗಿ ಕೂತೇ ಇದ್ದ ಮಾಧವನ ಮನಸ್ಸು ಹೊಸ ತಿಳಿವಿನ ಬೆಳಕಿನಲ್ಲಿ ಗಾಢವಾಗಿ ಚಿಂತಿಸುತ್ತಿತ್ತು. ಆ ಹಣ್ಣುಮುದುಕನಿಗೆ ಒಳ್ಳೆ ಕಾಲ ಬರುವುದರ ಬಗ್ಗೆ ಅಷ್ಟೊಂದು ನಂಬಿಕೆ ಇದ್ದರೆ, ಇನ್ನು ಜಕ್ಕಜವ್ವನಿಗನಾದ ತನಗೆ ಎಷ್ಟಿರಬೇಡ? ಹಾಗೆ ನೋಡಿದರೆ ತನಗೆ ಅವನಂತಹ ಅತಂತ್ರ ಸ್ಥಿತಿಯಿಲ್ಲ.





ಚಿಕ್ಕದೇ ಆದರೂ ಸ್ವಂತದ್ದೇ ಆದ ಪುಟ್ಟ ಭೂಮಿ ಇದೆ. ಅಪ್ಪ ಆವತ್ತೇ ಹೇಳಿದಂತೆ ಚೆನ್ನಾಗಿ ದುಡಿದರೆ ಗಂಜಿಗೆ ತತ್ವಾರವಾಗದು. ತಾನೆಂತಹ ಮೂರ್ಖ, ಕೈಲಿದ್ದ ಅವಕಾಶವನ್ನು ಕಡೆಗಣಿಸಿ ಮೃಗಜಲದ ಬೆನ್ನು ಹಿಡಿದಿದ್ದ. ಅಷ್ಟೆಯೆ! ಅದು ಸಿಗಲಿಲ್ಲವೆಂದು ಪ್ರಾಣತ್ಯಾಗಕ್ಕೂ ಹೊರಟು, ತನ್ಮೂಲಕ ವಯಸ್ಸಾಗಿರುವ ಹೆತ್ತವರಿಗೆ ಭರಿಸಲಾಗದ ಆಘಾತವನ್ನು ನೀಡಲಿದ್ದ. ಬಹುಶಃ ಆ ದೇವರೇ ವೃದ್ಧನ ರೂಪದಲ್ಲಿ ಬಂದು ಅದನ್ನು ತಪ್ಪಿಸಿದನೇನೋ. ಯೋಚಿಸುತ್ತ ಎದ್ದ ಮಾಧವ, ಮತ್ತೆ ನಾಳೆ ಬೆಳಗಿನ ಬಸ್ಸಿಗೇ ಹಳ್ಳಿಗೆ ಹೊರಡಬೇಕು, ಎಂದು ನಿರ್ಧರಿಸಿ ಮುಂದೆ ಹೆಜ್ಜೆ ಹಾಕಿದಾಗ ಅವನ ಮನಸ್ಸು ಭವಿಷ್ಯದ ಹೊಂಗನಸುಗಳನ್ನು ಕಾಣುವುದರಲ್ಲಿ ತೊಡಗಿತ್ತು.

**– ಗಂಗಾ ಪಾದೇಕಲ್**

**ಗಂಗಾ ಪಾದೇಕಲ್**

ಗಂಗಾಪಾದೇಕಲ್ ಅವರು ದಕ್ಷಿಣಕನ್ನಡ ಜಿಲ್ಲೆಯ ಪಾದೆಕಲ್ಲಿನವರು. ಕನ್ನಡದ ಪ್ರಮುಖ ಕತೆಗಾರ್ತಿಯಾಗಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಅವರು ಹಸನುಗೊಳಿಸಿದ್ದಾರೆ. ಪುಲಪೇಡಿ ಮತ್ತು ಇತರ ಕಥೆಗಳು, ಹೆಜ್ಜೆ ಮೂಡದ ಹಾದಿ, ಹೊಸ ಹೆಜ್ಜೆ, ನೆಲೆ ತಪ್ಪಿದ ಹಕ್ಕಿ ಇತ್ಯಾದಿ ಇವರ ಸಣ್ಣಕಥಾ ಸಂಕಲನಗಳು. ಹೊನ್ನಳ್ಳಿಯಲ್ಲೊಮ್ಮೆ, ಸೆರೆಯಿಂದ ಹೊರಗೆ, ಪಯಣದ ಹಾದಿಯಲ್ಲಿ ಮುಂತಾದ ಹಲವಾರು ಕಾದಂಬರಿಗಳನ್ನು ಬರೆದಿದ್ದಾರೆ. ಸಣ್ಣಕಥೆ ೧೯೯೪ ಮತ್ತು ಪ್ರತಿಬಿಂಬ ಇವರ ಸಂಪಾದಿತ ಕೃತಿಗಳು. ಪುಲಪೇಡಿ ಕತೆಯು ೧೯೮೨ ರಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡು ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ.

- ಮೇಲಿನ ಕಥೆಯ ಪ್ರಧಾನ ಘಟನೆಗಳನ್ನು ಗುರುತಿಸಿ ಅನುಕ್ರಮವಾಗಿ ಬರೆಯಿರಿ.
- ಕಡಲೆಕಾಳು ಮಾರುವ ಮುದುಕನ ಮಾತಿನಿಂದಾಗಿ ಮಾಧವನು ತೀರ್ಮಾನವನ್ನು ಬದಲಿಸಿದನಲ್ಲವೆ? ಹಳ್ಳಿಗೆ ಹೋದ ಮಾಧವನು ಏನು ಮಾಡಿರಬಹುದು? ಊಹಿಸಿ ಕಥೆಯನ್ನು ಮುಂದುವರಿಸಿ ಬರೆಯಿರಿ.
- ಕಥೆಯಲ್ಲಿ ಬಂದಿರುವ ಗ್ರಾಮ್ಯಶೈಲಿಯ ವಾಕ್ಯಗಳನ್ನು ಆಯ್ದು ಅವುಗಳನ್ನು ಶಿಷ್ಟಕನ್ನಡ ರೂಪದಲ್ಲಿ ಬರೆಯಿರಿ.
- 'ಮೃಗಜಲ' ಕಥೆಯನ್ನಾಧರಿಸಿ ಮಾಧವನ ಸಾಕ್ಷ್ಯಚಿತ್ರವೊಂದನ್ನು ತಯಾರಿಸಲು ಉದ್ದೇಶಿಸಲಾಗಿದೆ. ಸೂಕ್ತವಾದ ರೀತಿಯಲ್ಲಿ ಕಥೆಯಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡು ಚಿತ್ರಕಥೆಯನ್ನು ಬರೆಯಿರಿ.

* * *



# ಶ್ರಮ – ಸಂಸ್ಕೃತಿ

ಮಾನವನ ಬೆವರು ಬಾಳಿನ ತವರು
ಅರಿವಾಗಿ ಅರಳಿ ಬೆಳಕಾಯಿತು
ಸಂಸ್ಕೃತಿಗೆ ದುಡಿಮೆ ಬೇರಾಯಿತು ॥

ಬಂಡೆಗಟ್ಟಿದ ಬೆಟ್ಟ
ಹಸಿರು ತುಂಬಿದ ಘಟ್ಟ
ಮಾನವನು ಮೈ ಏರಿ ಮಾತಾಡಿದ
ಹೋರಾಟ ನಡೆಸುತ್ತ
ಒಂದಾಗಿ ಬದುಕುತ್ತ
ಹೊಸ ಗೂಡು ಹುಡುಕುತ್ತ ನಡೆದಾಡಿದ

ಕಾಡು ಮೇಡಿನ ಹಾಡು
ಕೂಗಿ ಕರೆಯುವ ನಾಡು
ದುಡಿಮೆಗಾರನು ಕೊಟ್ಟ ಹೊಸತು ರೂಪ
ಸಿಡಿಲು ಸಂಚಿನ ಮೋಡ
ಬಿರುಗಾಳಿ ಮಳೆ ನೋಡ
ತಾಳಿದನು ಕೊರೆವ ಚಳಿ ಬಿಸಿಲ ತಾಪ ॥

ಧುಮುಕಿದವು ಜಲಪಾತ
ಕೆಣಕಿದವು ಹಿಮಪಾತ
ಜಗ್ಗದೆಯೆ ಹೋರಾಡಿದ
ತಲೆಮಾರು ಕಳೆಯುತ್ತ
ಮನೆಮಾರು ಬೆಳೆಯುತ್ತ
ನೋವು ನಲಿವಿನ ನಡುವೆ ಉಸಿರಾಡಿದ ॥

– ***ಬರಗೂರು ರಾಮಚಂದ್ರಪ್ಪ***

- ❒ ಮೇಲಿನ ಕವನಕ್ಕೆ ಹೊಂದುವ ಬೇರೆ ಯಾವುದಾದರೂ ಎರಡು ಶೀರ್ಷಿಕೆಗಳನ್ನು ಬರೆಯಿರಿ.
- ❒ ಕವನದ ಆಸ್ವಾದನ ಟಿಪ್ಪಣಿ ಬರೆಯಿರಿ.
- ❒ ಈ ಕೆಳಗೆ ಕೊಡಲಾದ ಗದ್ಯ ಭಾಗವನ್ನು ಓದಿ ಅದರಲ್ಲಿರುವ ವಿಚಾರಗಳು ವಸ್ತುವಾಗಿರುವ ಕವನವೊಂದನ್ನು ರಚಿಸಿರಿ.

ಕಾಲ ಬದಲಾಗಿದೆ. ಹಿಂದಿನಂತೆ ಜನ ಹಳ್ಳಿ–ಮನೆ–ತೋಟ–ಊಟ ಎಂಬಲ್ಲಿಗೆ ತೃಪ್ತಿಪಟ್ಟು ಕುಳಿತುಕೊಳ್ಳುವವರಲ್ಲ. ಸಾಧಿಸುವ ಛಲ ಹಿಂದಿನವರಷ್ಟು ಇಲ್ಲದಿದ್ದರೂ ಏನೋ ಹೊಸತನ್ನು ಹುಡುಕುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ತನ್ನ ಊರು ಮತ್ತು ಮನೆಯಿಂದಾಚೆ ಸಾಗುವ ತುಡಿತ ಯೌವನಕ್ಕೆ ಕಾಲಿಟ್ಟಾಗಲೇ



ಆರಂಭವಾಗುತ್ತದೆ. ಓದಿನಲ್ಲಿ, ಕಲಿಕೆಯಲ್ಲಿ ವಿಶಾಲವಾಗಿ ನಿಂತ ವಿದ್ಯಾಕ್ಷೇತ್ರದಲ್ಲಿ ಜನ ವಿಹರಿಸುತ್ತಲೇ ಇರುತ್ತಾರೆ. ಆದರೆ ನಿರ್ದಿಷ್ಟ ಗುರಿ ಎಷ್ಟು ಮಂದಿಗೆ ಇರುತ್ತದೆ? ಕಲಿತ ವಿಷಯಕ್ಕೆ ತಕ್ಕ ಕೆಲಸದ ಬೇಟೆಯಲ್ಲಿ ದಿನಗಳು ಒಂದಷ್ಟು ಉರುಳಿ ಹೋಗುತ್ತವೆ. ಕೊನೆಗೆ ನಿರಾಶೆಯ ಬಿಸಿಗಾಳಿ ಬೀಸಿ 'ಬದುಕು ಬರಡು' ಎನಿಸುವುದು ಕಂಡು ಬರುತ್ತದೆ. ಮಹತ್ವಾಕಾಂಕ್ಷೆಯ ಕೈಗೆ ಕೊಟ್ಟ ಮನಸ್ಸು ಮರೀಚಿಕೆಯ ಬೆನ್ನುಹತ್ತಿದ ಕುದುರೆಯಾಗುತ್ತದೆ.

ಹೀಗಾಗಬಾರದು ಪ್ರತಿಯೊಬ್ಬರು ತಮ್ಮ ಇತಿಮಿತಿಗಳನ್ನು ಅರಿತುಕೊಂಡು, ಅದಕ್ಕೆ ಹೊಂದಿಕೊಂಡು ಮುಂದುವರಿಯುವಂತಾಗಬೇಕು. ಸ್ವಾಸ್ಥ್ಯ ಜೀವನವನ್ನು ನಡೆಸಲು ಸಾಧ್ಯವಾಗಬೇಕು.

* * *

## ಬೆಟ್ಟದ ಮೇಲೊಂದು ಮನೆಯ ಮಾಡಿ

ಒಂದು ಮೂಲೆಯಲ್ಲಿ ನಿಂತು ನೋಡಿದರೆ ಗೌಹಾಟಿ ನಮ್ಮ ಮಡಿಕೇರಿಯಂತೆ ಕಾಣುತ್ತದೆ. ಗುಡ್ಡದ ಮೇಲೆ ಕಟ್ಟಿದ ಮನೆಗಳು, ಗೆರೆ ಎಳೆದಂತೆ ಹರಿದಾಡುವ ರಸ್ತೆಗಳು, ವಿದ್ಯುತ್ ಕಂಬಗಳು, ಮೈಕ್ರೋವೇವ್ ರಿಸೀವರ್‌ಗಳು. ಹಚ್ಚ ಹಸಿರಿನಿಂದ ನಿಗಿನಿಗಿ ಹೊಳೆಯುವ ಗುಡ್ಡ. ಗುಡ್ಡದ ಬುಡಕ್ಕೆ ಬಿಚ್ಚಿಕೊಂಡಿರುವ ಊರು. ಹಳ್ಳಿಯೂ ಅಲ್ಲದ ಪಟ್ಟಣವೂ ಅಲ್ಲದ ಊರು.

ಭಾರತದ ರಾಜಧಾನಿ ನಗರಗಳಿಗೆ ಹೋಲಿಸಿದರೆ ಗೌಹಾಟಿ ಅಷ್ಟೊಂದು ಕೊಳಕು ನಗರವಲ್ಲ ಎನಿಸುತ್ತದೆ. ಹತ್ತೋ ಹನ್ನೊಂದೋ ಲಕ್ಷ ಜನಸಂಖ್ಯೆ ಇರುವ ಈ ಊರು ಬೆಂಗಳೂರಿನಂತೆ ಸುಂದರವಾದ ನಗರವೇನಲ್ಲ. ರಸ್ತೆಗಳು ಹಾಳಾಗಿರುವುವು, ನೀರಿನ ಪೈಪುಗಳು ಒಡೆದುಕೊಂಡು ರಸ್ತೆಗಳು ಕೊಚ್ಚೆಗಳಾಗಿರುವುವು. ರಾತ್ರಿ ಬೀದಿದೀಪಗಳು





ಉರಿಯದೆ ಅನೇಕ ಭಾಗಗಳು ಕತ್ತಲಮಯವಾಗಿರುವುವು. ಇತ್ಯಾದಿ ಅನೇಕ ಸಂಗತಿಗಳು ಸಾಮಾನ್ಯವಾದರೂ ಈ ಊರಿಗೊಂದು ಸೌಂದರ್ಯ ಇರುವುದು ಕಂಡುಬರುತ್ತದೆ. ಹಸಿರು ಗುಡ್ಡಗಳ ಹಿನ್ನೆಲೆ ಈ ಸೌಂದರ್ಯಕ್ಕೆ ಒಂದು ಕಾರಣವಾದರೆ ಇಲ್ಲಿನ ಮನೆಗಳ ರಚನಾ ವಿನ್ಯಾಸ ಇನ್ನೊಂದು ಕಾರಣ. ಬಿದಿರನ್ನು ಅಪಾರವಾಗಿ ಬೆಳೆಯುವ ಅಸ್ಸಾಂ ರಾಜ್ಯ ಅದರ ಬಳಕೆಯಲ್ಲೂ ಧಾರಾಳತನ ತೋರಿದೆ. ಅಲಂಕಾರಕ್ಕೂ ಬಿದಿರು; ಅಗತ್ಯಕ್ಕೂ ಬಿದಿರು. ಪ್ರತಿ ಮನೆಯ ರಚನೆಯಲ್ಲೂ ಈ ಬಿದಿರಿನ ಬಳಕೆಯನ್ನು ಕಾಣಬಹುದು. ಅತಿ ಬಡವರ ಮನೆಗಳ ಗೋಡೆಗಳು ರಚನೆಯಾಗುವುದು ಬಿದಿರಿನ ತಡಿಕೆಗಳಿಂದ. ಕೆಲವರು ಈ ಗೋಡೆಗಳಿಗೆ ಪ್ಲಾಸ್ಟರ್ ಮಾಡಿ ಬಿದಿರು ಕಾಣದಂತೆ ಮಾಡಿದರೆ ಹಲವರು ಅದೇನೂ ಮಾಡದೆ ಸರಳ ಸೌಂದರ್ಯ ಹೊಮ್ಮಲು ಬಿಡುತ್ತಾರೆ. ಹುಲ್ಲಿನ ಅಥವಾ ಜಿಂಕ್‌ಷೀಟುಗಳ ಮಾಡು. ಕೊಳೆಗೇರಿಯ ಮನೆಗಳಿಗೂ ಈ ಬಿದಿರು ಮತ್ತು ಹುಲ್ಲಿನ ಮಾಡೇ ಆಧಾರ. ಇಟ್ಟಿಗೆ–ಸಿಮೆಂಟುಗಳ ಗೋಡೆಗಳಿಗೂ ಇಲ್ಲಿ ಜಿಂಕ್‌ಷೀಟುಗಳ ಮಾಡು ಸಾಮಾನ್ಯ. ಅಪಾರವಾಗಿ ಸುರಿಯುವ ಮಳೆ ಇದಕ್ಕೆ ಕಾರಣವಾಗಿರಬಹುದು.

ಈ ಊರಿಗೆ ಕಾಲಿಟ್ಟಾಗ ಮೊದಲು ನನ್ನ ಗಮನ ಹರಿದದ್ದು ಸುತ್ತ ಹರಡಿಕೊಂಡ ಹಸಿರು ಗುಡ್ಡಗಳ ಸಾಲಿನ ಕಡೆಗಾದರೆ ನಂತರ ನನ್ನ ಗಮನ ಸೆಳೆದುಕೊಂಡವು ಮೂತಿ ಇರುವ ಸಿಟಿ ಬಸ್ಸುಗಳು. ಇಂಗ್ಲೆಂಡಿನಲ್ಲಿ ಹದಿನಾರನೆಯ ಅಥವಾ ಹದಿನೆಂಟನೆಯ ಶತಮಾನದಲ್ಲಿ ಇದ್ದಿರಬಹುದಾದ ಈ ಮೂತಿ ಬಸ್ಸುಗಳು ಮ್ಯೂಸಿಯಂ ಪೀಸುಗಳೋ ಅಥವಾ ಪ್ರಯಾಣಿಕರ ಸೌಲಭ್ಯಕ್ಕಾಗಿ ಓಡುತ್ತಿರುವ ಬಸ್ಸುಗಳೋ ತಿಳಿಯಲಿಲ್ಲ. ನೋಡೋಣವೆಂದು ಹತ್ತಿದರೆ ಪುಟ್ಟ ಬಸ್ಸಿನ ತುಂಬ ಜನಗಳು. ಯಾರಿಗೂ ತರಾತುರಿ ಇದ್ದಂತೆ ಕಾಣುತ್ತಿರಲಿಲ್ಲ. ಕಂಡಕ್ಟರ್‌ಗೆ ಆತುರ ಎಲ್ಲಿರಲು ಸಾಧ್ಯ? ಕೆಲವು ಬಸ್ಸುಗಳಲ್ಲಂತೂ ಕಂಡಕ್ಟರ್ ಯಾರು ಎಂಬುದೇ ತಿಳಿಯುವುದಿಲ್ಲ. ಯೂನಿಫಾರಂ ಇಲ್ಲದೆ, ಪಾನ್ ಜಗಿಯುತ್ತ, ಹೀಗೆ ಪ್ರಯಾಣಿಕನಂತೆ ಬಂದು, ಮುಟ್ಟಿ ಮುಟ್ಟಿ ಹಣ ಕೇಳುವ ಕಂಡಕ್ಟರ್. ಮೊದಲಬಾರಿಗೆ ಆತನಿಗೆ ಹಣ ಕೊಡುವುದಕ್ಕೆ ನನಗೆ ಅನುಮಾನವಾಯಿತು. ಟಿಕೆಟ್ಟನ್ನೂ ಕೊಡದೇ ಚಿಲ್ಲರೆಯನ್ನೂ ಕೊಡದೇ ಪಾನ್ ಜಗಿಯುತ್ತ ಆತ ಮುಂದಿನ ಪ್ರಯಾಣಿಕರತ್ತ ಹೋದಾಗ ನನಗಂತೂ ಏನು ಮಾಡುವುದೋ ತಿಳಿಯಲಿಲ್ಲ. ಆದರೆ ನನ್ನ ಸ್ಟಾಪ್ ಬಂದಾಗ ನನಗೆ ಅದನ್ನು ತಿಳಿಸಿ, ಇಳಿದುಕೊಳ್ಳಲು ಹೇಳಿ, ಚಿಲ್ಲರೆಯನ್ನುಕೊಟ್ಟು ನಿಧಾನಕ್ಕೆ ರೈಟ್ ಹೇಳಿದ ಈ ಕಂಡಕ್ಟರ್‌ಗೆ ಮನದಲ್ಲೇ ವಂದಿಸಿದೆ. ನೀವು ಯಾವುದೋ ಬಸ್ಸು ಹತ್ತ ಬೇಕಾದವರು, ಮತ್ತಾವುದನ್ನೋ ಹತ್ತಿ ಪ್ರಯಾಣಿಸುತ್ತಿದ್ದರೂ ಕಂಡಕ್ಟರ್‌ನ ತಾಳ್ಮೆ ಕಳೆಯುವುದಿಲ್ಲ. ಆತ ಸಾವಧಾನವಾಗಿ ಉತ್ತರಿಸುತ್ತಾನೆ. ಪ್ರಯಾಣಿಕರೂ ಅಷ್ಟೆ. ನಿಮ್ಮನ್ನು ಸರಿಯಾಗಿ ಗೈಡ್ ಮಾಡುತ್ತಾರೆ. ತಾಳ್ಮೆಯಿಂದ, ಪ್ರೀತಿಯಿಂದ ನಿಮಗೆ ಮಾಹಿತಿ ನೀಡುತ್ತಾರೆ.

ಈ ಮೂತಿಗಳು ಮುಂದಕ್ಕೆ ಚಲಿಸಲಾರದಂತೆ ಕಂಡರೂ, ನಿರಾತಂಕವಾಗಿ ಓಡುತ್ತವೆ. ಬಹಳ ನಿಧಾನವಾಗಿ ಗೌಹಾಟಿಯ ಸಾವಿರಾರು ಪ್ರಯಾಣಿಕರು ಈ ಬಸ್ಸುಗಳಲ್ಲಿ ನಿತ್ಯವೂ ಓಡಾಡುತ್ತಿರುತ್ತಾರೆ. ಎಲ್ಲಿಯೋ ಹತ್ತಿ, ಇನ್ನೆಲ್ಲಿಯೋ ಇಳಿದು ಎಷ್ಟೇ ದೂರ ಪ್ರಯಾಣ ಮಾಡಿದರೂ ಈ ಬಸ್ಸುಗಳಲ್ಲಿ ಟಿಕೆಟಿನ ಬೆಲೆ 50 ಪೈಸೆ, ಕಲ್ಕತ್ತಾದ ಅನೇಕ ಸಿಟಿ ಬಸ್ಸುಗಳಲ್ಲಿರುವಂತೆ ಈ ಮೂತಿ ಬಸ್ಸುಗಳಲ್ಲದೆ, ಮೂತಿ ಇಲ್ಲದ ದೊಡ್ಡ ಬಸ್ಸುಗಳು, ಮಿನಿ ಬಸ್ಸುಗಳು. ಈ ನಗರದಲ್ಲಿ ಸಾರಿಗೆ ವ್ಯವಸ್ಥೆಯಲ್ಲಿ ಗೌಹಾಟಿ ಕಲ್ಕತ್ತಾ ಮಾದರಿಯನ್ನೇ ಅನುಸರಿಸಿರುವಂತಿದೆ. ಸರ್ಕಾರದ ಜೊತೆಗೆ ಖಾಸಗೀ ವ್ಯಕ್ತಿಗಳು, ಸಾರಿಗೆ ವ್ಯವಸ್ಥೆಯಲ್ಲಿ ಪಾಲು ಪಡೆದಿದ್ದಾರೆ.

ಈ ಗೌಹಾಟಿ ಮಡಿಕೇರಿಯನ್ನು ನೆನಪಿಸಿದರೂ ಇಲ್ಲಿನ ಬಿಸಿಲು– ಧಗೆ ನೆನಪಿಸುವುದು ಮದ್ರಾಸನ್ನು ಅಥವಾ ಕರ್ನಾಟಕದ ಮಂಗಳೂರನ್ನು. ಮಂಗಳೂರಿನಲ್ಲಿ ಕೊನೆಯ ಪಕ್ಷ ಕಡಲಿನ ಮೇಲಿಂದ ಬೀಸಿ ಬರುವ ಗಾಳಿಯಾದರೂ ಇರುತ್ತದೆ ಇಲ್ಲಿ ಅದಿರುವುದಿಲ್ಲ. ಅಸ್ಸಾಂನಲ್ಲಿ ಸಂಚರಿಸುವುದಕ್ಕೆ ಅಕ್ಟೋಬರ್ ಸೂಕ್ತ ಕಾಲ ಎಂದು



ಹಲವರು ಹೇಳಿದ್ದ ಕಾರಣ ಅಕ್ಟೋಬರ್ ಮೊದಲ ವಾರವೇ ಈ ರಾಜ್ಯದಲ್ಲಿದ್ದೆ. ಬಿಸಿಲು ಅಗಾಧವಾಗಿತ್ತು. ಇದೇಕೆ ಹೀಗೆ ಎಂದು ಸ್ಥಳೀಯರನ್ನು ಕೇಳಿದರೆ, ಇದೇ ತಾನೆ, ಮಳೆಗಾಲ, ಈ ರಾಜ್ಯದಲ್ಲಿ ಯಾವಾಗ ಮುಗಿಯುತ್ತದೆ ಎಂದು ಹೇಳುವುದೇ ಕಷ್ಟ. ಸೆಪ್ಟೆಂಬರ್ ಕೊನೆಗೆ ಮಳೆಗಾಲ ಮುಗಿಯಿತು ಎಂದರೆ ಡಿಸೆಂಬರ್‌ವರೆಗೆ ಮಳೆ ಬರುತ್ತಲೇ ಇರುತ್ತದೆ. ನದಿಗಳಲ್ಲಿ ನೀರಿನ ಮಟ್ಟ ಏರುತ್ತಲೇ ಇರುವುದು, ಪ್ರವಾಹಗಳು ಸೆಪ್ಟಂಬರ್ ನಂತರವೂ ಕಾಣಿಸಿಕೊಳ್ಳುವುದು ಇಲ್ಲಿ ಸಾಮಾನ್ಯ ಸಂಗತಿ. ನೆತ್ತಿಯನ್ನು ಸುಡುವ ಮಧ್ಯಾಹ್ನಗಳು ಮರೆಯಾಗಿ, ಧೋ ಎಂದು ಸುರಿಯುವ ಮಳೆ ಕಾಣಿಸಿಕೊಂಡು ಬ್ರಹ್ಮಪುತ್ರಾ ನದಿಯಲ್ಲಿ ನೀರಿನ ಮಟ್ಟ ಏರಿದ್ದು, ಅದರ ಉಪನದಿಗಳಲ್ಲಿ ಪ್ರವಾಹ ಹರಿದಿದ್ದು ನಾನು ಗೌಹಾಟಿಯಲ್ಲಿದ್ದ, ಮಳೆಗಾಲ ಮುಗಿಯಿತೆಂದುಕೊಂಡಿದ್ದ ಅವಧಿಯಲ್ಲಿಯೇ.

ದಿಸ್‌ಪುರ ಜೋಡಿರಸ್ತೆಯಲ್ಲಿ ಸಾಗುತ್ತಿದ್ದೆ. ದಿಸ್‌ಪುರ, ಗೌಹಾಟಿಗೆ ಹೊಂದಿಕೊಂಡ ಅವಳಿ ನಗರ. ಅಸ್ಸಾಂನ ಸದ್ಯದ ರಾಜಧಾನಿ. ಇದನ್ನು 'ತಾತ್ಕಾಲಿಕ ರಾಜಧಾನಿ' ಎಂದು ಕಳೆದ ಹದಿನೈದು ವರ್ಷಗಳಿಂದ ಹೇಳಲಾಗುತ್ತಿದೆ. ಆದರೆ ಶಾಶ್ವತ ರಾಜಧಾನಿಯಾಗಿ ಮಾರ್ಪಡಿಸುವ ಎಲ್ಲ ಪ್ರಯತ್ನ ಕಂಡುಬರುತ್ತಿದೆ. ವಿಶಾಲ ರಸ್ತೆಗಳು, ದೊಡ್ಡ ಕಟ್ಟಡಗಳು, ಯೋಜಿತ ನಿರ್ಮಾಣ ಎಲ್ಲದಕ್ಕೂ ಆಧುನಿಕ ಸ್ಪರ್ಶ. ಗೌಹಾಟಿಗಿಂತ ಮೇಲುಗೈ ಪ್ರದರ್ಶಿಸುವಂತಿದೆ ದಿಸ್‌ಪುರ. ನನ್ನನ್ನು ಹೊತ್ತಿದ್ದ ಸೈಕಲ್‌ರಿಕ್ಷಾ ಒಂದಿಷ್ಟು ವೇಗವಾಗಿಯೇ ಓಡುತ್ತಿತ್ತು. ಏರುತಗ್ಗು ಇಲ್ಲದ ಸಮತಟ್ಟಾದ ರಸ್ತೆಯಾದ ಕಾರಣ ಈ ವೇಗ ಸಾಧ್ಯವಾಗಿತ್ತು. ಇಲ್ಲವಾದರೆ ಈ ರಿಕ್ಷಾ ತುಳಿಯುವಾತ ಬಹಳ ಆಯಾಸಪಡುತ್ತಾನೆ. ನನಗೆ ಈ ಸೈಕಲ್ ರಿಕ್ಷಾಗಳನ್ನು ಹತ್ತುವುದೆಂದರೆ ಹಿಂಸೆಯ ಅನುಭವ. ಏರುದಾರಿಯಾದರೆ ಸೈಕಲ್‌ರಿಕ್ಷಾ ತುಳಿಯುವಾತನ ಅವಸ್ಥೆ ನೋಡಲಾಗುವುದಿಲ್ಲ. ಅದನ್ನು ಗಮನಿಸಿಯೂ ರಿಕ್ಷಾದಲ್ಲಿ ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ಇದನ್ನು ಯೋಚಿಸಿ ಆಟೋರಿಕ್ಷಾಗಳಲ್ಲಿ ಹೋಗೋಣವೆಂದರೆ ಇನ್ನೊಂದು ಬಗೆಯ ಸಂಕಟ. 'ಎಲ್ಲರೂ ಹೀಗೆ ಆಟೋರಿಕ್ಷಾಗಳ ಮೊರೆ ಹೊಕ್ಕರೆ ಸೈಕಲ್ ರಿಕ್ಷಾ ಓಡಿಸುವವರ ಗತಿ ಏನು?' ಅವರ ಅನುಭವ ಪ್ರಕಾರ ಬಹುಪಾಲು ಸೈಕಲ್‌ರಿಕ್ಷಾ ಚಾಲಕರು ಪ್ರಾಮಾಣಿಕರು. ಅವರ ದರ ಯಾರೂ ಒಪ್ಪುವಂಥದ್ದು. ಆದರೆ ಆಟೋ ಚಾಲಕರು ಹತ್ತುಹದಿನೈದು ರೂಪಾಯಿಗಿಂತ ಕಡಿಮೆ ಹೇಳಿದ್ದು ನಾನು ಕೇಳಲೇ ಇಲ್ಲ. ಮೀಟರ್ ಹಾಕದೆ ಕನಿಷ್ಠ ದೂರಕ್ಕೂ ಹತ್ತು ರೂಪಾಯಿ ಕೇಳಿದರೆ ಹೇಗಾಗುವುದಿಲ್ಲ? ನನಗೆ ಇದೊಂದು ಗಂಭೀರ ವಿಚಾರ ಎನಿಸಿತು. ಇದು ಯಾಕೆ ಹೀಗೆ ಎಂದು ಮಿತ್ರರನ್ನು ವಿಚಾರಿಸಿದೆ. ದಕ್ಷಿಣ ಭಾರತದ ಮಿತ್ರರೊಬ್ಬರು ಹೇಳಿದರು– ಬಹುಪಾಲು ಸೈಕಲ್‌ರಿಕ್ಷಾ ಚಾಲಕರು ಬಿಹಾರಿಗಳು. ಬಿಹಾರಿಗಳು ಬಹಳ ಶ್ರಮಜೀವಿಗಳು. ಹತ್ತಾರು ರೂಪಾಯಿಗಾಗಿ ಇಡೀ ದಿನ ಸೈಕಲ್ ತುಳಿಯಬಲ್ಲ ಗಟ್ಟಿಗರು. ಜೊತೆಗೆ ಹೊರಗಿನಿಂದ ಬಂದ ಅವರಿಗೆ ದುಡಿಮೆ ಅನಿವಾರ್ಯ. ಆದರೆ ಆಟೋ ಚಾಲಕರಲ್ಲಿ ಅನೇಕರು ಗೌಹಾಟಿಯವರು; ಅವರಿಗೆ ಮನೆ, ಮಠ, ಇತರ ಉದ್ಯೋಗ ಇರುವ ಕಾರಣ ಅವರು ಎಷ್ಟು ದುಡಿದರೂ ನಡೆಯುತ್ತದೆ.

ಸಂಜೆಯ ಐದು ಗಂಟೆಗೆ ಸೂರ್ಯ ಮುಳುಗಿ ದಿಸ್‌ಪುರವನ್ನು ಕತ್ತಲೆ ಆವರಿಸುತ್ತಿತ್ತು. ಬೀದಿದೀಪಗಳು ಬೆಳಗುತ್ತಿದ್ದುವು. ರಸ್ತೆ ಬದಿಗೆ ದೂರದಲ್ಲಿ ಬಿದ್ದುಕೊಂಡ ಗುಡ್ಡ. ಅದರ ನೆತ್ತಿಗೆ ಜೋಡಿಸಿದಂತೆ ಚಂದ್ರ ನಗುತ್ತಿದ್ದ. ನಮ್ಮ ರಿಕ್ಷಾ ಓಡುತ್ತಲೇ ಇತ್ತು. ಯಾವ ನಗರದಲ್ಲೂ ಕಾಣಸಿಕ್ಕದ ಅದೊಂದು ಸುಂದರ ಸಂಜೆ. ಈ ಸೌಂದರ್ಯ ಬಹಳ ಕಾಲ ಉಳಿಯಲಾರದು ಎಂಬುದಕ್ಕೆ ಸ್ಪಷ್ಟ ಸೂಚನೆಗಳು ಅಲ್ಲಿಯೇ ಸಿಕ್ಕವು. ಗುಡ್ಡವನ್ನು ಅಲ್ಲಲ್ಲಿ ಒತ್ತರಿಸಿ ಕಟ್ಟಡಗಳು ನಿರ್ಮಾಣವಾಗಿದ್ದವು. ಇನ್ನು ಹತ್ತಾರು ವರ್ಷಗಳಲ್ಲಿ ಗುಡ್ಡ ಹಸಿರು ಮಾಯವಾಗಿ ಎಲ್ಲೆಲ್ಲೂ ಕಾಂಕ್ರೀಟು ಕಟ್ಟಡಗಳು ಕಾಣಿಸಿಕೊಂಡರೆ ಆಶ್ಚರ್ಯವಿಲ್ಲ. ನಾನು ಇವನ್ನು ನೆನೆದಂತೆಲ್ಲ ನಮ್ಮ ರಿಕ್ಷಾ ವೇಗವಾಗಿ ಓಡುತ್ತಿತ್ತು. ಚಾಲಕ ಬಳಲದೆ ಇನ್ನೂ ಉತ್ಸಾಹವನ್ನೇ ಪ್ರದರ್ಶಿಸುತ್ತಿದ್ದ.

**– ಜಿ.ಪಿ. ಬಸವರಾಜು**



**ಜಿ.ಪಿ. ಬಸವರಾಜು**

ಜಿ.ಪಿ. ಬಸವರಾಜು (೧೯೫೭) ಪ್ರಜಾವಾಣಿ ಪತ್ರಿಕೆಯ ಹಿರಿಯ ವರದಿಗಾರರು. ಕನ್ನಡದ ಒಳ್ಳೆಯ ಕಥೆಗಾರರಲ್ಲಿ ಒಬ್ಬರು. 'ರಾಜ ಮತ್ತು ಹಕ್ಕಿ' ಎಂಬ ಅವರ ಕಥಾಸಂಕಲನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದೆ. 'ತುಂಗೆಯಲ್ಲಿ ಹೆಣ' ಅವರ ಕವನ ಸಂಕಲನ. 'ಲುಷನ್ ಕಥೆಗಳು' ಸಂಪಾದಿತ ಕೃತಿ. 'ಶಿವಮೊಗ್ಗದ ರೈತ ಚಳುವಳಿ' ಮತ್ತು 'ನೀಲಾಚಲಗಳ ನಾಡಿನಲ್ಲಿ' ಅವರ ಇತರ ಕೃತಿಗಳು.

'ಬೆಟ್ಟದ ಮೇಲೊಂದು ಮನೆಯ ಮಾಡಿ' ಈ ಪಠ್ಯ ಭಾಗವನ್ನು 'ನೀಲಾಚಲಗಳ ನಾಡಿನಲ್ಲಿ' ಎಂಬ ಪ್ರವಾಸಕಥನದಿಂದ ತೆಗೆದುಕೊಳ್ಳಲಾಗಿದೆ. ಲೇಖಕರು ಅಸ್ಸಾಂ ರಾಜ್ಯದಲ್ಲಿ ಕೈಗೊಂಡ ಪ್ರವಾಸದ ಪರಿಚಯ ಇಲ್ಲಿ ಅತ್ಯಂತ ಚೇತೋಹಾರಿಯಾಗಿ ಬಂದಿದೆ. ಅಲ್ಲಿನ ನಿಸರ್ಗದ ಚೆಲುವು, ಬದುಕಿನ ಚಿತ್ರ, ಪರಿಸರದ ಸಮಸ್ಯೆಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಅಸ್ಸಾಮಿನ ನಗರ ಜೀವನದ ಸಾಮಾಜಿಕ ಸಮಸ್ಯೆಗಳನ್ನು ಇಲ್ಲಿ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

❒ ಪ್ರವಾಸ ಕಥನವನ್ನು ಓದಿದಿರಲ್ಲವೆ. ಇದರಲ್ಲಿ ನಿಮಗೆ ಅತ್ಯಂತ ಮೆಚ್ಚುಗೆಯಾದ ಭಾಗವನ್ನು ಆಯ್ದು ಬರೆಯಿರಿ. ಅದು ಮೆಚ್ಚುಗೆಯಾಗಲು ಕಾರಣವೇನೆಂದೂ ಸಂಕ್ಷಿಪ್ತವಾಗಿ ಬರೆಯಿರಿ.

❒ "ಎಲ್ಲರೂ ಹೀಗೆ ಆಟೋರಿಕ್ಷಾಗಳ ಮೊರೆ ಹೊಕ್ಕರೆ ಸೈಕಲ್ ರಿಕ್ಷಾ ಓಡಿಸುವವರ ಗತಿಯೇನು? ಅವರ ಸಂಸಾರಗಳ ಪಾಡೇನು?" ಈ ವಾಕ್ಯಗಳನ್ನು ಗಮನಿಸಿರಿ. ವಿಜ್ಞಾನದ ಕೊಡುಗೆಗಳನ್ನು ಬಳಸುವಾಗ ಮನಸ್ಸಿನಲ್ಲುಂಟಾಗುವ ತುಮುಲವನ್ನು ಇದು ಸೂಚಿಸುತ್ತದೆ. ಇತ್ತೀಚೆಗೆ ನಾವು ಅತಿಯಾಗಿ ಬಳಸುತ್ತಿರುವ ಯಂತ್ರೋಪಕರಣಗಳ ಕುರಿತಾದ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಿ ಅವುಗಳ ಗುಣದೋಷಗಳ ಟಿಪ್ಪಣಿ ಬರೆಯಿರಿ.

❒ ಅಸ್ಸಾಮಿನಲ್ಲಿ ಬಿಹಾರಿಗಳು ಶ್ರಮಪಟ್ಟು ದುಡಿಯುವುದರ ಕುರಿತಾಗಿ ಓದಿದಿರಲ್ಲವೆ. ಇದೇ ರೀತಿ ನಮ್ಮ ಊರಿನ ಹಲವಾರು ಮಂದಿ ಇತರ ರಾಜ್ಯಗಳಲ್ಲೂ ವಿದೇಶಗಳಲ್ಲೂ ಉದ್ಯೋಗದಲ್ಲಿರುವವರಲ್ಲವೇ. ನಿಮ್ಮ ಪರಿಸರದಲ್ಲಿ ಇಂತಹ ಎಷ್ಟು ಮಂದಿ ಇದ್ದಾರೆ; ಅವರ ನೋವು ನಲಿವುಗಳೇನು ಎಂಬುದರ ಕುರಿತಾಗಿ ಮಾಹಿತಿ ಸಂಗ್ರಹಿಸಿರಿ. ಅಂತಹವರ ವ್ಯಕ್ತಿ ಮಾಹಿತಿ ತಯಾರಿಸಿರಿ.

❒ ಈ ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳನ್ನೊಳಗೊಂಡ ಬೇರೊಂದು ಗದ್ಯ ಭಾಗವನ್ನು ತಯಾರಿಸಿರಿ.

<u>ಹೊತ್ತು ನೆತ್ತಿಗೇರಿತು.</u> ಕೊನೆಗೂ ಬೆಳಗ್ಗೆ ಬರಬೇಕಾಗಿದ್ದ ವಿಮಾನ ಬಂದೇಬಿಟ್ಟಿತು. ಪ್ರಶಾಂತನ ಕಳವಳ ಕಡಿಮೆಯಾಗಿ ಮುಖದಲ್ಲಿ ಸಂತಸದ ಬೆಳಕು ಹರಿಯಿತು. ವಿಮಾನವನ್ನೇರಿ ಕುಳಿತ ಕೆಲವೇ ಕ್ಷಣಗಳಲ್ಲಿ ವಿಮಾನವು ಬಿಲ್ಲಿನಿಂದ ಹೊರಟ ಬಾಣವಾಯಿತು. ಕೊಲ್ಲಿ ರಾಷ್ಟ್ರದ ನಿಲ್ದಾಣದಲ್ಲಿಳಿದು ಸಾಮಾನು ಸರಂಜಾಮು ಪಡೆದುಕೊಂಡು ಹೊರಗಿಳಿದರೆ ಅವನಿಗೆ ಸಹಾಯ ಮಾಡುವವರು ಯಾರೂ ಇರಲಿಲ್ಲ. ಅವನನ್ನು ವಿಚಾರಿಸುವವರೇ ಇರಲಿಲ್ಲ. ಒಂದಷ್ಟು ಮಂದಿ ಅಧಿಕಾರಿಗಳೊಂದಿಗೆ ತನಗೆ ತಿಳಿದ ಹಿಂದಿ ಭಾಷೆಯಲ್ಲಿ ತನ್ನ ಸ್ಥಿತಿಯನ್ನು ವಿವರಿಸಿದರೆ ಅದು ಕೇವಲ <u>ಅರಣ್ಯರೋದನವಾಯಿತು.</u> ಉದ್ಯೋಗದ ಭರವಸೆ ನೀಡಿದವರು ಮೋಸ ಮಾಡಿದ ವಾಸ್ತವ ಅವನ ಅರಿವಿಗೆ ಬಂತು. ಕೊಲ್ಲಿ ರಾಷ್ಟ್ರದಲ್ಲಿ ಉದ್ಯೋಗ ಗಿಟ್ಟಿಸುವ ಅವನ <u>ಕನಸು ನುಚ್ಚುನೂರಾಯಿತು.</u> ಮನೆಯವರ ಆಸ್ತಿ, ಒಡವೆಗಳನ್ನು ಅಡವಿಟ್ಟು ಉದ್ಯೋಗಕ್ಕಾಗಿ ಮಾಡಿದ ಪ್ರಯತ್ನವೆಲ್ಲ <u>ನೀರಮೇಲಣ</u> <u>ಹೋಮವಾಯಿತು.</u>

***

# 3

# ದುಶ್ಚಟಗಳಿಂದ ದೂರಕ್ಕೆ



ಸಾರಾಯಿ ತಯಾರಿಕೆ ಯಂತ್ರ ವಶ

ಕಳ್ಳಬಟ್ಟಿ ಸಾರಾಯಿ ವಶ

ಕುಡಿದ ಅಮಲಿನಲ್ಲಿ ಕೊಲೆ

ಗಾಂಜಾ ಪತ್ತೆ: ಆರೋಪಿ ಸೆರೆ

ವಿದೇಶಿ ಮದ್ಯ: ಆರೋಪಿಗೆ ಸಜೆ

ಕಾಸರಗೋಡು, ನ.27: ಮಂಜೇಶ್ವರ ಚೆಕ್ ಪೋಸ್ಟ್‌ನ ಮೂಲಕ ಲಾರಿಯಲ್ಲಿ ವಿದೇಶಿ ಮದ್ಯ ಸಾಗಾಟ ನಡೆಸಿದ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ದ್ವಿತೀಯ) ಒಂದು ವರ್ಷ ಕಠಿನ ಸಜೆ ಮತ್ತು 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ದಂಡ ಪಾವತಿಸದಿದ್ದಲ್ಲಿ ಆರೋಪಿ ಒಂದು ತಿಂಗಳ ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಕೊಚ್ಚಿ ಪಳ್ಳುರುತ್ತಿ ಕೆ. ಪೆರುಂಬಳ್ಳಿ ಹೌಸ್‌ನ ಪಿ.ಎಕ್ಸ್. ಕುರ್ಯಾಕೋಸ್ (36) ಎಂಬಾತನಿಗೆ ಈ ಸಜೆ ವಿಧಿಸಲಾಗಿದೆ.

2004 ಮಾರ್ಚ್ 28ರಂದು ಲಾರಿಯೊಂದರಲ್ಲಿ ಕರ್ನಾಟಕದಿಂದ ಕೇರಳಕ್ಕೆ ಸಾಗಿಸುತ್ತಿದ್ದ 750 ಎಂ.ಎಲ್.ನ 4,608 ಬಾಟಲಿ ವಿದೇಶ ಮದ್ಯವನ್ನು ವಶಪಡಿಸಲಾಗಿತ್ತು. ಈ ಪ್ರಕರಣದಲ್ಲಿ ಕುರ್ಯಾಕೋಸ್ ವಿರುದ್ಧ ಅಬಕಾರಿ ಅಧಿಕಾರಿಗಳು ಕೇಸು ದಾಖಲಿಸಿದ್ದರು.

- ನೀವು ಮೇಲಿನ ಪತ್ರಿಕಾ ವರದಿಗಳಲ್ಲಿ ಗಮನಿಸಿದ ಸಾಮಾಜಿಕ ಪಿಡುಗುಗಳು ಯಾವುವು? ನಮ್ಮ ಸಮಾಜದಲ್ಲಿ ಇಂತಹ ಸಾಮಾಜಿಕ ಪಿಡುಗುಗಳು ಸೃಷ್ಟಿಸುವ ಸಮಸ್ಯೆಗಳ ಕುರಿತಾಗಿ ನಿಮ್ಮ ಅಭಿಪ್ರಾಯವನ್ನು ತರಗತಿಯಲ್ಲಿ ಮಂಡಿಸಿರಿ.

# ಸರ್ವಜ್ಞನ ವಚನಗಳು

ಸುರೆಯ ಸೇವಿಸುವವನ ಸುರಿಗೆಯನು ಪಿಡಿದವನ
ದೊರೆಯೊಲುಮೆಗಾಗಿ ಹೆಣಗುವನ ಕಾಯುವುದು
ಸೊರಗಿ ಸಾಯುವದು ಸರ್ವಜ್ಞ

ಸುರೆಯ ಸೇವಿಸುವಂಗೆ ಸಿರಿಗರವು ಪಿಡಿದಂಗೆ
ದೊರೆಯಲ್ಲಿ ತೇಜ ಪಡೆದಂಗೆ ಶಿರವಿಹುದು
ಸ್ಥಿರವಲ್ಲ ನೋಡ ಸರ್ವಜ್ಞ

ಸುರೆಯ ಹಿರಿದುಂಡವನು ಉರಿಯ ಮೇಲ್ದುಡುಕುವನು
ಕರಿಯ ಕರ ಪಿಡಿದು ತುಡುಕುವನು ಇವರಿಗೆ
ಮರಣ ಕಂಡಯ್ಯ ಸರ್ವಜ್ಞ

ಸಿಂದಿಯ ಸೇವಿಪನು ಹಂದಿಯಂತಿರುತಿಹನು
ಹಂದಿಯೊಂದೆಡೆಗೆ ಉಪಕಾರಿ ಕುಡಿಕನು
ಹಂದಿಗೂ ಕಷ್ಟ ಸರ್ವಜ್ಞ

ಹೆಂಡವನು ಕುಡಿಕುಡಿದು ಕಂಡವರ ತಾ ತಿರಿದು
ಬಂಡು ನುಡಿಗಳಿಗೆ ನಾಚದ ನೀಚನ
ಕಂಡಿಹರೆ ತೊಲಗು ಸರ್ವಜ್ಞ

ಮದ್ಯಪಾನವ ಮಾಡಿ ಇದ್ದುದೆಲ್ಲವು ನೀಗಿ
ಬಿದ್ದು ಬರುವವನ ಸದ್ದಡಗಿ ಸಂತಾನ
ವೆದ್ದು ಹೋಗುವದು ಸರ್ವಜ್ಞ

ಅಂಗಿ ಅರಿವೆಯ ಮಾರಿ ಭಂಗಿಯನು ತಾ ಸೇದಿ
ಮಂಗನಂದದಿ ಕುಣಿವಾತ ಭವ ಭವದಿ
ಭಂಗಗೊಳುತಿಹನು ಸರ್ವಜ್ಞ

ಭಂಗಿಯನು ಸೇದುವನ ಭಂಗವನು ಏನೆಂಬ
ಭಂಗಿಯ ಗುಂಗಂ ತಲೆಗೇರಲಾಡುತಿಹ
ಮಂಗನಂತಿಹನು ಸರ್ವಜ್ಞ

ಹೊಗೆಯ ತಿಂಬುವದೊಂದು ಸುಗುಣವೆಂದೆನಬೇಡ
ಹೊಗೆಯ ಕುಡಿದೆಲೆಯನಗಿವ ಬಾಯ್ಸಿಂದಿಯ
ಲಗಳೆಯಂತಿಹುದು ಸರ್ವಜ್ಞ

**– ಸರ್ವಜ್ಞ**

**ಸರ್ವಜ್ಞ**

ಸರ್ವಜ್ಞನ ಕಾಲ ಸುಮಾರು ಕ್ರಿ.ಶ. ೧೭೦೦. ಅವನು ಹಾಡಿದ ಸಾವಿರಾರು ತ್ರಿಪದಿಗಳು 'ಸರ್ವಜ್ಞನ ವಚನಗಳು' ಎಂದು ಪ್ರಸಿದ್ಧವಾಗಿವೆ. ಗಾಢವಾದ ಜೀವನಾನುಭವ, ಸಮಾಜನೀತಿ, ಮನುಷ್ಯಸ್ವಭಾವದ ವಿವಿಧ ಮುಖಗಳ ವಿಶ್ಲೇಷಣೆಯನ್ನು ಸರ್ವಜ್ಞನ ವಚನಗಳಲ್ಲಿ ಕಾಣಬಹುದು. ಅವನ ವಚನಗಳ ಸಂಗ್ರಹದಿಂದ ಮೇಲಿನ ವಚನಗಳನ್ನು ಆಯ್ದುಕೊಳ್ಳಲಾಗಿದೆ.



- ಸರ್ವಜ್ಞನ ವಚನಗಳ ಆಶಯವನ್ನು ವಿವರವಾಗಿ ಬರೆಯಿರಿ.
- ನಮ್ಮ ರಾಜ್ಯದಲ್ಲಿ ಈಗ ಮದ್ಯಪಾನ ನಿಷೇಧ ಜಾರಿಯಲ್ಲಿದೆ. ಆದರೆ ನಿಮ್ಮ ಊರಿನಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ನಡೆಯುತ್ತಿದೆ ಎಂದು ಭಾವಿಸಿರಿ. ಅದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಒಂದು ಮನವಿ ಬರೆಯಿರಿ.
- ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮದ ಕುರಿತು ನಿಮ್ಮ ಪ್ರದೇಶದ ಜನರಲ್ಲಿ ಜಾಗೃತಿ ಮೂಡಿಸಲು ಸೂಕ್ತವಾದ ಒಂದು ಕರಪತ್ರವನ್ನು ತಯಾರಿಸಿರಿ.
- ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ಜನಜಾಗೃತಿ ಮೂಡಿಸಲು ಕಾರ್ಯಕ್ರಮವೊಂದು ನಡೆಯಲಿದೆ. ಅಲ್ಲಿ ವಿಷಯವನ್ನು ಮಂಡಿಸುವುದಕ್ಕಾಗಿ 'ಪವರ್ ಪೋಯಿಂಟ್'ನ ಸಹಾಯದೊಂದಿಗೆ ಅಗತ್ಯವಾದ ಸ್ಲೈಡ್‌ಗಳನ್ನು ತಯಾರಿಸಿರಿ.

* * *

## ಕುಡಿತದ ಕೆಡುಕುಗಳು

ಮದ್ಯಪಾನವು ಬಹುಪ್ರಾಚೀನಕಾಲದಿಂದಲೂ ಮನುಷ್ಯನನ್ನು ಕಿತ್ತು ತಿನ್ನುವ ಭೂತವಾಗಿ ಕಾಡುತ್ತ ಬೆಳೆದುಬಂದಿರುವುದು ಗೋಚರವಾಗುತ್ತದೆ. ಅಂದಿನಿಂದಲೂ, ಸಾಧುಪುರುಷರು, ಧರ್ಮಾತ್ಮರು ಇದರಿಂದಾಗುವ ಕೆಡುಕುಗಳ ಬಗೆಗೆ ಲೋಕಕ್ಕೆ ಬೋಧೆಮಾಡುತ್ತಲೇ ಬಂದಿದ್ದಾರೆ. ಆದರೂ ಇದರ ವ್ಯಸನಕ್ಕೆ ಬಲಿಯಾದ ಮನುಷ್ಯನು ಇದನ್ನು ಸೇವಿಸುತ್ತಲೇ ಬಂದಿದ್ದಾನೆ. ತಾತ್ಕಾಲಿಕವಾದ ಮದೋನ್ಮತ್ತತೆಯಲ್ಲಿ ಸುಖವಲ್ಲದ ಸುಖವನ್ನು, ಅನುಭವಿಸಿದಂತೆ ಭಾವಿಸಿ, ಸಾಮಾಜಿಕ ಸಭ್ಯತೆಗೂ ಕೌಟುಂಬಿಕ ನೆಮ್ಮದಿಗೂ ಭಂಗವನ್ನುಂಟುಮಾಡುತ್ತ ಬಂದಿದ್ದಾನೆ. ಪ್ರಾಚೀನ ಕಾಲದಲ್ಲಿ ಮದ್ಯಪಾನವಿತ್ತೆಂಬುದೇನೋ ನಿಜ. ಮದ್ಯವನ್ನು ತಯಾರಿಸಲು ಮತ್ತು ಪಾನಮಾಡಲು ಒಂದು ನಿರ್ದಿಷ್ಟ ರೀತಿ, ಸ್ಥಳ, ಕಾಲ, ಸಂದರ್ಭ– ಮೊದಲಾದವನ್ನು ಗೊತ್ತುಪಡಿಸಿದ್ದರು. 'ಮದ್ಯವನ್ನೂ ಮದ್ಯಪಾನ ಮಾಡಿದವರನ್ನೂ ಗ್ರಾಮದಿಂದ ಹೊರಕ್ಕೊಯ್ಯಕೂಡದು. ಮದ್ಯಪಾನ ಮಾಡಿದವರು ಮನೆಯಿಂದ ಮನೆಗೂ, ಜನನಿಬಿಡವಾದ ಪ್ರದೇಶಕ್ಕೂ ಹೋಗಕೂಡದು. ಸಾಧುಸಜ್ಜನರಿಗೆ ಇವರಿಂದ ಭಯವುಂಟಾಗದಂತೆ ನೋಡಿಕೊಳ್ಳಬೇಕು' ಇತ್ಯಾದಿ ಅನೇಕ ಕಟ್ಟುಪಾಡುಗಳನ್ನು ಅಂದಿನ ರಾಜಮಹಾರಾಜರು ವ್ಯವಸ್ಥೆಗೊಳಿಸಿದ್ದರು. ಈ ನಿಯಮಾವಳಿಗಳನ್ನು ಮೀರಿದವರು ಶಿಕ್ಷೆಗೆ ಗುರಿಯಾಗುತ್ತಿದ್ದರು. ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಅಬಕಾರಿ ಶಾಖೆಯ ಮೇಲಧಿಕಾರಿಯ ಕರ್ತವ್ಯಗಳೇನೆಂಬುದರ ಸ್ಪಷ್ಟ ಚಿತ್ರವಿದೆ. ಮದ್ಯಪಾನವು ಸಪ್ತವ್ಯಸನಗಳಲ್ಲಿ ಒಂದು. ವಿವಾಹ, ವಸಂತೋತ್ಸವ, ಇಷ್ಟದೇವತಾಪೂಜೆ ಇವೇ ಮೊದಲಾದ ಸಂದರ್ಭಗಳಲ್ಲಿ ಅಬಕಾರಿ ಶಾಖೆಯ ಅಧ್ಯಕ್ಷರ ಅಪ್ಪಣೆಪಡೆದು ಮದ್ಯಪಾನ ಮಾಡಬೇಕೆಂಬ ಕಟ್ಟುಪಾಡು ಇತ್ತು. ಆದರೆ ಆಗಲೂ ಸಾಧು– ಸಜ್ಜನರು, ಧಾರ್ಮಿಕ ಮಹಾಪುರುಷರು ಮದ್ಯಪಾನ ಸಲ್ಲದೆಂದು ಉಪದೇಶ ಮಾಡಿದ್ದಾರೆ. ಅದರಿಂದಾಗುವ ಕೆಡುಕುಗಳ ಬಗೆಗೆ ಎಚ್ಚರಿಸುತ್ತಲೇ ಬಂದಿದ್ದಾರೆ.

ಮಹಾಭಾರತದಲ್ಲಿ ಮದ್ಯಪಾನ ಮಾಡಿ ಉನ್ಮತ್ತರಾದ ಯಾದವರು ಒಬ್ಬರಿಗೊಬ್ಬರು ಬಾಯಿಗೆ ಬಂದಂತೆ

ಮಾತನಾಡಿ ಜಗಳಕ್ಕೆ ಬಿದ್ದು ತಂದೆ, ಮಗ, ಅಣ್ಣ, ತಮ್ಮ, ಭಾವ, ಬೀಗ ಎನ್ನದೆ ಮದ್ಯದ ಅಮಲಿನಲ್ಲಿ ಹೊಡೆದಾಡಿ ಬೆಂಕಿಯಲ್ಲಿ ಬಿದ್ದ ಪತಂಗಗಳಂತೆ ಸತ್ತು ಹೋದರು. ಈ ಹೊಡೆದಾಟವನ್ನು ತಪ್ಪಿಸಲು ಪ್ರಯತ್ನಿಸಿದ ಶ್ರೀಕೃಷ್ಣನ ಆಟವೂ ಆ ಮದೋನ್ಮತ್ತರ ಎದುರಿನಲ್ಲಿ ನಡೆಯಲಿಲ್ಲ. ಅನಂತರ ಗಂಡಂದಿರನ್ನು, ಮಕ್ಕಳನ್ನು ಕಳೆದುಕೊಂಡ ಯಾದವ ಸ್ತ್ರೀಯರ ಗೋಳು ಹೇಳತೀರದು. ಈ ಕಥೆಗಳು ಮದ್ಯಪಾನದಿಂದಾಗುವ ಅನಾಹುತವನ್ನು ನಮಗೆ ಪ್ರತ್ಯಕ್ಷವಾಗಿ ಬೋಧಿಸುತ್ತವೆ. ಮನುಷ್ಯನಿಗೆ ಸದ್ಗುಣ, ಒಳ್ಳೆಯ ವ್ಯಸನ ಮತ್ತು ಪುಣ್ಯಕಾರ್ಯಗಳು ಸುಗಂಧಬೀರುವ ಹೂವುಗಳಂತೆ. ಇವುಗಳ ಸುಗಂಧ ಸುತ್ತಲೂ ಸುವಾಸನೆಯನ್ನು ಬೀರಿ ಆನಂದಗೊಳಿಸುತ್ತದೆ. ದುರ್ಗುಣ, ದುರ್ವ್ಯಸನ ಮತ್ತು ಪಾಪಕಾರ್ಯಗಳು ದುರ್ನಾತದಂತೆ ತನ್ನ ಮತ್ತು ಸುತ್ತುಮುತ್ತಣ ಪರಿಸರವನ್ನು ಮೊದಲು ಮಲಿನಗೊಳಿಸಿ ಅನಂತರ ರಾಷ್ಟ್ರವ್ಯಾಪ್ತಿಯಲ್ಲಿ ಹರಡಿ ರಾಷ್ಟ್ರೀಯ ಆಪತ್ತಿಗೆ ಕಾರಣವಾಗಬಹುದು.

ದಿನದಿನಕ್ಕೆ ಬದಲಾವಣೆಯಾಗುತ್ತ ಬಂದಿರುವ ಇಂದಿನ ಸಾಮಾಜಿಕ ಪರಿಸ್ಥಿತಿಗಳಲ್ಲಿ ಮದ್ಯಪಾನದ ವಿಧಿನಿಯಮಗಳು ತಿರುಗುಮುರುಗಾಗಿ ಇದೊಂದು ಬೃಹದಾಕಾರದ ಸಮಸ್ಯೆಯಾಗಿ ಹೋಗಿದೆ. ಜನತೆಯಲ್ಲಿ ಇದು ದುಶ್ಚಟವಾಗಿ ಬೆಳೆಯತೊಡಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯದಿದ್ದರೆ, ದುರ್ಬಲವರ್ಗಗಳ ಏಳ್ಗೆಯಾಗಬೇಕೆಂಬ ಘೋಷಣೆಯಾಗಿಯೇ ಉಳಿಯುತ್ತದೆ. ದುರ್ಬಲವರ್ಗದವರು ಈ ದುಶ್ಚಟಕ್ಕೆ ಬಲಿಯಾದರೆ ಅಪಾರವಾದ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ನಮ್ಮ ದೇಶ ಆರ್ಥಿಕವಾಗಿ ಹಿಂದುಳಿದ ದೇಶ; ಅದರಲ್ಲೂ ದುರ್ಬಲವರ್ಗ, ಹಿಂದುಳಿದ ವರ್ಗದವರ ಆರ್ಥಿಕ ಪರಿಸ್ಥಿತಿ ತೀರಾ ಕೆಳಮಟ್ಟದಲ್ಲಿದ್ದು ಮದ್ಯಪಾನದಂಥ ದುಶ್ಚಟದಿಂದ ಅವರು ಮುಕ್ತರಾಗದಿದ್ದರೆ ಅವರ ಬಡತನ ನಿವಾರಣೆಯಾಗುವ ಬಗೆ ಹೇಗೆ? ನಮ್ಮ ಜನಾಂಗದ ಆರ್ಥಿಕ ದುಃಸ್ಥಿತಿಗೆ ಕಾರಣಗಳೇನೆಂಬುದನ್ನು ಕಂಡುಹಿಡಿದು ಅವನ್ನು ಬೇರುಸಹಿತ ಕಿತ್ತುಹಾಕದಿದ್ದರೆ ಯಾವ ಕಾಲಕ್ಕೂ ನಾವು ಜನಾಂಗದ ಜೀವನಮಟ್ಟವನ್ನು ಮೇಲೆತ್ತಲಾಗುವುದಿಲ್ಲ. ಜೀವನಮಟ್ಟದ ಅಭಿವೃದ್ಧಿಗೆ ಆತಂಕಕಾರಿಗಳಾದ ಕಾರಣಗಳಲ್ಲಿ ಮದ್ಯಪಾನದ ದುಶ್ಚಟವೂ ಒಂದೆಂಬುದನ್ನು ಮರೆಯುವಂತಿಲ್ಲ.

ಮದ್ಯಪಾನ ಕೇವಲ ಆರ್ಥಿಕ ಹಾನಿಯನ್ನುಂಟುಮಾಡುತ್ತದೆ ಎಂದಲ್ಲ. ಅದರಿಂದಾಗುವ ಕೆಡುಕುಗಳನ್ನು ನೆನಸಿಕೊಂಡರೆ ಸಾಕು ಮೈಮನ ನಡುಗುತ್ತದೆ. ಮದ್ಯವು ಇತರ ಆಹಾರಗಳಂತೆ ನಮ್ಮ ಶರೀರಕ್ಕೆ ಶಕ್ತಿಯನ್ನು ನೀಡುವಂಥ ಗುಣವಿಶೇಷವನ್ನು ಹೊಂದಿಲ್ಲವೆಂದೂ ದೇಹಕ್ಕೆ ಹಾನಿಕಾರಕ ಪ್ರತಿಕ್ರಿಯೆಯನ್ನುಂಟುಮಾಡುವ ಗುಣಗಳಿಂದ ಕೂಡಿರುವುದೆಂದೂ ತಜ್ಞರ ಪರೀಕ್ಷೆಗಳಿಂದ ವ್ಯಕ್ತಪಟ್ಟಿದೆ. ಇದು ಜಠರದಲ್ಲಿ ಕೆರಳಿಕೆಯನ್ನುಂಟುಮಾಡುವುದು; ಪಿತ್ತಕೋಶ, ಮೂತ್ರಪಿಂಡಗಳಲ್ಲಿ ವಿನಾಶಕಾರಕ ಪ್ರತಿಕ್ರಿಯೆಯನ್ನುಂಟುಮಾಡುವುದು; ನರಗಳ ದೌರ್ಬಲ್ಯವನ್ನುಂಟುಮಾಡಿ ಕರ್ತವ್ಯದಕ್ಷತೆಯನ್ನು ನಾಶಪಡಿಸಿ ಸಿಡುಕುತನ, ಮುಂಗೋಪ, ದುರ್ಬುದ್ಧಿಯನ್ನು ಅಧಿಕಗೊಳಿಸುವುದು. ಇದರ ತೀಕ್ಷ್ಣತೆ ಹೆಚ್ಚಾದಂತೆಲ್ಲ ತೂರಾಡುವ ನಡಿಗೆ, ಅಸಂಬದ್ಧವಾದ ಮಾತುಕತೆ, ದುಷ್ಕೃತ್ಯಗಳನ್ನೆಸಗುವ ಮನೋಭಾವಗಳು ಬೆಳೆಯುವವು. ಅನೇಕ ರೋಗಗಳಿಗೆ ಬೇಗ ಬಲಿಯಾಗುವರು. ಸಮಾಜಕ್ಕೆ ಕಂಟಕಪ್ರಾಯರಾಗುವರು. ತಮ್ಮ ಮನೆಯನ್ನು ಅಧೋಗತಿಗಿಳಿಸುವರು. ಹೆಂಡತಿ ಮಕ್ಕಳು ಮರಿಗಳ ಲಾಲನೆ–ಪಾಲನೆಯ ಶಕ್ತಿಯನ್ನು ಕಳೆದುಕೊಂಡು ಕೊನೆಗೆ ಅವರನ್ನು ಅನಾಥರನ್ನಾಗಿ ಮಾಡಿಯೂ ಸಾಯಬಹುದು. ಇವರನ್ನಾಶ್ರಯಿಸಿದ ಜನ ರಾಷ್ಟ್ರಕ್ಕೆ ಹೊರೆಯಾಗುವರು. ಹೀಗೆ ಮದ್ಯಪಾನದ ದುಶ್ಚಟ ತನ್ನ ಮತ್ತು ರಾಷ್ಟ್ರದ ಅಧೋಗತಿಗೆ ಕಾರಣವಾಗುವುದೆಂಬುದನ್ನು ಮನಗಂಡು ಮಹಾತ್ಮಾಗಾಂಧಿಯವರು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಈ ಬಗೆಗೆ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.



“ನನ್ನನ್ನು ಒಂದೇ ತಾಸು ಭಾರತದ ಸರ್ವಾಧಿಕಾರಿಯನ್ನಾಗಿ ಮಾಡಿದ್ದಾದರೆ, ನಾನು ಮೊದಲು ಮಾಡುವ ಕೆಲಸವೆಂದರೆ ರಾಷ್ಟ್ರದಲ್ಲಿಯ ಎಲ್ಲಾ ಮಾದಕ ವಸ್ತುಗಳಿರುವ ಅಂಗಡಿಗಳನ್ನು ಏನೊಂದೂ ಪ್ರತಿಫಲವಿಲ್ಲದೆ ಮುಚ್ಚಿಸುತ್ತೇನೆ. ಈಚಲು ಮರಗಳನ್ನು ನಾಶಪಡಿಸುತ್ತೇನೆ. ಕಾರ್ಖಾನೆಗಳ ಮಾಲಿಕರು ತಮ್ಮ ಕೂಲಿಕಾರ ಜನರ ಸ್ಥಿತಿಗಳನ್ನು ಉತ್ತಮಪಡಿಸಿ ಅವರಿಗೆ ಉತ್ತಮವಾದ ಮಾದಕ ವಸ್ತುಗಳಿಲ್ಲದ ಪಾನೀಯ, ಮೇಲುದರ್ಜೆಯ ವಿನೋದಗಳನ್ನು ಒದಗಿಸುವಂತೆ ಮಾಡುತ್ತೇನೆ. ಹೀಗೆ ಮಾಡಲು ಹಣದ ಅಭಾವವನ್ನು ಮುಂದೊಡ್ಡಿದರೆ ಆ ಕಾರ್ಖಾನೆಯನ್ನೇ ಮುಚ್ಚಿಸಿಬಿಡುತ್ತೇನೆ ಆದರೆ ಒಂದು ಗಂಟೆಯ ಸರ್ವಾಧಿಕಾರಿಯೆಂದ ಮಾತ್ರಕ್ಕೆ ನನ್ನ ವಿವೇಕವನ್ನು ನಾನು ಕಳೆದುಕೊಳ್ಳುವುದಿಲ್ಲ. ಯೂರೋಪಿಯನ್ ಸ್ನೇಹಿತರಿಗೂ ಮತ್ತು ರೋಗಿಗಳಿಗೂ ವೈದ್ಯಕೀಯ ಕಾರಣಕ್ಕಾಗಿ ಬ್ರಾಂಡಿ ಮೊದಲಾದ ಮಾದಕ ವಸ್ತುಗಳು ಬೇಕಾದರೆ ಸರಕಾರದ ವೆಚ್ಚದಿಂದಲೇ ಅವರ ಪರೀಕ್ಷೆಯನ್ನು ವೈದ್ಯನಿಪುಣರಿಂದ ಮಾಡಿಸುವ ಏರ್ಪಾಡು ಮಾಡಿ, ಅಗತ್ಯವಾದಷ್ಟು ಮಾತ್ರ ಮಾದಕ ವಸ್ತುಗಳು ಅವರಿಗೆ ಲಭ್ಯವಾಗುವಂತೆ ಮಾಡುತ್ತೇನೆ. ಈ ನಿಯಮ ಎಲ್ಲ ಮಾದಕ ವಸ್ತುಗಳಿಗೂ ಅನ್ವಯವಾಗುತ್ತದೆ.”– ಈ ಮಾತು ಅತ್ಯಂತ ಮನನೀಯವಾದುದು.

ಇಂಗ್ಲೆಂಡಿನ ಜನರ ಮದ್ಯಪಾನಾಸಕ್ತಿಯನ್ನು ಕಂಡು ಮರುಗಿದ ಸರ್ ವಿಲಿಯಂ ಆಸ್ಲರ್ ಎಂಬವನು – “ಬೀರನ್ನು ಮತ್ತು ಇತರ ಎಲ್ಲ ಮದ್ಯಗಳನ್ನು, ಐರಿಷ್ ಕಡುಲುಗಾಲುವೆಗೂ ಇಂಗ್ಲಿಷ್ ಕಡಲುಗಾಲುವೆಗೂ ಉತ್ತರ ಸಮುದ್ರಕ್ಕೂ ಒಂದು ವರ್ಷ ಪರ್ಯಂತ ಸುರಿದುಬಿಟ್ಟರೆ ಇಂಗ್ಲೆಂಡ್ ದೇಶದ ಜನರು ಬಹುಮಟ್ಟಿಗೆ ಉತ್ತಮಗೊಳ್ಳುತ್ತಾರೆ. ಧರ್ಮಿಷ್ಠರ, ವೈದ್ಯರ ಹಾಗೂ ರಾಜಕಾರಿಣಿಗಳ ಮುಂದಿರುವ ಎಲ್ಲಾ ಸಮಸ್ಯೆಗಳೂ ಇದರಿಂದ ಪರಿಹಾರವಾಗುತ್ತವೆ”– ಎಂದು ಅತ್ಯಂತ ಮಾರ್ಮಿಕವಾಗಿ ಹೇಳಿದ್ದಾನೆ. ಜಪಾನ್ ದೇಶದ ಒಂದು ಸುಭಾಷಿತವು “ಮೊದಲು ಮನುಷ್ಯ ಮದ್ಯವನ್ನು ತೆಗೆದುಕೊಳ್ಳುತ್ತಾನೆ; ಆಮೇಲೆ ಮದ್ಯವೇ ಮದ್ಯವನ್ನು ತೆಗೆದುಕೊಳ್ಳುತ್ತದೆ; ಕೊನೆಗೆ ಮದ್ಯವು ಮನುಷ್ಯನನ್ನೇ ಆಹುತಿ ತೆಗೆದುಕೊಳ್ಳುತ್ತದೆ” ಎಂದು ಜನಕ್ಕೆ ಎಚ್ಚರಿಕೆ ಕೊಟ್ಟಿದೆ.

ಭಾರತದಲ್ಲಿ ಬ್ರಿಟಿಷರು ಆಳ್ವಿಕೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಮದ್ಯಪಾನಾಸಕ್ತಿ ಅತ್ಯಂತ ತಿರಸ್ಕಾರಕ್ಕೆ ಒಳಗಾಗಿತ್ತು. ಈಚಲು ಮರವನ್ನು ಮುಟ್ಟುವುದೂ ಪಾಪವೆಂಬ ಭಾವನೆ ಕೆಲವರಲ್ಲಿತ್ತು. ಮುಹಮ್ಮದೀಯರ ಆಳ್ವಿಕೆಯ ಕಾಲದಲ್ಲೂ ಮದ್ಯಪಾನವು ಹೇಯವಾದದ್ದೆಂದು ತಿಳಿಯಲಾಗುತ್ತಿತ್ತು. ಬ್ರಿಟಿಷರ ಆಳ್ವಿಕೆ ಹಬ್ಬುತ್ತ ಬಂದಂತೆಲ್ಲ ಪಾನಾಸಕ್ತಿಯು ಜನರಲ್ಲಿ ಅಧಿಕಗೊಂಡಂತೆ ತಿಳಿದುಬರುತ್ತದೆ. ಅವರು ಅಬಕಾರಿ ಇಲಾಖೆಯನ್ನು ಸ್ಥಾಪಿಸಿ ಮಾದಕ ವಸ್ತುಗಳ ಮಾರಾಟಕ್ಕೆ ಬಹಿರಂಗವಾಗಿಯೇ ಅಂಗಡಿಗಳನ್ನು ತೆರೆಯಲು ಅವಕಾಶಮಾಡಿದರು. ಭಾರತದಲ್ಲಿ ಚೆನ್ನಾಗಿ ಬೆಳೆಯುವ ಈಚಲು, ಬಗನಿ, ತೆಂಗಿನ ಮರಗಳ ರಸದಿಂದ ಹೆಂಡವನ್ನು ಮಾಡಿ ಮಾರಾಟ ಮಾಡಿಸಿ ಅದರಿಂದ ವಿಶೇಷ ಲಾಭಗಳಿಸುವುದನ್ನು ಮೊದಲು ಮಾಡಿದರು. ಹೀಗಾಗಿ ಮದ್ಯಪಾನದ ಪ್ರಚಾರವು ಕಾಳ್ಗಿಚ್ಚಿನಂತೆ ದೇಶವನ್ನು ಆವರಿಸತೊಡಗಿತು. ಇಂದು ಭಾರತದಲ್ಲಿ ಮದ್ಯಪಾನಾಸಕ್ತಿಯು ಒಂದು ಅಭಿಶಾಪವಾಗಿ ಜನಾಂಗವನ್ನು ಕಾಡತೊಡಗಿದೆ. ಕುಡಿತದ ಪರಿಣಾಮವಾಗಿ ವ್ಯಕ್ತಿಯು ತಾನು ಆರ್ಥಿಕವಾಗಿ, ದೈಹಿಕವಾಗಿ ಹಾಳಾಗುವುದರ ಜೊತೆಗೆ ರಾಷ್ಟ್ರೀಯ ಆರ್ಥಿಕಾಭಿವೃದ್ಧಿಗೂ, ಆರೋಗ್ಯಕ್ಕೂ, ಸಾಮಾಜಿಕ ನೆಮ್ಮದಿಗೂ ಭಂಗ ತರುತ್ತಿದ್ದಾನೆಂದು ಹೇಳದೆ



ಗತ್ಯಂತರವಿಲ್ಲ. ಈ ಎಲ್ಲ ಕಾರಣಗಳನ್ನು ಗಮನಿಸಿ ಮದ್ಯಪಾನದಂಥ ದುಶ್ಚಟಕ್ಕೆ ಬಲಿಬೀಳದೆ; ಅನುಭವಿಗಳೂ, ಸಾಧುಸಜ್ಜನರೂ ಉತ್ತಮ ನಡವಳಿಕೆ ಯಾವುದೆಂದು ಹೇಳುತ್ತಾ ಬಂದಿರುವರೋ ಆ ಮಾರ್ಗದಲ್ಲಿ ಪ್ರತಿಯೊಬ್ಬರೂ ನಡೆದು ನೆಮ್ಮದಿಯ ಬಾಳುವೆ ಮಾಡಿ ತನ್ನ ಮತ್ತು ತನ್ನ ಕುಟುಂಬದ ನೆಮ್ಮದಿಗೂ, ಗ್ರಾಮ, ನಾಡು, ರಾಷ್ಟ್ರಗಳ ಅಭಿವೃದ್ಧಿಗೂ ಪೂರಕವಾಗಿ ನಡೆಯುವುದು ಪರಮಪವಿತ್ರ ಕರ್ತವ್ಯವೆಂದು ತಿಳಿಯಬೇಕಾಗಿದೆ.

– ***ಚನ್ನಪ್ಪ ಎರೇಸೀಮೆ***

**ಚನ್ನಪ್ಪ ಎರೇಸೀಮೆ**

'ಕುಡಿತದ ಕೆಡುಕುಗಳು' ಲೇಖನವನ್ನು ಬರೆದವರು ಪಂಡಿತ ಚನ್ನಪ್ಪ ಎರೇಸೀಮೆ ಅವರು. ಶ್ರೀಯುತರು ಕರ್ನಾಟಕ ರಾಜ್ಯದ ವಿದ್ಯಾಭ್ಯಾಸ ಇಲಾಖೆಯಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಧರ್ಮ, ಸಾಹಿತ್ಯ, ಇತಿಹಾಸ, ಸಂಶೋಧನಕ್ಷೇತ್ರಗಳಲ್ಲಿ ದುಡಿದು ಹಲವಾರು ಲೇಖನಗಳನ್ನೂ ಮಕ್ಕಳಿಗಾಗಿ ಅನೇಕ ಪುಸ್ತಕಗಳನ್ನೂ ಬರೆದಿದ್ದಾರೆ. ಇವರ 'ಜೇನು' ಎಂಬ ಮಕ್ಕಳ ಪುಸ್ತಕಕ್ಕೆ ರಾಜ್ಯ ಸರಕಾರದ ಪ್ರಥಮ ಬಹುಮಾನ ಬಂದಿದೆ. ಹಿಂದೆ ಕೇರಳ ಪಠ್ಯಪುಸ್ತಕ ಸಮಿತಿಯಲ್ಲೂ ಕರ್ನಾಟಕ ರಾಜ್ಯದ ಪಠ್ಯಪುಸ್ತಕ ಸಮಿತಿಯಲ್ಲೂ ಕೆಲಸ ಮಾಡಿ ಅಪಾರ ಅನುಭವ ಗಳಿಸಿದ್ದಾರೆ. ಷಡಕ್ಷರ ಕವಿಯ 'ರಾಜಶೇಖರ ವಿಲಾಸ', 'ವೃಷಭೇಂದ್ರವಿಜಯ'ಗಳ ಗದ್ಯಾನುವಾದ ಮಾಡಿದ್ದಾರೆ.

- ❒ ಮದ್ಯಪಾನದಿಂದುಂಟಾಗುವ ಆರೋಗ್ಯ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಪಾಠಭಾಗದಿಂದ ಗುರುತಿಸಿ ಬರೆಯಿರಿ.
- ❒ ಸುರಾಪಾನದಿಂದ ಯಾದವ ಕುಲವು ನಾಶವಾಯಿತು ಎಂಬ ಪ್ರಸ್ತಾಪವನ್ನು ಈ ಪಾಠಭಾಗದಲ್ಲಿ ನೀವು ಗಮನಿಸಿರುವಿರಲ್ಲವೆ. ಅದರ ಕುರಿತಾದ ಪುರಾಣ ಕಥೆಯನ್ನು ಗ್ರಂಥಾಲಯದಲ್ಲಿರುವ ಪುಸ್ತಕಗಳ ಸಹಾಯದಿಂದ ಸಂಗ್ರಹಿಸಿ ಬರೆಯಿರಿ.
- ❒ ಈ ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆ ಎಳೆಯಲಾದ ಪದಗಳ ನಾಮವಿಶೇಷಣವನ್ನು ಪಾಠಭಾಗದಿಂದ ಗುರುತಿಸಿ ಬರೆಯಿರಿ.

ಮದ್ಯವರ್ಜನ ಶಿಬಿರದಲ್ಲಿ ಭಾಗವಹಿಸಿದ ನಂತರ ಸುಬ್ಬಯ್ಯನಿಗೆ ಸಮಾಜದ ಮುಂದೆ ತಲೆಯೆತ್ತಿ ನಡೆಯಲು ಸಾಧ್ಯವಾಗಿದೆ. ಅವನ ದೇಹದ ಆರೋಗ್ಯವೂ ವರ್ಧಿಸಿದೆ. ಅಂತಹ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರೇರೇಪಿಸಿದ ಬಹಳಷ್ಟು ಶ್ರಮವಹಿಸಿದ ತನ್ನ ಮಗನ ಬಗ್ಗೆ ಅವನಿಗೆ ಹೆಮ್ಮೆಯೆನಿಸಿದೆ. ಈಗ ಸುಬ್ಬಯ್ಯನು ಪುನಃ ಕುಟುಂಬದ ವ್ಯವಹಾರಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಆರಂಭಿಸಿದ್ದಾನೆ. ತತ್ಕಾಲಕ್ಕೆ ಮದ್ಯದ ಸಹವಾಸ ಬಿಟ್ಟರೂ ಮುಂದೆ ಬಂದೇ ಬರುತ್ತಾನೆಂದು ಭಾವಿಸಿದವರಿಗೆ ನಿರಾಸೆ ಕಾದಿತ್ತು. ಆದರೆ ಅವನು ಮದ್ಯವ್ಯಸನವನ್ನು ಶಾಶ್ವತವಾಗಿ ಬಿಟ್ಟೇ ಬಿಟ್ಟಿದ್ದಾನೆ.

- ❐ ಮದ್ಯಪಾನದ ವಿರುದ್ಧವಾಗಿ ನಡೆಯುವ ಮೆರವಣಿಗೆಯಲ್ಲಿ ಬಳಸುವುದಕ್ಕಾಗಿ ಘೋಷಣೆಯ ವಾಕ್ಯಗಳನ್ನು ಬರೆಯಿರಿ.
- ❐ ಮಾದಕ ವಸ್ತು ವಿರೋಧಿ ಕಾರ್ಯಕ್ರಮದಲ್ಲಿ ಪಾಲ್ಗೊಂಡವರೆಲ್ಲ ಸ್ವೀಕರಿಸಲು ಸೂಕ್ತವಾದ ಒಂದು 'ಪ್ರತಿಜ್ಞೆ'ಯನ್ನು ಸಿದ್ಧಪಡಿಸಿರಿ.

* * *

## ಕುಡುಕ ಕರಿಯಪ್ಪ

ಕರಿಯಪ್ಪನೇನು ಹುಟ್ಟಾಕೆಟ್ಟವನಲ್ಲ. ಅವನು ಹುಟ್ಟಿದ್ದು ಗೌರವಸ್ಥ ಮನೆತನದಲ್ಲಿ. ದೇವರು, ಧರ್ಮದಲ್ಲಿ ಶ್ರದ್ಧೆಯಿದ್ದ ಕರಿಯಪ್ಪನ ತಂದೆ ಹನುಮಪ್ಪ ಎಲ್ಲರಿಗೂ ಬೇಕಾದವನಾಗಿದ್ದನು. ತನ್ನ ಮಗ ಒಳ್ಳೆಯವನಾಗಲೆಂದು ಹನುಮಪ್ಪ ಒಳ್ಳೆಯ ಆಚಾರವಿಚಾರಗಳನ್ನು ಕರಿಯನಿಗೆ ಕಲಿಸುತ್ತ ಬಂದ. ಮದ್ಯಪಾನ ದುಶ್ಚಟವೆಂದು ಬೋಧಿಸಿದ. ವಯಸ್ಸಿಗೆ ಬರುವವರೆಗೂ ಕರಿಯಪ್ಪ ತಂದೆಯ ಹಿತವಚನಗಳನ್ನು ಮೀರದೆ ಸದಾಚಾರಿಯಾಗಿಯೇ ಇದ್ದ. ತನ್ನ ಮಗನು ದುಶ್ಚಟಗಳಿಗೆ ಅಂಟಿಕೊಳ್ಳದೆ ಸನ್ಮಾರ್ಗದಲ್ಲಿ ಸಾಗಿರುವುದನ್ನು ಕಂಡು ಹನುಮಪ್ಪನಿಗೆ ಹಿಡಿಸಲಾರದಷ್ಟು ಸಂತೋಷ. ಇದ್ದರೆ ಇಂಥ ಮಗನೇ ಇರಬೇಕೆಂದು ತನ್ನ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದ. ದೈವದ ಆಟ ಯಾರಿಗೂ ತಿಳಿಯದು. ಗಟ್ಟಿಮುಟ್ಟಾಗಿದ್ದ ಹನುಮಪ್ಪ ಮಾರೀಬೇನೆಗೆ ತುತ್ತಾಗಿ ಸಾವನ್ನಪ್ಪಿಕೊಂಡ. ಹನುಮಪ್ಪ ತನ್ನ ಜೀವನದಲ್ಲಿ ಗಳಿಸಿದ್ದು ಹಣವಲ್ಲ, ಗುಣ. ಅದೇ ತನ್ನ ಮಗನಿಗೆ ಬಳುವಳಿಯಾಗಿದ್ದರೆ ನೆಟ್ಟಗೆಂದು ಆತ ಭಾವಿಸಿರಬೇಕು.

ತಂದೆ ತೀರಿಕೊಂಡಾಗ ಕರಿಯಪ್ಪ ನಿರುದ್ಯೋಗಿ. ಸಂಸಾರದ ಭಾರ ಹೆಗಲೇರಿದಾಗಲೇ ಹಣದ ಮಹತ್ವ ತಿಳಿಯುತ್ತದೆ. ದುಡಿಯದೆ ಮನೆ ಸಾಗಲಾರದೆಂದು ತಿಳಿದ ಆತನು ಹತ್ತಿಯ ಗಿರಣಿಯಲ್ಲೊಂದು ಕೆಲಸ ಹಿಡಿದ. ಕೈಗೆ ಬರುತ್ತಿದ್ದುದು ಅಲ್ಪ ಆದಾಯ, ಖರ್ಚಿನ ದಾರಿ ಹತ್ತಾರು.

ಹನುಮಪ್ಪ ಜೀವಂತ ಇದ್ದಾಗ ಕೆಲಸ ಮಾಡಿ ದುಡಿತದಿಂದ ನಾಲ್ಕು ದುಡ್ಡು ಗಳಿಸಿ ಹೇಗೋ ಸಂಸಾರ ಸಾಗಿಸುತ್ತಿದ್ದ. ಮೊದಲಿನಿಂದಲೂ ವ್ಯವಹಾರದ ಗೋಜಿಗೆ ಹೋದವನೇ ಅಲ್ಲ ಕರಿಯಪ್ಪ. ಈಗ ಅವನಿಗೆ ಹೊಸ ಅನುಭವ. ಮನೆಯಲ್ಲಿ ತಾಯಿ, ತಾನು ಇಬ್ಬರೇ ಇದ್ದರೂ ಅವೆರಡು ಹೊಟ್ಟೆಗಾದರೂ ಅನ್ನ ಬೇಕಲ್ಲ! ಒಂದು ಉಪ್ಪು ಇಲ್ಲದಿದ್ದರೂ ಮನೆ ನಡೆವಂತಿಲ್ಲ. ಮೇಲಾಗಿ ಮೈಮುಚ್ಚುವಷ್ಟು ಬಟ್ಟೆಬರೆ ಬೇಡವೇ? ಚಿಂತೆ ತಲೆಗೇರಿತು. ಏನು ಮಾಡಬೇಕೋ ತಿಳಿಯದಾಯಿತು. ಸ್ವಲ್ಪವೇ ದಿನಗಳಲ್ಲಿ ಕರಿಯಪ್ಪನ ತಾಯಿ ಒಂದೊಂದೇ ಸಾಮಾಜಿಕ ಸಮಸ್ಯೆಯನ್ನು ಮುಂದಿಡತೊಡಗಿದಳು. ಆ ಸಮಸ್ಯೆಗಳೆಲ್ಲವೂ ನುಂಗಲಾರದ ತುತ್ತೆನಿಸಿದವು ಕರಿಯಪ್ಪನಿಗೆ. ಆತನಿಗೆ ಸಂಸಾರವೇ ದುರ್ಭರವೆನಿಸಿತು. ಹಗಲಿಡೀ ದುಡಿದು ಮನೆಗೆ ಬಂದರೂ ಸುಖವಿಲ್ಲ. ಅಡಚಣೆಯ ಮೇಲೆ ಅಡಚಣೆ; ತೊಂದರೆಯ ಮೇಲೆ ತೊಂದರೆ. ಹೀಗಾಗಿ ಅವನಿಗೆ ಮನೆಗೆ ಬರುವುದೆಂದರೆ ಪ್ರಾಣಕ್ಕೆ ಬಂದಂತೆ ಎನಿಸತೊಡಗಿತು. ಎಲ್ಲಿಯೋ ಚಹಾದಂಗಡಿಯಲ್ಲಿ ಕುಳಿತು ಚಹಾ ಮೇಲಿಂದ ಮೇಲೆ ಕುಡಿದು ಬೀಡಿ ಎಳೆಯುವುದನ್ನು ರೂಢಿಗೆ ತಂದುಕೊಂಡ; ಕ್ಷಣಿಕ ಮನಃಶಾಂತಿ ಪಡೆಯತೋಡಗಿದ.



ಮಗನಲ್ಲಾದ ಈ ಪರಿವರ್ತನೆಯನ್ನು ಕರಿಯನ ತಾಯಿ ಗಮನಿಸದೆ ಇರಲಿಲ್ಲ. ಅವನನ್ನು ದಾರಿಗೆ ತರಲು ಮದುವೆಯೇ ಮದ್ದೆಂದು ಯೋಚಿಸಿದಳು. ಅವನಿಂದಲೇ ತನ್ನ ಸಂತಾನ ಬೆಳೆಯಬೇಕಲ್ಲ – ಎಂಬ ವಾಂಛೆಯೂ ಮುದುಕಿಯ ಆಸಕ್ತಿಗೆ ಮತ್ತೊಂದು ಕಾರಣ. ವರದಕ್ಷಿಣೆ, ವರೋಪಚಾರ ಒಂದೂ ಇಲ್ಲದಂತೆ ಬಡಕುಟುಂಬದ ಹೆಣ್ಣೊಂದನ್ನು ಆಕೆ ಹುಡುಕಿ ತಂದು ಮದುವೆ ಮಾಡಿದಳು. ಜೀವನದಲ್ಲಿ ಯಾವ ಅರ್ಥವೂ ಇಲ್ಲವೆಂದುಕೊಂಡಿದ್ದ ಕರಿಯಪ್ಪನಲ್ಲಿ ಹೊಸ ಆಸೆಯೊಂದು ಮೂಡಿತು. ಮನೆಗೆ ಬಂದ ಲಕ್ಷ್ಮಿಯನ್ನು ನೋಡಿ ಆನಂದಪಡತೊಡಗಿದ. ಕರಿಯಪ್ಪನ ಸಂಸಾರಕ್ಕೆ ಸೇರಿದ ಲಕ್ಷ್ಮಿ ಆತನ ಬಡಬಾಳಿನಲ್ಲಿ ಹೊಸಚೇತನ ಹುಟ್ಟಿಸಿದಳು. ಅವಳು ಬಡತನದಲ್ಲಿಯೇ ಬೆಳೆದು, ಬಡತನವನ್ನೇ ರೂಢಿಸಿಕೊಂಡವಳು. ತನ್ನ ಗಂಡನ ಸಂಸಾರಕ್ಕೆ ಆಧಾರವಾಗಲೆಂದು ಆಕೆ ನಾಲ್ಕಾರು ಮನೆಗಳಲ್ಲಿ ದುಡಿಯತೊಡಗಿದಳು.

ಬದುಕಿನ ರೀತಿಯೇ ವಿಚಿತ್ರ. ಇಷ್ಟು ದಿನ ಜೀವನದಲ್ಲಿ ಅರ್ಥವೇ ಇಲ್ಲವೆಂದರಿತ ಕರಿಯಪ್ಪನಿಗೆ ಲಕ್ಷ್ಮಿ ಜೀವನಕ್ಕೆ ಅರ್ಥವಿದೆಯೆಂಬುದನ್ನು ಹೇಳಿಕೊಟ್ಟಳು. ಕೈಗೆ ಬರುತ್ತಿದ್ದ ನಾಲ್ಕು ಕಾಸಿನಲ್ಲಿ ಒಂದು ಉಳಿಸಿದರೆ ತಾವೂ ಸಿರಿವಂತರಾಗಬಹುದೆಂಬುದನ್ನು ತಿಳಿಸಿಕೊಟ್ಟಳು. ಅದಕ್ಕೆ ಕರಿಯಪ್ಪನೂ ಹೂಂಗೊಟ್ಟ. ಇಬ್ಬರೂ ದುಡಿದು ಸ್ವಲ್ಪ ಹಣ ಕೂಡಿಟ್ಟರು. ಅಲ್ಪ ಕಾಲದಲ್ಲಿಯೇ ಲಕ್ಷ್ಮಿಯ ಬುದ್ಧಿವಂತಿಕೆಯನ್ನು ಕಂಡು ಅತ್ತೆಗೆ ಆನಂದವಾಯಿತು. ತಾನೂ ದುಡ್ಡಿದ್ದವನೆಂಬ ಹಮ್ಮು ಕರಿಯಪ್ಪನಲ್ಲಿ ಹುಟ್ಟಲು ಹೊತ್ತು ಹಿಡಿಯಲಿಲ್ಲ.

ಮುದುಕಿ ತನ್ನ ಮನೆತನ ಬೆಳಗುವ ಮೊಮ್ಮಕ್ಕಳಿಗಾಗಿ ಹಂಬಲಿಸಿ ದೇವರಲ್ಲಿ ಮೊರೆಯಿಟ್ಟಂತೆ ಐದು ವರ್ಷಗಳಲ್ಲಿ ಕರಿಯಪ್ಪ ಎರಡು ಮಕ್ಕಳ ತಂದೆಯಾದ. ದುಡಿದು ಮನೆಗೆ ಬಂದೊಡನೆ ಮಕ್ಕಳ ಮುದ್ದು ನಗೆ, ಹೆಂಡತಿಯ ವಾತ್ಸಲ್ಯದ ಉಪಚಾರ ಪಡೆಯುತ್ತಿದ್ದ ಕರಿಯಪ್ಪನಿಗೆ ಸ್ವರ್ಗ ಮೂರೇ ಗೇಣು ಎನಿಸತೊಡಗಿತು.

ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಸರ್ಕಾರ ಮದ್ಯಪಾನವನ್ನು ನಿಷೇಧಿಸಿದ್ದರೂ ಅಲ್ಪ ಕಾಲದಲ್ಲಿಯೇ ಆ ನಿರ್ಬಂಧ ಸಡಿಲಗೊಂಡು ಕುಡಿಯುವುದು, ಕಚ್ಚುವುದು ಜನತೆಯಲ್ಲಿ ಹೆಚ್ಚಾಯಿತು. ಸುರಾಭಕ್ತರಂತೂ ಕಟ್ಟು ಬಿಚ್ಚಿದ ಗೂಳಿಯಂತೆ ಕುಡಿಕುಡಿದು ಬೀದಿಗಳಲ್ಲಿ ಅಲೆಯತೊಡಗಿದರು. ಅಮಲು ತಲೆಗೇರಿದಾಗ ಅವರಷ್ಟಕ್ಕೆ ಅವರೇ ಇಂದ್ರರು – ದೇವೇಂದ್ರರು. ಅವರ ವರ್ತನೆ ನೋಡುತ್ತಿದ್ದ ಕರಿಯಪ್ಪನಿಗೆ ಅದೊಂದು ತಮಾಷೆ ಎನಿಸಿತು. ಅಳಿಮನ ಇಳಿಯುವುದಕ್ಕೆ ಬಹಳ ವೇಳೆ ಬೇಕಿಲ್ಲ. ಮದ್ಯದ ಮೋಜನ್ನು ಅನುಭವಿಸಿಯೇ ತಿಳಿಯಬೇಕೆಂದು ಗೆಳೆಯರು ಹೇಳತೊಡಗಿದಾಗ ಕರಿಯಪ್ಪನಿಗೂ ಅದರ ರುಚಿ ನೋಡುವ ಆಸೆಯಾಯಿತು.

ಒಮ್ಮೆ ಕರಿಯಪ್ಪ ಗೆಳೆಯನೊಬ್ಬನ ಮದುವೆಗೆ ಹೋದ. ಮದುವೆಯ ಮನೆಯ ಮೇಜವಾನಿಯಲ್ಲಿ ಮುಖ್ಯವಾಗಿದ್ದದ್ದು ಮದ್ಯ – ಮಾಂಸ; ಕರಿಯಪ್ಪನ ಮನದಾಸೆ 'ಒಂದು ಕೈ ನೋಡಿಯೇ ಬಿಡು' ಎಂದು ಹೇಳತೊಡಗಿತು. ಅಂದು ಆತ ಮಾಂಸ ತಿಂದು, ಮದ್ಯ ಸೇವಿಸಿ ತಂದೆಯ ನೀತಿಯ ಕಟ್ಟಳೆಯನ್ನು ಮೆಟ್ಟಿನಿಂತ. ಮೊದಲು ಅನುಭವದಲ್ಲಿಯೇ ಆತ ಸ್ವರ್ಗದ ಹೊಸ್ತಿಲದವರೆಗೆ ಹೋಗಿಬಂದ. ತಲೆಯಲ್ಲಿ ಅಪ್ಸರೆಯರು ಕುಣಿವಂತೆ ಕಾಣಿಸಿತು. ಜಗತ್ತು ರಿಂಗಣವಾಯಿತು. ಕರಿಯಪ್ಪ ತನ್ನನ್ನೇ ತಾ ಮರೆತ, ಮರವಿನ ಮರೆಯಲ್ಲಿಯೇ ಮದ್ಯದ ಮಹತ್ವವನ್ನು ಅರಿತುಕೊಂಡ. ವಾಹವ್ವಾ! ಎಂದು ಬಾಯಿ ಚಪ್ಪರಿಸಿಕೊಂಡ; ಚಪ್ಪಾಳೆ ತಟ್ಟಿ ಚಿಟಿಕಿ ಹೊಡೆದ. ಅಂದಿನಿಂದ ಕರಿಯಪ್ಪನಿಗೆ ಕುಡಿಯುವುದು ರೂಢಿಯಾಯಿತು. ಅದು ಬರಬರುತ್ತ ಚಟವಾಗಿಯೇ ಬೆಳೆಯಿತು. ಅದು ಬೆಳೆಯುವಂತೆ ದಾರಿ ಮಾಡಿಕೊಟ್ಟ ಗೆಳೆಯರೂ ಸಾಕಷ್ಟು. ಅವರೊಡನೆ ಸೇರಿಕೊಂಡು ಪರಮಾತ್ಮನನ್ನು ಹೊಟ್ಟೆಯಲ್ಲಿ ಇಳಿಸಿ ಹರಟುತ್ತ ಕುಳಿತಾಗ ಕರಿಯಪ್ಪನಿಗೆ ಇಹಲೋಕವೇ ಮರೆಯುತ್ತಿತ್ತು. ಈ ವಿಷಯ ಲಕ್ಷ್ಮಿಯ



ಗಮನಕ್ಕೆ ಬರಲು ಬಹಳ ದಿವಸ ಬೇಕಾಗಿಲ್ಲ. ಆಗ ಅವಳು ಅತ್ತು ಕರೆದು ಗೋಳಾಡಿದಳು. ಅವಳ ವೇದನೆಯನ್ನು ಕಂಡ ಕರಿಯಪ್ಪ 'ನಾಳೆಯಿಂದ ಕುಡಿಯುವುದಿಲ್ಲ' ಎಂದು ಅವಳ ನೆತ್ತಿಯ ಮೇಲೆ ಕೈಯಿಟ್ಟು ಭರವಸೆ ನೀಡಿದ; ದೇವರ ಹೆಸರೆತ್ತಿ ಆಣೆ ಮಾಡಿದ. ಆದರೇನು? ಮರುದಿವಸ ಅವನ ಕಾಲುಗಳು ತಾನೆತಾನಾಗಿ ಅವನನ್ನು ಗಡಂಗಿಗೆ ಎಳೆದು ತಂದಿದ್ದವು. ಈ ವಿಷಯ ಗೊತ್ತಾದಾಗ ಅತ್ತೆ, ಸೊಸೆ ಎದೆಯೆದೆ ಬಡಿದುಕೊಂಡು ಅತ್ತರು.

ಆ ಒಂದು ಸಂಬಳ ಕೈಯಲ್ಲಿ ಬಂದ ದಿನ, ಗೆಳೆಯರು ಪುಸಲಾಯಿಸಿ ಕರಿಯಪ್ಪನಿಗೆ ಟೋಪಿ ಹಾಕಿದರು. ಗಡಂಗದಿಂದ ಮನೆಗೆ ಬಂದಾಗ ಕರಿಯಪ್ಪನ ಜೇಬಿನಲ್ಲಿದ್ದುದು ಹತ್ತೇ ಕಾಸು. ವಿಷಯ ಅರ್ಥವಾಯಿತು ಲಕ್ಷ್ಮಿಗೆ. ಅವಳ ಚಿಕ್ಕ ಮಗು ಜ್ವರದಿಂದ ನರಳುತ್ತಿತ್ತು. ಡಾಕ್ಟರರು ಮನೆಯವರೆಗೆ ಬಂದು ಮೈಲಿ ಹಾಕಿ, ನುಂಗಲು ಗುಳಿಗೆ ಕೊಟ್ಟು ಹೋಗಿದ್ದರು. 'ರೋಗ ಸಾಮಾನ್ಯವಾದುದಲ್ಲ; ಪ್ರತಿದಿನ ಮೈಲಿ ಹಾಕಲೇಬೇಕು. ಆದ್ದರಿಂದ ಈ ಪಟ್ಟಿಯಲ್ಲಿ ಬರೆದ ಟ್ಯೂಬುಗಳನ್ನು ಪೇಟೆಯಿಂದ ತರಿಸಿರಿ' ಎಂದು ಕಾಗದವೊಂದನ್ನು ಕೊಟ್ಟು ಹೋಗಿದ್ದರು. ಗಂಡನ ಸಂಬಳ ಬಂದೊಡನೆ ಟ್ಯೂಬು ತಂದರಾಯಿತೆಂದು ನಿರೀಕ್ಷಿಸಿದ ಅವಳಿಗೆ ಗಂಡನ ಅವಸ್ಥೆ ನೋಡಿ ಕುಸಿದು ಬೀಳುವಂತಾಯಿತು. ಮೈ ಸುಡುತ್ತಿದ್ದ ಮಗುವನ್ನು ಗಂಡನ ಕಾಲಮೇಲೆ ಹಾಕಿ 'ನೋಡಿ ಇದು ಸಾಯ್ತಾ ಇದೆ; ಇಂದು ಔಷಧಿ ತಂದು ಹಾಕದಿದ್ರೆ ಸತ್ತೇ ಹೋಗುತ್ತದೆ' ಎಂದಾಗ ಕರಿಯಪ್ಪ 'ಸತ್ತು ಹೋದ್ರೆ ಹೋಗ್ಲಿ' ಎಂದು ತೊದಲಿದ. ಲಕ್ಷ್ಮಿಯ ಹೃದಯ ಕಿವುಚಿದಂತಾಯಿತು. ಮಗುವನ್ನು ಎದೆಗವಚಿಕೊಂಡು ಬಿಕ್ಕಿದಳು ತನ್ನ ದುರದೃಷ್ಟಕ್ಕೆ.

ಮರುದಿನ ಬುದ್ಧಿ ಹಿಡಿತಕ್ಕೆ ಬಂದಾಗ ಕರಿಯಪ್ಪನಿಗೆ ತನ್ನ ಹಿಂದಿನ ದಿನದ ವರ್ತನೆಗಾಗಿ ನಾಚಿಕೆಯಾಗದಿರಲಿಲ್ಲ. 'ಇನ್ಮೇಲೆ ಕುಡಿದರೆ ನಿನ್ನಾಣೆ' ಎಂದು ಎಂದಿನಂತೆ ಹಾಗೆ ಹೆಂಡತಿಗೆ ಭರವಸೆ ನೀಡಿದ. ಪಾಪ, ಲಕ್ಷ್ಮಿ ತಾನು ಉಳಿಸಿ ಬಚ್ಚಿಟ್ಟಿದ್ದ ಇಪ್ಪತ್ತೈದು ರೂಪಾಯಿಗಳನ್ನು ಔಷಧ ತರಲು ಗಂಡನ ಕೈಯಲ್ಲಿತ್ತಳು. ಕೂಡಲೇ ಔಷಧ ಕೊಂಡುತರಲು ಸೆರಗೊಡ್ಡಿ ಬೇಡಿಕೊಂಡಳು. ಕರಿಯಪ್ಪ ಉಸಿರುಗರೆದು ಹೊಸ್ತಿಲು ದಾಟಿದ; ಕೆಲಸ ಮುಗಿದ ಮೇಲೆ, ಸಂಜೆಯ ಹೊತ್ತು ಮನೆಗೆ ಮರಳುವಾಗ ಔಷಧ ಕೊಂಡೊಯ್ಯಬೇಕೆಂದು ಗೇನಿಸುತ್ತ ಕೆಲಸಕ್ಕೆ ಹೋದ. ಕೆಲಸ ಮಾಡುವಾಗಲೆಲ್ಲ ಅವನಿಗೆ ಹೆಂಡದ ವಿಚಾರವೇ ಬರಲಿಲ್ಲ. ಕೆಲಸ ಮುಗಿಸಿ ಮನೆಗೆ ಸಾಗುವುದೇ ತಡ, ಜೇಬಿನಲ್ಲಿ ಝಣಗುಟ್ಟುತ್ತಿದ್ದ ಹಣ ಹೇಗೋ ಏನೋ, ಅವನ ಆತ್ಮಸ್ಥೈರ್ಯವನ್ನು ಸಡಿಲಿಸಿಬಿಟ್ಟಿತು. ಬಿಟ್ಟೆಹನೆಂದರೂ ಬಿಡಲಿಲ್ಲ ಆ ಮಾಯೆ. ಒಮ್ಮೆ ಜಾರಿದವನು ಕೆಳಗೆ ಜಾರುತ್ತಾನೆ, ಮೇಲೇರಿ ಬರುವುದು ಅವನಿಂದ ಸಾಧ್ಯವಿಲ್ಲ. ದಿನಗಳೆದಂತೆ ಕರಿಯಪ್ಪ ಅಧಃಪತನದತ್ತಲೇ ಸಾಗಿದ. ಲಕ್ಷ್ಮಿ ಕಷ್ಟಪಟ್ಟು ಕೂಡಿಸಿದ ಹಣ ಕರಗಿಹೋಯಿತು. ಕೈಯಲ್ಲಿದ್ದ ಎರಡು ಚಿನ್ನದ ಬಳೆ ಕೈಬಿಟ್ಟವು. ಮನೆಮಂದಿಗೆಲ್ಲ ಕಣ್ಣೀರೇ ಕೂಳಾಯಿತು. ಮಕ್ಕಳು ಮುಕ್ಕು ಜೋಳ ಕಾಣದೆ ವಿಲಿವಿಲಿ ಒದ್ದಾಡಿದವು. ಲಕ್ಷ್ಮಿಗೆ ಕಣ್ಣೀರು ಹಾಕುವುದೊಂದೇ ದುಡಿಮೆಯಾಯಿತು. 'ಇದನ್ನೆಲ್ಲ ನೋಡಲಾರೆ' ಎಂದುಕೊಂಡು ಮುದುಕಿ ಪರಲೋಕ ಸೇರಿದಳು.

ಕರಿಯಪ್ಪನನ್ನು ಕೇಳುವವರೇ ಇರಲಿಲ್ಲ. ಲಕ್ಷ್ಮಿ ತನ್ನ ಅಧಿಕಾರವನ್ನು ಎಂದೋ ಕಳೆದುಕೊಂಡಿದ್ದಳು. ಕರಿಯಪ್ಪನ ದುಡಿತದ ಒಂದು ಕಾಸೂ ಸಂಸಾರಕ್ಕೆ ಸೇರುತ್ತಿರಲಿಲ್ಲ. ಬಂದಷ್ಟನ್ನು ಕುಡಿತಕ್ಕೆ ಹಾಕಿ ದುಂದು ಮಾಡಿಬಿಡುತ್ತಿದ್ದ. ಲಕ್ಷ್ಮಿ ದುಡಿದದ್ದು ಒಪ್ಪೊತ್ತಿನ ಊಟಕ್ಕೂ ಸಾಲುತ್ತಿರಲಿಲ್ಲ. ಸಣ್ಣ ಮಕ್ಕಳು ಅರೆಹೊಟ್ಟೆಯಿಂದ ಸಂಕಟಪಡುತ್ತಿದ್ದವು. ಕೊನೆಯ ಮಗುವಂತೂ ತೀರ ಚಿಕ್ಕದು. ಹಸಿವೆಯನ್ನು ತಾಳಲಾರದೆ ಅನ್ಯರ ಮನೆಯ ಮುಂದೆ ನಿಂತು ಅಳುತ್ತಿತ್ತು. ಈ ಜಗತ್ತಿನಲ್ಲಿ ಇಲ್ಲ ಅಂದರೆ ಕೊಡುವವರಾರು? ಹೀಗೆ ಮಕ್ಕಳು ಹೊಟ್ಟೆಗೆ ಹಿಟ್ಟಿಲ್ಲದೆ



ಬಳಲುತ್ತಿರುವುದನ್ನು ಕಂಡು ತನ್ನೂಟವನ್ನೇ ನಿಲ್ಲಿಸುತ್ತಿದ್ದಳು ಲಕ್ಷ್ಮಿ. ಇದ್ದು ಬಿದ್ದುದನ್ನೆಲ್ಲ ಬಳಿದು ಮಕ್ಕಳ ಒಡಲಿಗೆ ಅಲ್ಪಸ್ವಲ್ಪ ಹಾಕಿ ಮುದುಡಿಕೊಂಡು ಮಲಗುತ್ತಿದ್ದಳು.

ಆದರೆ ಕರಿಯಪ್ಪನಿಗೆ ಇದರ ಕಡೆ ಗಮನವೇ ಇರುತ್ತಿರಲಿಲ್ಲ. ಅವನಿಗೆ ಪ್ರಪಂಚದಲ್ಲಿ ಬೇಕಾಗಿದ್ದುದು ಸುರೆಯೊಂದೇ. ಈಗೀಗ ಆತ ಮನೆಗೆ ಬರುತ್ತಿದ್ದುದೂ ಕಡಿಮೆಯಾಗಿತ್ತು. ಲಕ್ಷ್ಮಿ ಅವನನ್ನು ಹುಡುಕಿಕೊಂಡು ಹೋದಾಗ ಅವನು ಚರಂಡಿಯ ಬಳಿ ಬಿದ್ದಿರುತ್ತಿದ್ದನು. ಅವಳು ಕಣ್ಣೀರು ಹಾಕುತ್ತಾ ಎಬ್ಬಿಸಿಕೊಂಡು, ಕೈಹಿಡಿದು ಮನೆಗೆ ತಂದು ಉಪಚರಿಸುತ್ತಿದ್ದಳು. ಕುಡಿತ ಅಪಮಾನಕರವೆಂದು ತಿಳಿಸಿ, ಇನ್ನು ಮೇಲೆ ಕುಡಿಯಕೂಡದೆಂದು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದಳು. ಅವಳ ಪಾಲಿಗೆ ಅದೆಲ್ಲ ಅರಣ್ಯರೋದನವಾಗಿ ಪರಿಣಮಿಸಿತು.

ಸುರಪಾನ ಕ್ಷಣಿಕ ಸುಖನೀಡುವುದಾದರೂ ಅದು ದೇಹವನ್ನೇ ಕೊರೆಯತೊಡಗಿ ಕುಡುಕನನ್ನು ಸಾವಿನ ಅಂಚಿನಲ್ಲಿ ನಿಲ್ಲಿಸುತ್ತದೆ. ಕರಿಯಪ್ಪನ ಸ್ಥಿತಿಯೂ ಹಾಗೆಯೇ ಆಯಿತು. ಕರಿಯಪ್ಪ ಕುಡಿದದ್ದು ಇಂತಹದೇ ಎಂದು ಹೇಳುವುದು ಕಷ್ಟ. ಆತ ಮದ್ಯ ಕುಡಿದ; ಈಚಲ ಹೀರಿದ; ಇದು ಯಾವುದೂ ಇಲ್ಲವಾದಾಗ ಸ್ಪಿರಿಟ್ ಕುಡಿದ. ಕೊನೆಕೊನೆಗೆ ಬಟ್ಟಿಸೆರೆಗೆ ಜೋತು ಬಿದ್ದ. ಮಗಿಮಗಿ ಕುಡಿದರೂ ಅವನ ಚಟ ತೀರಲಿಲ್ಲ. ಕುಡಿದಷ್ಟೂ ಕುಡಿಯಬೇಕೆನಿಸಿತು. ಕುಡಿದ ಮತ್ತೂ ಕುಡಿದ. ಇದರ ಪರಿಣಾಮದಿಂದ ಅವನ ಪುಪ್ಪುಸ ಪೂರ್ತಿ ಕೆಟ್ಟುಹೋಗಿತ್ತು. ಕೈಕಾಲು ಶಕ್ತಿಹೀನವಾಗಿ ನಡುಗುತ್ತಿದ್ದವು. ಕೆದರಿದ ತಲೆ, ಹರಕು ಅಂಗಿ, ಜೊಲ್ಲು ಸುರಿವ ಬಾಯಿ, ಇಂಗಿದ ಕಣ್ಣು, ಪಕ್ಕೆಯ ಎಲುಬು ಎದ್ದುಕಾಣುವ ದೇಹ. ಅಷ್ಟಷ್ಟಕ್ಕೆ ಸಿಟ್ಟಿಗೇಳುವ ಸ್ವಭಾವ. ಈ ಸ್ಥಿತಿಯಲ್ಲಿ ಜೋಲಿಹೊಡೆಯುತ್ತ ಸಾಗುವ ಕರಿಯಪ್ಪನ ಸಮೀಪಕ್ಕೆ ಹೋದಾಗ ಗೊಮ್ಮ ಎನ್ನುವ ದುರ್ವಾಸನೆ. ಜನರು ಇವನೊಡನೆ ಕೂಡ್ರುವದಕ್ಕೂ ಹಿಂಜರಿಯುತ್ತಿದ್ದರು. ಒಂದು ದಿನ, ಕರಿಯಪ್ಪ ಗಿರಣಿಗೆ ಬಂದೊಡನೆ ಯಾವನೋ ಒಬ್ಬ ಚುಚ್ಚುಮಾತು ಆಡಿದ. ಕರಿಯಪ್ಪನ ಪಿತ್ತ ನೆತ್ತಿಗೇರಿತು; ಬಾಯಿಗೆ ಬಂದಂತೆ ಒದರಾಡತೊಡಗಿದ. ಅಲ್ಲಿದ್ದವರಿಗೆ ಅದು ಮೋಜು ಎನಿಸಿತು. ಎಲ್ಲರೂ ಕೂಡಿದರು; ಕರಿಯಪ್ಪನ ಮೇಲೇರಿ ಹೋದರು. ಗಲಾಟೆ ವಿಕೋಪಕ್ಕೆ ಏರಿತು. 'ಕೈಲಾಗದವನು ಮೈಯೆಲ್ಲ ಪರಿದುಕೊಂಡ' ಎನ್ನುವ ಗಾದೆಯಂತೆ ಕರಿಯಪ್ಪ ಸರ್ವರನ್ನೂ ಬಡಿಯಲಿಕ್ಕೆ ಹೋದ, ಗಿರಣಿಯ ಒಡೆಯ ಕರಿಯಪ್ಪನ ಮೇಲೆ ಸಿಟ್ಟಾಗಿ ಅವನನ್ನು ಕೆಲಸದಿಂದ ತೆಗೆದು ಹಾಕಿದ. ಬಿದ್ದವರ ಮೇಲೊಂದು ಕಲ್ಲು ಎಂಬಂತೆ ಮೊದಲೆ ಧೃತಿಗೆಟ್ಟು ಕುಳಿತಿದ್ದ ಲಕ್ಷ್ಮಿಗೆ ತನ್ನ ಗಂಡನ ನೌಕರಿ ಹೋಯಿತೆಂದು ತಿಳಿದಾಗ ಬರಸಿಡಿಲು ಬಡಿದಂತಾಯಿತು.

ಇದ್ದ ಕೆಲಸ ಹೋಯಿತಲ್ಲ – ಎಂದು ಕರಿಯಪ್ಪನಿಗೆ ದುಃಖವೆನಿಸಿತು. ಅದು ಕೇವಲ ಕೆಲವು ಕ್ಷಣಮಾತ್ರ! ಹೆಂಡತಿ ಗೋಳಿಡುವುದನ್ನು ನೋಡುವ ತಾಳ್ಮೆಯೂ ಅವನಲ್ಲಿ ಉಳಿದಿರಲಿಲ್ಲ. ಕರಿಯಪ್ಪ ಕಾಲು ಎಳೆದುಕೊಂಡು ಹೊರಗೆ ನಡೆದ. ಗಂಡ ಗಡಂಗಕ್ಕೆ ಹೊರಟನೆಂದು ಲಕ್ಷ್ಮಿಗೆ ಸೂಕ್ಷ್ಮವಾಗಿ ಹೊಳೆಯಿತು. ಲಕ್ಷ್ಮಿ ಓಡಿಹೋಗಿ ಅವನ ಕಾಲು ಹಿಡಿದುಕೊಂಡಳು. 'ಅಲ್ಲಿಗೆ ಹೋಗ್ಬೇಡಿ; ಅಲ್ಲಿಗೆ ಹೋಗಿಯೇ ನಮ್ಮ ಜೀವನ ಈ ಗತಿಗೆ ಬಂದಿದೆ' ಎಂದು ಗೋಗರೆದಳು. ಕೇಳುವವರ್‍ಯಾರು? ಸುರಾದೇವಿ ಕರಿಯಪ್ಪನನ್ನು ಕೈಮಾಡಿ ಕರೆಯುತ್ತಿದ್ದಳು. ಜೇಬು ನೋಡಿಕೊಂಡ; ಅದು ಬರಿದಾಗಿತ್ತು. ಹಣ ಕೊಡು ಎಂದು ಲಕ್ಷ್ಮಿಯನ್ನು ಕೇಳಿದ. ಲಕ್ಷ್ಮಿಯ ಕೈಯಲ್ಲಿ ಕಾಸೊಂದೂ ಇರಲಿಲ್ಲ. ಮುಂದೇನೂ ತೋಚದೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಕರಿಯಪ್ಪ ಹಣಕ್ಕಾಗಿ ಮನೆಯನ್ನೆಲ್ಲ ಹುಡುಕಿದ; ಕಾಸೂ ಸಿಗಲಿಲ್ಲ. ಕೈಗೆ ಸಿಕ್ಕ ನಾಲ್ಕು ಪಾತ್ರೆಗಳನ್ನು ಎತ್ತಿಕೊಂಡು ನಡೆದ.

ಮಧ್ಯರಾತ್ರಿಯಾಗಿತ್ತು. ಹಸಿದು ಚಡಪಡಿಸುವ ಚಿಕ್ಕ ಮಕ್ಕಳು ಆಗಲೇ ನಿದ್ರೆ ಹೋಗಿದ್ದವು. ಲಕ್ಷ್ಮಿ ದಿಕ್ಕುಗಾಣದೆ



ಶೂನ್ಯವನ್ನೇ ನಿಟ್ಟಿಸುತ್ತ ಕುಳಿತಿದ್ದಳು. ಒಮ್ಮಿಂದೊಮ್ಮೆಲೇ ಬಾಗಿಲು ಬಡಿದ ಸಪ್ಪಳ ಕೇಳಿಬಂತು; ಎದ್ದು ಹೋಗಿ ಬಾಗಿಲು ತೆರೆದಳು. ಕರಿಯಪ್ಪನನ್ನು ಹೊತ್ತು ತಂದ ನಾಲ್ವರು ನಡೆದ ಸಂಗತಿಯನ್ನು ವಿವರಿಸುತ್ತ "ಗಡಂಗದಿಂದ ಬರುವಾಗ ಕತ್ತಲೆಯಲ್ಲಿ ಕಾಲುಜಾರಿ ಚರಂಡಿಯಲ್ಲಿ ಮುಖ ಕೆಳಗಾಗಿ ಬಿದ್ದಿದ್ದ" ಎಂದು ಹೇಳಿ ಕರಿಯಪ್ಪನನ್ನು ಮನೆಯಲ್ಲಿ ಮಲಗಿಸಿ ಹೋದರು. ಅವನ ಮುಖವೆಲ್ಲ ರಕ್ತಮಯವಾಗಿತ್ತು. ಲಕ್ಷ್ಮಿ 'ಅಯ್ಯೋ' ಎಂದು ಚೀರಿಕೊಂಡು ಗಂಡನ ಮೈಮೇಲೆ ಬಿದ್ದಳು. ಅವನ ಪ್ರಾಣಪಕ್ಷಿ ಯಾವಾಗಲೋ ಹಾರಿಹೋಗಿತ್ತು. ಕರಿಯಪ್ಪ ಮಸಣಕ್ಕೆ ಹೆಣವಾಗಿದ್ದ. ಲಕ್ಷ್ಮಿಯ ಚೀರಾಟವನ್ನು ಕೇಳಿದ ಮಕ್ಕಳು ಎದ್ದು ಕುಳಿತವು; ನೆರೆಹೊರೆಯವರು ಗುಂಪು ಗೂಡಿ ಅವನ ದುರ್ಗತಿಗೆ ಮರುಗಿದರು. ಮಣ್ಣು ಮಾಡಿದರು. ಅದೊಂದು ದಾರುಣ ಕಥೆ.

ಕರಿಯಪ್ಪನಂತೆ ಕುಡಿತಕ್ಕೆ ಒಳಗಾಗಿ ಮನೆಮಾರು ಹಾಳುಮಾಡಿಕೊಂಡು ಸಾವಿಗೀಡಾಗಿ ಸಂಸಾರವನ್ನೇ ಹಾಳುಮಾಡಿಕೊಂಡ ಉದಾಹರಣೆಗಳು ಸಾವಿರಾರು. "ಮದ್ಯಪಾನದ ಚಟ ಮಾನವನನ್ನು ಅಧೋಗತಿಗೆ ಒಯ್ಯುವ ಒಂದು ಸಾಧನವಾಗಿದೆ. ಮದ್ಯಪಾನದಿಂದ ನೈತಿಕ ಅಧಃಪತನ ಆಗುವುದರ ಜೊತೆಗೆ ಸಂಸಾರದಲ್ಲಿ ಕಷ್ಟನಷ್ಟಗಳು ಬೆಳೆದು ಮನಃಶಾಂತಿ ನಶಿಸುತ್ತದೆ" ಎಂದು ಗಾಂಧೀಜಿಯವರು ನಮಗೆಲ್ಲ ಎಚ್ಚರ ಕೊಟ್ಟಿದ್ದಾರೆ. ಕೇಳುವವರಾರು?

– ***ಎಂ.ಎಸ್. ಸುಂಕಾಪುರ***

**ಡಾ। ಎಂ.ಎಸ್. ಸುಂಕಾಪುರ**

ಎಂ.ಎಸ್. ಸುಂಕಾಪುರ ಇವರ ಪೂರ್ಣ ಹೆಸರು ಮರಿಬಸಪ್ಪ ಸಣ್ಣ ಬಸಪ್ಪ ಸುಂಕಾಪುರ. ಇವರು ಕನ್ನಡದ ಪ್ರಸಿದ್ಧ ಹಾಸ್ಯಸಾಹಿತಿಗಳು. ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿರುವರು. ಲಲಿತಪ್ರಬಂಧ, ಜಾನಪದ ಸಂಗ್ರಹ–ಸಂಪಾದನೆ, ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಇವರ ಸಾಧನೆ ಗಮನಾರ್ಹ. ಶ್ರೀಯುತರ ಸಾಹಿತ್ಯ ಸೇವೆಗಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯು ೧೯೮೨ ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ತಲೆಹರಟೆಗಳು, ಗಪ್–ಚಿಪ್, ನಗೆಹೊಗೆ (ಹಾಸ್ಯಪ್ರಬಂಧಗಳು), ಕನ್ನಡ ಸಾಹಿತ್ಯದಲ್ಲಿ ಹಾಸ್ಯ (ಸಂಶೋಧನ ಪ್ರಬಂಧ), ಜೀವನ ಜೋಕಾಲಿ ಸಂಪುಟಗಳು (ಜಾನಪದ ಸಾಹಿತ್ಯ) ಇವು ಇವರ ಪ್ರಮುಖ ಕೃತಿಗಳು.

- 'ಮದ್ಯಪಾನದಿಂದಾಗಿ ನೈತಿಕ ಅಧಃಪತನವಾಗುವುದರ ಜೊತೆಗೆ ಸಂಸಾರದಲ್ಲಿ ಕಷ್ಟನಷ್ಟಗಳು ಹೆಚ್ಚಾಗಿ ಮನಃಶಾಂತಿ ನಶಿಸುತ್ತದೆ' ಈ ಹೇಳಿಕೆಯನ್ನು ಮೇಲಿನ ಕಥೆಯ ಆಧಾರದಲ್ಲಿ ಸಮರ್ಥಿಸಿ ಲೇಖನವನ್ನು ತಯಾರಿಸಿರಿ.
- 'ಸಂಸಾರ ನೌಕೆಯನ್ನು ರಕ್ಷಿಸಲು ಕರಿಯಪ್ಪನ ಮಡದಿ ಲಕ್ಷ್ಮಿಯು ಭಗೀರಥ ಪ್ರಯತ್ನ ಮಾಡಿದಳು' ಈ ಹೇಳಿಕೆಯು ಸರಿಯೇ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.
- ಮದ್ಯಪಾನಿಗಳನ್ನು ಸಮಾಜವು ಯಾವ ರೀತಿಯಲ್ಲಿ ಕಾಣುತ್ತದೆ? ನಿಮ್ಮ ಅನಿಸಿಕೆಗಳನ್ನು ಟಿಪ್ಪಣಿಯಾಗಿ ಬರೆಯಿರಿ.
- ಮದ್ಯ ಮತ್ತು ಮಾದಕ ವಸ್ತುಗಳಿಂದ ದೂರವಿರಬೇಕಾದ ಅಗತ್ಯವನ್ನು ಬಿಂಬಿಸುವ ಕಥೆ ಅಥವಾ ಕವನವನ್ನು ರಚಿಸಿರಿ.

***

# ಪದಕೋಶ

## ಅ

| | | |
|---|---|---|
| ಅಕ್ಕರೆ | – | ಪ್ರೀತಿ |
| ಅಗಮ್ಯ | – | ಬುದ್ಧಿಗೆ ನಿಲುಕದ, ಹೊಗಲು ಅಸಾಧ್ಯವಾದ |
| ಅಗಾಧ | – | ಆಳವಾದ |
| ಅಗ್ರಾಹ್ಯ | – | ಗ್ರಹಿಸಲಾಗದ |
| ಅಡಚಣೆ | – | ಅಡ್ಡಿ, ತೊಂದರೆ |
| ಅಧಃಪತನ | – | ಕೆಳಗಿಳಿಯುವುದು, ದುರ್ಗತಿಗಿಳಿಯುವುದು |
| ಅಧೋಗತಿ | – | ಅವನತಿ, ದುರ್ಗತಿ |
| ಅನಾಥ | – | ದಿಕ್ಕಿಲ್ಲದ, ಗತಿಯಿಲ್ಲದ |
| ಅನಿಷ್ಟ | – | ಕೇಡು |
| ಅಪ್ರತಿಹತ | – | ತಡೆಯಿಲ್ಲದ |
| ಅಭಿಯೋಗಿಸು | – | ಆಕ್ರಮಿಸು |
| ಅಭಿಶಾಪ | – | ಉಗ್ರಶಾಪ |
| ಅಭೂತಪೂರ್ವ | – | ಹಿಂದೆಂದೂ ಸಂಭವಿಸದೆ ಇರುವ |
| ಅರಿವೆ | – | ಬಟ್ಟೆ |
| ಅವಾಂತರ | – | ಗಂಡಾಂತರ, ಅಪಾಯ |

## ಆ

| | | |
|---|---|---|
| ಆಗ್ರಹ | – | ಒತ್ತಾಯ |
| ಆತಂಕಕಾರಿ | – | ಅಡ್ಡಿಪಡಿಸುವ, ಚಿಂತೆಗೊಳಪಡಿಸುವ |
| ಆನನ | – | ಮುಖ |
| ಆರ್ಜವ | – | ಪ್ರಾಮಾಣಿಕ |
| ಆರೋಗಣೆ | – | ಭೋಜನ |
| ಆರ್ಷೇಯ | – | ಹಿಂದಿನ ಕಾಲದ, ಋಷಿ ಪರಂಪರೆಗೆ ಸೇರಿದ |

## ಇ

| | | |
|---|---|---|
| ಇಂಗಿದ | – | ಒಣಗಿದ, ಹುದುಗಿಕೋದ |
| ಇಕ್ಕೆ | – | ಇರುವ ಸ್ಥಳ |

## ಉ

| | | |
|---|---|---|
| ಉದ್ಘೋಷಿಸು | – | ಘೋಷಿಸು |
| ಉದ್ಯುಕ್ತವಾಗು | – | ತೊಡಗು |
| ಉದ್ಧಾರೋನ್ಮುಖ | – | ಉದ್ಧಾರದ ಕಡೆಗೆ ಮುಖಮಾಡಿದ |
| ಉನ್ಮತ್ತ | – | ಹುಚ್ಚು ಹಿಡಿದವ |
| ಉಪರಿ | – | ಆಮೇಲೆ, ಬಳಿಕ |
| ಉಪಾಸನೆ | – | ಪೂಜೆ |

## ಎ

| | | |
|---|---|---|
| ಎಕಡಮಿಕ್ | – | ಶೈಕ್ಷಣಿಕ |

### ಒ

ಒಡಲೊಳಗೆ – ಶರೀರದೊಳಗೆ, ಆಂತರ್ಯದಲ್ಲಿ
ಒಲುಮೆ – ಪ್ರೀತಿ

### ಕ

ಕಮ್ಮಟ – ಟಂಕಸಾಲೆ, ಕೆಲಸ ಮಾಡುವ ಜಾಗ
ಕಲಾಸಿ – ದೊಡ್ಡ ಭಾರವನ್ನೆತ್ತುವ ಕೆಲಸದವ, ನಾವಿಕ
ಕಾರ್ಪಣ್ಯ – ತೊಂದರೆ, ಉಪಟಳ, ದುಃಖ
ಕಾಷ್ಠ (ಸಂ) – ಕಟ್ಟಿಗೆ (ತ್ಭ)
ಕಿವುಚು – ಹಿಸುಕು, ಹಿಂಡು
ಕುಶಲ – ಕ್ಷೇಮ, ಸುಖ, ಸೌಖ್ಯ
ಖಂಡಿಸು – ಅಲ್ಲಗಳೆ
ಖಿನ್ನ – ದುಖಿತ, ನೊಂದ

### ಗ

ಗತ್ಯಂತರ – ಬೇರೆ ಉಪಾಯ, ಅನ್ಯಮಾರ್ಗ
ಗಿರಣಿ – ಕಾರ್ಖಾನೆ, ಮಿಲ್ಲು

### ಜ

ಜಾಹೀರು – ಪ್ರಸಿದ್ಧಪಡಿಸುವಿಕೆ, ಪ್ರಕಟಣೆ
ಜೋಲಿಹೊಡೆ – ತೂಗಾಡು, ಹೊಯ್ದಾಡು
ಝುಣಗುಡು – ಶಬ್ದಮಾಡು

### ತ

ತಡಿಕೆ – ಬಿದಿರಿನ ತಟ್ಟಿ, ಮರೆ
ತರಾತುರಿ – ಅವಸರ
ತಲೆಮಾರು – ಪೀಳಿಗೆ
ತವಕಿಸು – ಆತುರಪಡು
ತಾಜಾ – ಹೊಚ್ಚಹೊಸ
ತಿರಿ – ಯಾಚಿಸು
ತಿಲ – ಎಳ್ಳು
ತುಡುಕು – ಎರಗು, ಹಾರು
ತುರೀಯಾವಸ್ಥೆ – ಉನ್ನತ ಸ್ಥಿತಿ
ತೇಜ – ಹೊಳಪು, ಕಾಂತಿ

### ದ

ದಾರುಣ – ಭಯಂಕರ, ನಿರ್ದಯ
ದಿಕ್ಕುಗಾಣದ – ದಾರಿಕಾಣದ, ಮುಂದೇನು ಮಾಡಬೇಕೆಂದು ತಿಳಿಯದ
ದಿಗ್ಭ್ರಾಂತ – ದಿಕ್ಕುತೋಚದ, ಗಾಬರಿಗೊಂಡ
ದುರ್ಭರ – ತಾಳಲಾಗದ
ದ್ವಾರಾ – ಮೂಲಕ
ಧೃತಿಗೆಡು – ಧೈರ್ಯವನ್ನು ಕಳೆದುಕೊಳ್ಳು

**ನ**

| | | |
|---|---|---|
| ನಿಕ್ಷಿಪ್ತ | – | ಅಡಗಿದ, ಇರಿಸಿದ |
| ನಿರ್ಗತಿಕ | – | ದಿಕ್ಕಿಲ್ಲದವ, ಕಡುಬಡವ |
| ನೀರಡಸಿ | – | ಬಾಯಾರಿಕೆಯಾಗಿ |

**ಪ**

| | | |
|---|---|---|
| ಪಟ್ಟಭದ್ರ ಹಿತಾಸಕ್ತಿ | – | ತಮ್ಮ ಸ್ವಾರ್ಥ ಸಾಧನೆಗಾಗಿ ಪಟ್ಟುಬಿಡದಿರುವಿಕೆ |
| ಪರನಾಲಿ | – | ಭಯ, ಹೆದರಿಕೆ |
| ಪಾಡು | – | ಸ್ಥಿತಿ, ಅವಸ್ಥೆ |
| ಪಿಡಿದಂಗೆ | – | ಹಿಡಿದವನಿಗೆ |
| ಪುಕಾರು | – | ನಿಂದೆ, ದೂರು, ವಾರ್ತೆ |
| ಪುಪ್ಪುಸ | – | ಶ್ವಾಸಕೋಶ |
| ಪುಸಲಾಯಿಸು | – | ಸವಿಮಾತುಗಳಿಂದ ಮನವೊಲಿಸು |

**ಬ**

| | | |
|---|---|---|
| ಬಳುವಳಿ | – | ಕೊಡುಗೆ, ಉಡುಗೊರೆ |
| ಬಿಡಿಗಾಸು | – | ಚಿಲ್ಲರೆ ಹಣ |
| ಬೆಚ್ಚಿಬೀಳು | – | ಹೆದರು |
| ಬೆನ್ನೀರು | – | ಬಿಸಿನೀರು |
| ಬಂಡುನುಡಿ | – | ಶುಷ್ಕನುಡಿ, ಕ್ಷುಲ್ಲಕ ಮಾತು |
| ಭಂಗಿ | – | ಅಮಲೇರಿಸುವ ಒಂದು ಪದಾರ್ಥ, ದೇಹದ ನಿಲುವು |
| ಭವ | – | ಜೀವಿತ ಕಾಲ, ಹುಟ್ಟು |

**ಮ**

| | | |
|---|---|---|
| ಮರ್ತ್ಯಲೋಕ | – | ಭೂಲೋಕ |
| ಮಸಣ | – | ಶ್ಮಶಾನ |
| ಮಿಥ್ಯೆ | – | ಸುಳ್ಳು |
| ಮುಕ್ತವಾದ | – | ಬಿಡುಗಡೆಹೊಂದಿದ |
| ಮೃಗಜಲ | – | ಬಿಸಿಲುಗುದುರೆ |
| ಮೇಜವಾನಿ | – | ಸತ್ಕಾರ, ಆತಿಥ್ಯ |
| ಮೈಲಿಹಾಕು | – | ಚುಚ್ಚುಮದ್ದು ಕೊಡು |

**ಯ**

| | | |
|---|---|---|
| ಯಃಕಶ್ಚಿತ್ | – | ಯಾವನೋ ಒಬ್ಬ |

**ರ**

| | | |
|---|---|---|
| ರಿಂಗಣ | – | ಕುಣಿತ, ಚಟುವಟಿಕೆ |
| ರೂಢ | – | ಪದ್ಧತಿಯಾದ |
| ರೂಢಿಸಿಕೊಳ್ಳು | – | ಹೊಂದಿಸಿಕೊಳ್ಳು |

**ಲ**

| | | |
|---|---|---|
| ಲಗಳೆ | – | ನೀರು ಮೊದಲಾದ ದ್ರವ ಪದಾರ್ಥಗಳನ್ನು ತುಂಬುವ ದೊಡ್ಡ ಚರ್ಮದ ಚೀಲ |
| ಲಜ್ಜಾಸ್ಪದ | – | ನಾಚಿಕೆಗೆ ಕಾರಣವಾದ |

### ವ

| | |
|---|---|
| ವರ್ಜನೆ | – ಬಿಡುವಿಕೆ |
| ವರ್ಧಿಸು | – ಅಭಿವೃದ್ಧಿಯಾಗು, ಹೆಚ್ಚಾಗು |
| ವಾಂಛೆ | – ಬಯಕೆ, ಅಪೇಕ್ಷೆ |
| ವಿಪತ್ತು | – ಕೇಡು, ಆಪತ್ತು |
| ವೇದನೆ | – ನೋವು |
| ವ್ಯಸನ | – ಚಟ, ಕೆಟ್ಟ ಅಭ್ಯಾಸ |
| ವ್ಯಾಖ್ಯೆ | – ವಿವರಣೆ |

### ಶ

| | |
|---|---|
| ಶ್ಯಾಮ (ಸಂ) | – ಶಾಮ (ತ್ಭ) |
| ಶಾಮಲ | – ಹಸಿರು |
| ಶಿವಪಥ | – ಒಳ್ಳೆಯ ಮಾರ್ಗ, ಶುಭಕರವಾದ ದಾರಿ |

### ಸ

| | |
|---|---|
| ಸಟ್ಟಾ | – ಜುಗಾರಿ |
| ಸದಾಚಾರಿ | – ಒಳ್ಳೆಯ ನಡತೆಯುಳ್ಳವನು |
| ಸಪ್ತ | – ಏಳು |
| ಸಮನ್ವಯ | – ಹೊಂದಾಣಿಕೆ |
| ಸಿಂದಿ | – ಹೆಂಡ, ಮದ್ಯ |
| ಸಿರಿಗರ | – ಶ್ರೀಮಂತಿಕೆಯ ಗರ್ವ |
| ಸುಭಾಷಿತ | – ಒಳ್ಳೆಯ ಮಾತು, ಹಿತವಚನ |
| ಸುರಿಗೆ | – ಕಠಾರಿ |
| ಸುರೆ | – ಮದ್ಯ |
| ಸೂಕ್ತ | – ಯೋಗ್ಯ, ತಕ್ಕುದಾದ |
| ಸೂರು | – ಮಾಡು |
| ಸೊರಗು | – ಕ್ಷೀಣಗೊಳ್ಳು, ಕಂಗಾಲಾಗು |
| ಸೌಹಾರ್ದ | – ಒಳ್ಳೆಯತನ |
| ಸ್ಥಾವರ | – ಚಲಿಸದೆ ಇರುವ, ಸ್ಥಿರ |

### ಹ

| | |
|---|---|
| ಹಮ್ಮು | – ಅಹಂಕಾರ |
| ಹರದ | – ನಿರುಪಯುಕ್ತ ವಸ್ತು, ವ್ಯಾಪಾರಿ |
| ಹೆಗಲೆಣೆ | – ಸಮಾನ |
| ಹೆಣಗು | – ಶ್ರಮಪಡು |
| ಹೇಯ | – ಕೀಳು, ಬಿಡಲು ಯೋಗ್ಯವಾದ |
| ಹೊಮ್ಮು | – ಹೊರಸೂಸು, ವ್ಯಾಪಿಸು, ಹರಡು |

• • •